(MR. SPEAKER in the Chair.)

CONDOLENCE REFERENCES

***Re*: Demise of Sriyuths B. R. Tambakada, P. Mahadevaiah. B. Singari Gowda**

MR. SPEAKER.—Regarding the reference of condolence, I would like to proceed on a different procedure altogether. So long, the reference used to be made by the Leader of the House and speeches were made in that respect. I looked into the authority and I find the procedure in the House of Commons is a different one altogether. Therefore, the Chair makes a reference and it is carried; no speeches are made. I would, therefore, request the Hon'ble Members to proceed on this line instead of on the old lines of making speeches and taking the time of the House. I would like to know the views of the Hon'ble Members in this respect.

SRI S. NIJALINGAPPA (Chief Minister).—Sir, so far as I know, the procedure just now mentioned by you is in vogue in the Houses of Parliament and in the House of Commons also. Except in very rare cases, the Leader of the House and the Opposition will take part and make very few remarks just pertinent to the subject. I unhesitatingly accept your suggestion.

ಶ್ರೀ ಬಿ. ಕೆ. ಪುಟ್ಟರಾಮಯ್ಯ (ಚೆನ್ನಪಟ್ಟಣ).—ಸ್ವಾಮಿ, ಈ ಸಂದರ್ಭದಲ್ಲಿ, ನಮ್ಮ ಸಹೋದ್ಯೋಗಿಗಳನ್ನು ನಾವು ಕಳೆದುಕೊಂಡಿರುವಾಗ, ಕೊನೆಯ ಪಕ್ಷ ಕೆಲವು ಜನ ಅವರ ಮಿತ್ರರಿಗಾದರೂ ಅವರ ವಿಷಯದಲ್ಲಿರುವ ಗೌರವ ವಿಶ್ವಾಸವನ್ನು ತೋರಿಸುವುದಕ್ಕೆ ಅವಕಾಶ ಕೊಡುವುದು ಸೂಕ್ತವೆಂದು ನನ್ನ ಅಭಿಪ್ರಾಯ.

ಅಧ್ಯಕ್ಷರು.—ನಾನು ಈ ವಿಷಯವನ್ನು ವಿಚಾರ ಮಾಡಿದ್ದೇನೆ. ಗೆಳೆಯರೂ ಮಿತ್ರರೂ ಎಲ್ಲರಿಗೂ ಇದ್ದಾರೆ. ಶ್ರೀ ತಂಬಾಕಡ್ ಅವರಿಗೂ ಇದ್ದಾರೆ, ಸಿಂಗ್ರಿಗೌಡರಿಗೂ ಇದ್ದಾರೆ, ಮಹದೇವಯ್ಯನವರಿಗೂ ಇದ್ದಾರೆ...........

ಶ್ರೀ ಟಿ. ಮರಿಯಪ್ಪ (ಹಣಕಾಸಿನ ಇಲಾಖೆಯ ಮಂತ್ರಿಗಳು).—Solemnity ಹೋಗಿಬಿಡುತ್ತದೆ, ಹೆಚ್ಚು ಮಾತನಾಡಿದರೆ.

ಅಧ್ಯಕ್ಷರು.—ಹೌದು. ನಮ್ಮ ಸಂತಾಪ ಸೂಚಿಸುವಾಗ ಭಾಷಣಗಳನ್ನು ಮಾಡುವುದಕ್ಕೆ ಮನಸ್ಸು ಬರುತ್ತದೆ. ಆದರೆ ಲೋಕಸಭೆಯಲ್ಲಿಯೂ ನಾನು ಹೇಳಿದ ಪದ್ಧತಿಯೇ ರೂಢಿಯಲ್ಲಿದೆ. ಹೌಸ್ ಆಫ್ ಕಾಮನ್ಸ್ನಲ್ಲಿಯೂ ಇದೇ ರೂಢಿಯಿದೆ. ಒಬ್ಬರಿಗೆ ಮಾತನಾಡಲು ಅವಕಾಶ ಕೊಟ್ಟರೆ ಅದು ಬೆಳೆಯುತ್ತಾ ಹೋಗುತ್ತದೆ. ಆದಕಾರಣ ನಾನು ಹೇಳಿದುದಕ್ಕೆ ಮಾನ್ಯ ಸದಸ್ಯರು ಒಪ್ಪಿಕೊಳ್ಳುತ್ತಾರೆಂದು ನಂಬುತ್ತೇನೆ.

I regret to inform the House of the death of Sriyuts Tambakada Basavannappa Ramappa, P. Mahadevaiya and B. Singri Gowda, members of this Assembly and I desire on behalf of the House to express our sense of the loss we have sustained and our sympathy with the relatives of the Hon'ble Members.

I request the Hon'ble Members to stand in silence for two minutes.

(The House stood in silence for two minutes)

MR. SPEAKER.—The Condolence references are carried. The sentiments of the members will be conveyed to the members of the bereaved families.

BUDGET FOR 1957-58—GENERAL DISCUSSION—*(Continued)*.

ಶ್ರೀಮತಿ ರತ್ನಮ್ಮ (ಶಿವಮೊಗ್ಗ). ಅಧ್ಯಕ್ಷರೆ, ನೂತನ ರಾಜ್ಯದ ಪ್ರಥಮ ಆಯವ್ಯಯದ ಅಂದಾಜು ಪಟ್ಟಿಯನ್ನು ಸ್ವಾಗತಿಸಲು ನಾನು ಬಹಳ ಹೆಮ್ಮೆಪಡುತ್ತೇನೆ. ಇಂಥ ಪ್ರಗತಿದಾಯಕವಾದ ಬಡ್ಜೆಟ್ಟನ್ನು ತಯಾರಿಸಿ ಈ ಸಭೆಯ ಮುಂದೆ ಮಂಡಿಸಿರುವ ಮಾನ್ಯ ಅರ್ಥಸಚಿವರು ಅಭಿನಂದನಾರ್ಹರು. ಇದನ್ನು ವಿಮರ್ಶಿಸುವಾಗ ವಾಸ್ತವಾಂಶಗಳಿಗೆ ಗಮನಕೊಡಬೇಕು. ಸಣ್ಣ ರಾಜ್ಯವಾಗಿದ್ದುದು ವಿಶಾಲ ರಾಜ್ಯವಾಯಿತು. ಮದರಾಸು, ಹೈದರಾಬಾದು, ಬೊಂಬಾಯಿ ಪ್ರಾಂತಗಳಲ್ಲಿದ್ದ ಕನ್ನಡ ಪ್ರದೇಶಗಳೂ ಕೊಡಗೂ ಸೇರಿ ನಮ್ಮ ರಾಜ್ಯ ವಿಶಾಲ ಪ್ರಾಂತವಾಯಿತು. ಕನ್ನಡಿಗರ ಬಹುಕಾಲದ ಕನಸು ನನಸಾಗಿ ಕರ್ಣಾಟಕ ಪ್ರಾಂತವಾಯಿತು. ಇದಕ್ಕೆ ಮುಂಚೆ, ಎಂದರೆ, ಈ ರಾಜ್ಯಕ್ಕೆ ಆ ಕನ್ನಡ ಪ್ರದೇಶಗಳು ಸೇರುವುದಕ್ಕೆ ಮುಂಚೆ, ಅವು ಬೇರೆ ಬೇರೆ ರಾಜ್ಯಗಳಿಗೆ ಸೇರಿದ್ದು ಕನ್ನಡ ಪ್ರದೇಶಗಳಲ್ಲಿ ಎಷ್ಟುಮಟ್ಟಿಗೆ ರಾಷ್ಟ್ರಾಭಿವೃದ್ಧಿಯಾಗಬೇಕಾಗಿತ್ತೋ ಅಷ್ಟುಮಟ್ಟಿಗೆ ಆಗಿರಲಿಲ್ಲ. ಈ ಪ್ರದೇಶಗಳನ್ನು ಸವತಿಯ ಮಕ್ಕಳಂತೆ ಕಂಡು, ರಾಷ್ಟ್ರಾಭ್ಯುದಯ ಕೆಲಸಗಳಿಗೆ ಸಾಕಷ್ಟು ಗಮನ ಕೊಡದೆ ಆ ಪ್ರದೇಶಗಳು ಹಿಂದುಳಿಯುವುದಕ್ಕೆ ಅವಕಾಶವಾಯಿತು. ಅಲ್ಲಿನ ಜನತೆ ನಮ್ಮೊಡನೆ ಸೇರಲು ಮನಸ್ಸು ಮಾಡಿ ನಮ್ಮ ಕಡೆ ಆಶಾಜ್ಯೋತಿಯಿಂದ ನೋಡುತ್ತಿರುವಾಗ ಅಲ್ಲಿ ರಾಷ್ಟ್ರಾಭಿವೃದ್ಧಿ ಕಾರ್ಯಗಳಿಗೆ ಕೋಟ್ಯಾಂತರ ರೂಪಾಯಿ ಖರ್ಚಾದರೂ ಸಹ ಮಾಡುವುದು ನಮ್ಮೆಲ್ಲರ ಪವಿತ್ರ ಕರ್ತವ್ಯವಾಗಿದೆ. ಈ ಪವಿತ್ರ ಕರ್ತವ್ಯವನ್ನು ಗಮನದಲ್ಲಿಟ್ಟುಕೊಂಡು ನಮ್ಮ ಅರ್ಥಸಚಿವರು ಈ ಬಡ್ಜೆಟ್ಟನ್ನು ತಯಾರುಮಾಡಿ ನಮ್ಮ ಮುಂದಿಟ್ಟಿರು

ವುದಕ್ಕಾಗಿ ಅವರನ್ನು ಅಭಿನಂದಿಸಬೇಕಾಗಿದೆ. ಅಭಿವೃದ್ಧಿ ಕೆಲಸಗಳಿಗಾಗಿ ರಾಜ್ಯದ ಸಾಮಾನ್ಯ ವರಮಾನದಲ್ಲಿ ಶೇಕಡ 71ರಷ್ಟು ಹಣವನ್ನು ಮೀಸಲಾಗಿಟ್ಟಿದ್ದಾರೆ. ಹಾಗೆಯೇ ಬಂಡವಾಳ ಆಯವ್ಯಯ ಪಟ್ಟಿಯನ್ನು ನೋಡಿದರೆ, ಸುಮಾರು 22 ಕೋಟಿ ರೂಪಾಯಿಗಳನ್ನು ನೀರಾವರಿ, ಸಿವಿಲ್ ಕಾಮಗಾರಿಗಳು, ವಿದ್ಯುಚ್ಛಕ್ತಿ ಕೈಗಾರಿಕೆ ಇತ್ಯಾದಿ ಅಭಿವೃದ್ಧಿ ಕಾರ್ಯಗಳಿಗೆ ಒದಗಿಸಿದ್ದಾರೆ. ವಾಸ್ತವಾಂಶ ಹೀಗಿರುವಾಗ ವಿರೋಧ ಪಕ್ಷದ ಸದಸ್ಯರು 'ಏನೇ ಬರಲಿ ಟೀಕೆ ಇರಲಿ' ಎಂಬ ಉದ್ದೇಶದಿಂದ ಟೀಕೆ ಮಾಡುತ್ತಿದ್ದಾರೆಯೇ ಹೊರತು ನಿರ್ಮಲ ಮನಸ್ಸಿನಿಂದ ಟೀಕೆ ಮಾಡಿಲ್ಲವೆಂದು ಹೇಳಬೇಕಾಗಿದೆ. ಖೋತಾ ಬಡ್ಜೆಟ್ಟಿಗೆ ಕಾರಣವೇನೆಂಬುದನ್ನು ಗಮನಿಸಿದರೆ ಗೊತ್ತಾಗುತ್ತದೆ. ಅಭಿವೃದ್ಧಿ ಯೋಜನೆಗಳಿಗೆ ಹೆಚ್ಚು ಹಣ ಒದಗಿಸಿದ್ದಾರೆ. ಹೊಸ ರಾಜ್ಯ ನಿರ್ಮಾಣವಾಗುವುದರಲ್ಲಿ ಸರ್ಕಾರಿ ನೌಕರರ ಸಂಬಳಸಾರಿಗೆಗಳನ್ನು ಪುನರ್ವಿಮರ್ಶೆ ಮಾಡಬೇಕಾಯಿತು ; ಇದಕ್ಕಾಗಿ ನಾಲ್ಕು ಕೋಟಿ ರೂಪಾಯಿ ಹೆಚ್ಚು ಖರ್ಚು ಬಂತು. ಇದರಲ್ಲಿ ಕೆಲಭಾಗವನ್ನು ಕೇಂದ್ರ ಸರ್ಕಾರ ವಹಿಸಿದರೂ ಕೂಡ ನಮ್ಮ ಸರ್ಕಾರದ ಮೇಲೆ ಬಹು ಭಾಗ ಬಿತ್ತು. ಇನ್ನೊಂದು ವಿಷಯವೇನೆಂದರೆ, ದ್ವಿತೀಯ ಪಂಚವಾರ್ಷಿಕ ಯೋಜನೆಗೆ ಎಂಟೂವರೆ ಕೋಟಿ ರೂಪಾಯಿಗಳನ್ನು ಮೀಸಲಾಗಿಟ್ಟಿದ್ದಾರೆ ; ಸಾಲ ತೀರ್ವೆಗಾಗಿ ಐದು ಕೋಟಿ ರೂಪಾಯಿ ಇಟ್ಟಿದ್ದಾರೆ. ಅಭಿವೃದ್ಧಿ ಯೋಜನೆಗಳ ಜೊತೆಗೆ ಇದೂ ಸೇರಿ ಖೋತ ಬಡ್ಜೆಟ್ ಆಗುವುದಕ್ಕೆ ಕಾರಣವಾಯಿತು ಎಂಬುದನ್ನು ಆ ಮಾನ್ಯ ಸದಸ್ಯರು ಗಮನಿಸಿದ್ದರೆ ಖಂಡಿತವಾಗಿ ಅವರು ಈ ರೀತಿ ಟೀಕೆ ಮಾಡುತ್ತಿರಲಿಲ್ಲ. ಆಯವ್ಯಯವನ್ನು ಸರಿತೂಗಿಸಬೇಕೆಂಬ ಯೋಚನೆಯೊಂದೇ ಇದ್ದಿದ್ದರೆ, ಅಭಿವೃದ್ಧಿ ಕಾರ್ಯಗಳಿಗೆ ಕಡಮೆ ಹಣವನ್ನೊದಗಿಸಿ ಜನತೆಯ ಮೇಲೆ ಹೆಚ್ಚಿನ ತೆರಿಗೆಯನ್ನು ಹೇರಿ ಶಹಭಾಸ್‌ಗಿರಿ ಪಡೆಯುತ್ತಿದ್ದರು. ಹೀಗೆ ಮಾಡದೆ ರಾಷ್ಟ್ರಾಭ್ಯುದಯದ ಕಡೆ ಗಮನವಿಟ್ಟು ಈ ಬಡ್ಜೆಟ್ಟನ್ನು ತಯಾರು ಮಾಡಿರುವುದಕ್ಕಾಗಿ ಮಾನ್ಯ ಅರ್ಥ ಸಚಿವರನ್ನು ಅಭಿನಂದಿಸುತ್ತೇನೆ. ಖೋತಾ ಬಡ್ಜೆಟ್ ಆಯಿತೆಂದು ರಾಜ್ಯದ ಹಣಕಾಸಿನ ಭದ್ರತೆಯ ವಿಷಯದಲ್ಲಿ ಯಾರೂ ಹೆದರಬೇಕಾಗಿಲ್ಲ. ಕೋಟ್ಯಾಂತರ ರೂಪಾಯಿಗಳನ್ನು ಬಂಡವಾಳ ಕಾಮಗಾರಿಗಳಿಗೆ ಹಾಕಿದ್ದಾರೆ. ಇವುಗಳಿಂದ ಪ್ರತಿಫಲ ದೊರೆಯುವುದು ಕೊಂಚ ತಡವಾಗಬಹುದು, ಬರುವುದಿಲ್ಲವೆಂದು ಭಾವಿಸಿದರೆ ತಪ್ಪಾಗುತ್ತದೆ. ಹೊಸ ರಾಜ್ಯದ ಅಭಿವೃದ್ಧಿಗೆ ವಿಪುಲವಾದ ಅವಕಾಶವಿದೆ, ಅಪಾರವಾದ ಸಾಧನ ಸಂಪತ್ತು ಹೇರಳವಾಗಿರುವ ಕನ್ನಡನಾಡು ಚಿನ್ನದ ಬೀಡಾಗುವುದಕ್ಕೆ ಬೇಕಾದಷ್ಟು ಅವಕಾಶವಿದೆ.

ಕೊನೆಯದಾಗಿ ಅರ್ಥಸಚಿವರಲ್ಲಿಯೂ ಮಾನ್ಯ ಮುಖ್ಯಮಂತ್ರಿಗಳಲ್ಲಿಯೂ ಒಂದು ವಿಷಯವನ್ನು ನಾನು ಮನವಿ ಮಾಡಿಕೊಳ್ಳಬೇಕಾಗಿದೆ. ನಮ್ಮ ಹೊಸ ರಾಜ್ಯದ ಅಭಿವೃದ್ಧಿಗಾಗಿ ಇನ್ನೂ ಹೆಚ್ಚಿನ ನೆರವು ನೀಡಲು ಪ್ಲಾನಿಂಗ್ ಕಮಿಷನ್, ಫೈನಾನ್ಸ್ ಕಮಿಷನ್ ಮತ್ತು ಕೇಂದ್ರ ಸರ್ಕಾರದ ಮೇಲೆ ಒತ್ತಾಯ ಮಾಡಬೇಕು. ಇಂಡಿಯಾ ಸರ್ಕಾರದವರು ಇತರ ರಾಜ್ಯಗಳಿಗೆ ಎಷ್ಟರಮಟ್ಟಿನ ನೆರವು ನೀಡುತ್ತಿದ್ದಾರೋ ಅಷ್ಟರಮಟ್ಟಿಗೆ ನಮಗೆ ನೆರವು ದೊರಕುತ್ತಿಲ್ಲವೆಂಬುದನ್ನು ಅವರ ಗಮನಕ್ಕೆ ತರಬೇಕು.

ಮಲೆನಾಡಿನ ಬಗ್ಗೆ ಈಗಾಗಲೇ ಕೆಲವು ಸದಸ್ಯರು ಮಾತನಾಡಿದ್ದಾರೆ, ನಾನು ಹೆಚ್ಚು ಮಾತನಾಡುವುದಿಲ್ಲ. ಮಲೆನಾಡಿನ ಬಗ್ಗೆ ಹೆಚ್ಚು ಗಮನ ಕೊಡಬೇಕು, ಅಲ್ಲದೆ ಖಾದಿ ಮತ್ತು ಗ್ರಾಮ ಕೈಗಾರಿಕೆಗಳಿಗೆ ಹೆಚ್ಚಿನ ಗಮನ ಕೊಡುವುದು ಅಗತ್ಯ. ಈ ಎಲ್ಲ ಕಾರ್ಯಕ್ರಮಗಳನ್ನೂ ತೆಗೆದುಕೊಂಡು ಕನ್ನಡನಾಡು ಚಿನ್ನದ ಬೀಡಾಗುವುದಕ್ಕೆ ನಾವೆಲ್ಲರೂ ಸಹಕರಿಸೋಣವೆಂದು ಹೇಳಿ, ನನಗೆ ಮಾತನಾಡಲು ಇಷ್ಟು ಅವಕಾಶ ಕೊಟ್ಟುದಕ್ಕಾಗಿ ಅಧ್ಯಕ್ಷರನ್ನು ವಂದಿಸುತ್ತೇನೆ.

* **Sri H. C. LINGA REDDY** (Malur).—Mr. Speaker, I rise to accord my full support to the budget proposals that have been placed before this House. I really congratulate the Finance Minister on the excellent job he has done. It is really noteworthy that our revenues have gone up by way of income, to about 50 crores and expenditure to about 60 crores. The income of our State, I remember, about 10 or 15 years ago, was only about Rs. 3 crores and now with the advancement of the State in various directions and with the improv-ment of developmental works in the several departments, our finances have gradually risen. Now, with the advent of the new State, our finances have really improved. I think it is very noteworthy that the Government have been putting forth their best efforts to assess our resources and spend as much money as possible on the nation building activities; to raise as much money as possible within the State and also get as much money as possible both by way of loans and grants from the Centre. But at the same time, Sir, I would like the Government to consider certain proposals with regard to the finances of the State just at a time when we are ushering in this new State. The Ministry has been there for the last few months. And naturally they will not be posted with the full facts and also there is the difficulty of integrating and collecting several statistics from the various areas and naturally it takes some time. For example, with regard to the Finance Commission, to a question put by me, the Government have been pleased to say that they have submitted a memorandum to the Finance Commission but they have not given the details and they were pleased to say that copies would be made and circulated among the members, but it has not been done as yet. Probably, if the views of the members of this House had been gathered, they would have been in a better position to strengthen their

(SRI H. C. LINGA REDDY.)

hands and given a clearer picture of the financial position to the Finance Commission and got as much money as possible both by way of grants and loans from the Finance Commission and the Central Government. Even now, I think it is not too late to ascertain the views of the members of this House with regard to the finances of the State because many of our very good revenue-yielding Departments have been taken over by the Centre, such as communications, income-tax and several other items yielding very high income. When the other backward areas have merged with the old Mysore State, it is but natural and there is every justification for this Government to urge the Central Government and the Finance Commission to set apart more funds for the improvement of this State. Therefore, from this point of view, I urge the Government to give us the Memorandum they have submitted to the Finance Commission and ascertain our views and submit them to the Finance Commission and also the Central Government.

With regard to the Five-Year Plan, to a question put by me, the Government have been pleased to answer that the outlay of the Second Five-Year Plan would be of the order of about Rs. 145 crores. The outlay of the Second Five-Year Plan for the old Mysore State was Rs. 80 crores. Now, if Rs. 80 crores were to be excluded from Rs. 145 crores, it will be about Rs. 70 or Rs. 75 crores that is proposed to be set apart for the merged areas and I think the Government have not done their job quite well in this respect in that they have not taken the actual needs of the merged areas. Probably, as I have said, in some of the reports they have searched for the Plans of the other States and have added them to our Second Five-Year Plan. It is well-known that other States were not so particular about the improvement of the merged areas In fact, that was one of the reasons why the people from the merged areas were very anxious to have this new State of Mysore. It is well known that they have not been spending sufficient money for their improvement and sufficient provision had not been made for the nation-building departments in these merged areas with regard to education, hospitals and other amenities. When these backward areas are joining this State, my point is, the outlay of the Second Five-Year Plan should have been of a higher order and not lower as it has been now. Therefore, Sir, even now, it is not too late to urge upon the Government to assess the real needs of those backward areas and provide for the various nation-building activities in those areas. At the same time, Sir, I would like to urge upon the Government that the prgress of the Second Five-Year Plan in the Old Mysore should not to any extent be allowed to be retarded. when I say that, I do not mean that sufficient attention should not be paid to other areas. My point is those areas being backward are entitled to a higher rate of progress and I urge upon the Government to secure sufficient grants from the Central Government both by way of loans and grants and increase the outlay of the Second Five-Year Plan.

With regard to the provision made for minor irrigation works, specially tanks, I am afraid, the provision made in this Budget is not sufficient. Last year, for the Old Mysore State, about Rs. 25 lakhs had been set apart for 500 tanks. For the new enlarged State with double the population and double its size, they had provided Rs. 25 lakhs for 823 tanks in the last Budget. Provision has now been made for restoration of only about 500 tanks. This, I submit, is not commensurate with the needs of the situation and I request the Government to pay more attention to the restoration of the minor and major irrigation works. For example, they have provided very heavy amounts for major irrigation works. Major irrigation works are no doubt very important but at the same time it has to be realised that the tanks specially in the scarcity areas in the maidan parts of the State are very important and after all a few lakhs of rupees will go a long way in the matter of restoration of these minor tanks. I who comes from Kolar District, have to

bring to the notice of the Government that in the Palar series there are a number of tanks, about a dozen, and the extent of acreage under cultivation, which was formerly in the order of 60,000 acres of land, is now reduced to 43,000 acres of land; many of the tanks are silted up and out of repairs and sufficient attention has not been paid for the restoration of these tanks at all. Therefore, I request the Government to pay more attention to the restoration of these minor tanks.

There is another aspect to which the Government has to pay their attention. Very often; there will be very small repairs to be done to the tanks with regard to their waste weir, bund, etc., and because the Public Works Department will not be paying attention to some of these minor things which could be attended to at a cost of Rs. 200 or Rs. 500 all the water will be going away from the tanks and the entire atchkat will not yield any crop at all. Therefore, Sir, I urge upon the Government to pay more attention to the restoration of these minor tanks and help the raiyats.

With regard to depots that have been opened by Government for selling rice, I am afraid the Government have not been doing their job properly. The rice is being sold at the rate of two seers per rupee in the depots. But in the open maket only about 1½ or 1¾ seers will be available even after these heavy rains. The harvest season is very far off and in the near future unless Government appoints a sufficient number of fair price depots and get rice from the Government of India or from other sources and make these societies quite alive, I am afraid sufficient justice will not have been done to the ryots. Therefore, I request the Government to open depots in large numbers and make rice available not merely in urban areas but also in rural areas.

With regard to land reforms, no doubt a committee has been set up by the Government. Whether there was any justification for it or not, I do not want to go into it. Anyway they will be submitting a report very shortly. But, in the meanwhile, with regard to the abolition of inams, which has already come into force, as some of the friends on the other side were saying, there is a good deal of inconvenience caused to the population, Land-lord's position is very insecure in some of the villages and by the time the reform is fully implemented, the ryots will be deprived of their lands. The inam villages have to be surveyed and the survey has not yet been commenced in some of the villages and it is only a few villages that have been vested in the Government. Therefore, I request the Government to complete the survey and settlement of the unsurveyed villages so far as inams abolition is concerned and take them over as early as possible.

ಡಾ॥ ಸರ್ದಾರ್ ಬಿ. ಕೆ. ನಾಗೂರ್ (ಬಿಜಾಪುರ).—ಮಾನ್ಯ ಸಭಾಪತಿಗಳೇ ಹಿಂದುಳಿದ ಪ್ರದೇಶವಾದಂಥ ಬಿಜಾಪುರ ಕ್ಷೇತ್ರದಿಂದ ಬಂದಿರುವ ನನಗೆ ಹಿಂದುಗಡೆ ಆದರೂ ಅವಕಾಶಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ಒಂದೆರಡು ಮಾತುಗಳನ್ನಾಡುತ್ತೇನೆ. ಸರ್ಕಾರ ಅನೇಕ ವಿಷಯಗಳಲ್ಲಿ ದುಂದುಗಾರಿಕೆಯನ್ನು ತೋರಿಸುತ್ತಿರುವುದಕ್ಕಾಗಿ ನಾನು ಅದನ್ನು ಖಂಡಿಸುವುದಕ್ಕೆ ಪೂರ್ವದಲ್ಲಿ ಅದು ಮಾಡಿರುವ ಕೆಲವು ಒಳ್ಳೆಯ ಕಾರ್ಯಗಳ ಬಗ್ಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಸರ್ಕಾರಿ ನೌಕರರ ಪಗಾರದಲ್ಲಿ ಏಕರೂಪತೆಯನ್ನು ತಂದುದಕ್ಕೆ, ಕಾಯ್ದೆಗಳಲ್ಲಿ ಏಕರೂಪತೆಯನ್ನು ತರಲು ಪ್ರಯತ್ನಿಸುತ್ತಿರುವುದಕ್ಕೆ, ಟೆನೆನ್ಸಿ ಕಮಿಟಿ ನಿಯಮಿಸಿದುದಕ್ಕೆ, ಶಿಕ್ಷಣ ಸಮಿತಿ ನಿಯಮಿಸಿದುದಕ್ಕೆ, ಬರಗಾಲ ಪೀಡಿತ ಪ್ರದೇಶಗಳಿಗೆ ಪರಿಹಾರ ನೀಡಿದುದಕ್ಕೆ, ಶಿಕ್ಷಣ, ಆರೋಗ್ಯ, ನೀರಾವರಿ, ವಿದ್ಯುಚ್ಛಕ್ತಿ, ಒಕ್ಕಲತನ, ಮೀನುಗಾರಿಕೆ, ರಸ್ತೆ ಸಾರಿಗೆ ಮೊದಲಾದ ಲೋಕೋಪಯೋಗಿ ಶಾಖೆಗಳಿಗೆ ಹೆಚ್ಚು ಹಣ ತೆಗೆದಿಟ್ಟಿರುವುದಕ್ಕೆ ನಾನು ಸರ್ಕಾರಕ್ಕೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಆದರೆ ಸರ್ಕಾರವು ಇತರ ಅನೇಕ ವಿಷಯಗಳಲ್ಲಿ ದುಂದುಗಾರಿಕೆಯನ್ನು ತೋರಿಸಿರುವುದಕ್ಕಾಗಿ ನಾನು ಅದನ್ನು ಖಂಡಿಸುತ್ತೇನೆ.

ಸಾಮಾನ್ಯ ಆಡಳಿತೆಯ ವೆಚ್ಚ ಹಾಗೂ ಪೋಲೀಸು ಆಡಳಿತೆಯ ವೆಚ್ಚ ಇಮ್ಮಡಿ ಹೆಚ್ಚಿದೆ. ದಕ್ಷತೆ ಹೆಚ್ಚದೆ, ವೆಚ್ಚ ಹೆಚ್ಚುತ್ತಿರುವುದು ಆಶ್ಚರ್ಯಕರ. ಸಾಮಾನ್ಯ ಆಡಳಿತೆಯ ವೆಚ್ಚ ಎರಡೂವರೆ ಕೋಟಿ ರೂಪಾಯಿಗಳು, ಪೋಲೀಸು ಆಡಳಿತೆಯ ವೆಚ್ಚ ಮೂರೂ ಮುಕ್ಕಾಲು ಕೋಟಿ ರೂಪಾಯಿಗಳು. ಹೀಗೆ ವೆಚ್ಚ ಹೆಚ್ಚುತ್ತಾ ದಕ್ಷತೆ ಹೆಚ್ಚದೆ ಹೋಗಿರುವುದು ಬಹಳ ದುರ್ದೈವದ ಸಂಗತಿ. ಹೀಗಾದರೆ ಈ ಶಾಖೆಗಳು ಲೋಕೋಪಯೋಗಿ ಶಾಖೆಗಳೆನಿಸುವುದಿಲ್ಲ. ಇವುಗಳ ಮೇಲೆ ಹಣ ವಿನಿಯೋಗಿಸುವುದು ಹೊಳೆಯಲ್ಲಿ ಹುಣಿಸೆ ಹಣ್ಣು ತೊಳೆದಂತಾಗುತ್ತದೆ. ಈಗ ಮೈಸೂರು ದೇಶದ ಎಲ್ಲಾ ಕಡೆಯಲ್ಲೂ ಹಗಲು ಖೂನಿಗಳಾಗುತ್ತಿರುವ ಉದಾಹರಣೆಗಳು ಸಾಕಷ್ಟಿವೆ. ಪೋಲೀಸು ಇಲಾಖೆಯಲ್ಲಿ ದಕ್ಷತೆಯಿಲ್ಲದಿದ್ದರೂ ಸಹ ಪಗಾರ ಮಾತ್ರ ಹೆಚ್ಚಿದೆ. ಕನ್ನಡದಲ್ಲಿ ಒಂದು ಗಾದೆಯುಂಟು, ಊಟಕ್ಕೆ ಮರೆಯಬೇಡಿ, ಕಷ್ಟಕ್ಕೆ ಕರೆಯಬೇಡಿ ಎಂದು.

(ಡಾ॥ ಸರ್ದಾರ್ ಬಿ. ಕೆ. ನಾಗೂರ್)

ಈ ಇಲಾಖೆಯ ನೌಕರರ ಪಗಾರದ ವಿಚಾರದಲ್ಲಿ ಮಾತ್ರ ಆಸಕ್ತಿವಹಿಸಿ ಕೆಲಸದ ವಿಚಾರದಲ್ಲಿ, ದಕ್ಷತೆ ವಿಚಾರದಲ್ಲಿ ಸರಿಯಾದ ಗಮನಕೊಡದಿರುವುದು ಆ ಗಾದೆಗೆ ಅನುಗುಣವಾಗಿದೆ. ಈ ರೀತಿಯಿರುವು ದಕ್ಕೆ ಮಾನ್ಯ ಅಧ್ಯಕ್ಷರ ಊರಿನಲ್ಲಿ ನಡೆದ ಒಂದೇ ಒಂದು ನಿದರ್ಶನ ಸಾಕಾಗಿದೆ. ಮುಂಜಾನೆ ಆರು ಗಂಟೆ ಹೊತ್ತಿನಲ್ಲಿ ಟ್ರೆಜರಿಯನ್ನು ಲೂಟಿ ಮಾಡಿದ ಉದಾಹರಣೆಯೊಂದೇ ಪೋಲೀಸಿನವರ ದಕ್ಷತೆಗೆ ನಿದರ್ಶನವಾಗಿದೆ. ಇದಕ್ಕಿಂತ ಹೆಚ್ಚಾಗಿ ಉದಾ ಹರಣೆಗಳನ್ನು ಕೊಡಲು ನನಗೆ ಇಷ್ಟವಿಲ್ಲ. ಪರಿಸ್ಥಿತಿ ಹೀಗಿರುವಾಗ ಪೋಲೀಸು ಇಲಾಖೆಯ ವೆಚ್ಚವನ್ನು ಹೆಚ್ಚಿಸುವುದರಲ್ಲಿ ಅರ್ಥವಿಲ್ಲ. ಜನಜೀವನದ ಬಗ್ಗೆ ಕಾಳಜಿ ತೆಗೆದುಕೊಳ್ಳದೆ ಪಗಾರ ಹೆಚ್ಚಿಸಿ ವೆಚ್ಚ ಅಧಿಕ ವಾಗುವಂತೆ ಮಾಡಿರುವುದು ಸರಿಯಾದ ರೀತಿ ನೀತಿ ಯಲ್ಲ.

ಕೃಷ್ಣರಾಜಸಾಗರ, ವಾಣಿವಿಲಾಸ ಸಾಗರ ಮೊದ ಲಾದ ನೀರಾವರಿಗಳ ಸಲುವಾಗಿ ಸುಮಾರು ಒಂದು ಕೋಟಿ ರೂಪಾಯಿಗಳನ್ನು ಹಾನಿ ಮಾಡಿಕೊಳ್ಳುತ್ತಿ ರುವುದು ಆಶ್ಚರ್ಯಕರ. ಈ ಹಾನಿಯನ್ನು ನೀರಾ ವರಿಯ ಪ್ರದೇಶದ ಜನರಿಂದ ಹೆಚ್ಚು ಕರದ ರೂಪ ದಿಂದ ತುಂಬಿಕೊಳ್ಳದೆ, ಇತರ ಪ್ರದೇಶದ ಜನರ ಕಡೆಯಿಂದ ಎತ್ತಿದ ಕರದಿಂದ ತುಂಬಿಕೊಳ್ಳುತ್ತಿರು ವುದು ಅನ್ಯಾಯ. ಈ ಸಾಗರಗಳ ಉಪಯೋಗ ಪಡೆಯುತ್ತಿರುವ ಮೈಸೂರು, ಮಂಡ್ಯ, ಬೆಂಗಳೂರು ಹಾಗೂ ಕೋಲಾರ ಜಿಲ್ಲೆಗಳ ಪ್ರಜೆಗಳ ಸಲುವಾಗಿ ಬೇರೆ ಭಾಗದ ಜನರು ಪ್ರತಿವರ್ಷ ಒಂದು ಕೋಟಿ ರೂಪಾಯಿ ದಂಡ ಏಕೆ ತೆರಬೇಕು ? ಉತ್ತರ ಕರ್ಣಾಟಕ, ಹೈದ ರಾಬಾದು ಕರ್ಣಾಟಕ ಇದರ ಸಲುವಾಗಿ ಒದಗಿರುವ ಖೋತಾ ಏಕೆ ತುಂಬಬೇಕು ! ಈ ಸಾಗರಗಳ ಉಪ ಯೋಗ ಪಡೆಯುವವರು ಮಾತ್ರವಲ್ಲದೆ ಇತರ ಪ್ರದೇಶ ಗಳವರೂ ಇದರಿಂದುಂಟಾಗಿರುವ ಖೋತಾ ಹಣ ವನ್ನು ತುಂಬಬೇಕಾಗಿರುವುದು ನ್ಯಾಯವೆ ಎಂಬು ದನ್ನು ಸರ್ಕಾರ ಆಲೋಚಿಸತಕ್ಕದ್ದು. ಇದು ಬಹಳ ಮುಖ್ಯವಾದ ವಿಚಾರ. ಕೃಷ್ಣರಾಜಸಾಗರದ ಬಳಿ ಇರುವ ಬಣ್ಣದ ದೀಪ, ನೀರಿನಲ್ಲಿ ಬೆಳಗುವ ದೀಪ, ಅಲಂಕಾರ—ಇವುಗಳಿಗೆಲ್ಲಾ ಆಗುವ ವೆಚ್ಚವನ್ನು ಉತ್ತರ ಕರ್ಣಾಟಕ ಮತ್ತು ಹೈದರಾಬಾದು ಕರ್ಣಾ ಟಕದ ಪ್ರಜೆ ಕೊಡುವುದು ಯೋಗ್ಯವೆ ಎಂಬುದನ್ನು ಸರ್ಕಾರ ಪರಿಶೀಲಿಸಬೇಕು. ನಾವು ಹೀಗೆ ಹೇಳಿದರೆ ಅದು ಪವಿತ್ರವಾದುದಲ್ಲ, ಟೀಕೆ ಮಾಡುತ್ತಿದ್ದಾರೆ ಎಂದು ಭಾವಿಸಬಹುದು. ಆದ್ದರಿಂದ ಹೆಚ್ಚಾಗಿ ಹೇಳು ವುದಿಲ್ಲ. ಇದು ಬಹಳ ವಿಷಾದದ ಸಂಗತಿ. ಪವಿತ್ರ ವಾದ ಮನಸ್ಸಿನಿಂದ ವಿಶಾಲ ಹೃದಯದಿಂದ ಇದನ್ನು ಗಮನಕ್ಕೆ ತರುತ್ತಿದ್ದೇನೆಯೇ ವಿನಾ ಮತ್ಯಾವ ಉದ್ದೇಶದಿಂದಲೂ ಅಲ್ಲ. ಪರಿಸ್ಥಿತಿ ಹೀಗಿರುವಾಗ ನಾವು ಈ ಬಾಬಿನ ಖೋತಾ ಹಣ ತುಂಬುವುದು ಉಚಿತವೆ ಎಂಬುದನ್ನು ವಿಚಾರ ಮಾಡತಕ್ಕದ್ದು ಆವ ಶ್ಯಕ.

ವಿದ್ಯುತ್ ಉತ್ಪಾದನೆಯ ಶಾಖೆಯ ಆದಾಯ ಒಂದು ಕೋಟಿ ಹದಿನೆಂಟು ಲಕ್ಷ ರೂಪಾಯಿಗಳಿದ್ದರೆ ಅದರ ವೆಚ್ಚದ ರಕಮು ಒಂದು ಕೋಟಿ ಎಪ್ಪತ್ತು ಮೂರು ಲಕ್ಷ ರೂಪಾಯಿಗಳಷ್ಟಿದೆ. ಹೀಗೆ ವರ್ಷಕ್ಕೆ 55 ಲಕ್ಷ ರೂಪಾಯಿಗಳ ನಿವ್ವಳ ಹಾನಿಯಿದೆ. ಈ ಹಾನಿ ಯನ್ನು ಸರ್ಕಾರವು ವಿದ್ಯುತ್ ಪೂರೈಕೆಯ ದರವನ್ನು ಹೆಚ್ಚಿಸಿ ತುಂಬಿಕೊಳ್ಳಬೇಕಾಗಿತ್ತು. ಹಾಗೆ ಮಾಡದೆ ರೈತರಿಂದ ಎತ್ತಿದ ಕರಗಳಿಂದ ಈ ಹಾನಿಯನ್ನು ತುಂಬಿ ಕೊಳ್ಳುತ್ತಿರುವುದು ವಿದ್ಯುತ್ ಹೆಚ್ಚು ಪ್ರಮಾಣದಿಂದ ಉಪಯೋಗಿಸುತ್ತಿರುವ ಮೈಸೂರು, ಬೆಂಗಳೂರು ಜನರ ಬಗ್ಗೆ ಪಕ್ಷಪಾತ ತೋರಿಸಿದಂತೆಯೇ ಸರಿ. ಮೈಸೂರು; ಬೆಂಗಳೂರು, ಮಂಡ್ಯ, ಕೋಲಾರ, ದಾವಣಗೆರೆ, ಭದ್ರಾವತಿ ಈ ಪ್ರಾಂತಗಳಲ್ಲಿ ವಿದ್ಯುತ್ ಹೆಚ್ಚು ಪ್ರಮಾಣದಲ್ಲಿ ಉಪಯೋಗ ಮಾಡಿಕೊಳ್ಳುತ್ತಿ ದ್ದಾರೆ. ವಿದ್ಯುಚ್ಛಕ್ತಿಯ ಬಳಕೆಯ ದರ ಒಂದೊಂದು ಕಡೆ ಒಂದೊಂದು ರೀತಿಯಿದೆ: ಬೆಂಗಳೂರಿನಲ್ಲಿ ಯೂನಿ ಟ್ಟಿಗೆ ನಾಲ್ಕಾಣೆಯಿದೆ, ಮೈಸೂರಿನಲ್ಲಿ ಐದಾಣೆ, ದಾವಣಗೆರೆಯಲ್ಲಿ ಆರಾಣೆ ಇದೆ. ಅದೇ ಮುಂದೆ ಹೋದರೆ ಹುಬ್ಬಳ್ಳಿಯಲ್ಲ ಎಂಟಾಣೆಯಿದೆ, ದಾವಣ ಗೆರೆ ಬಿಟ್ಟ ಮೇಲೆ ಮುಂದೆ ಹುಬ್ಬಳ್ಳಿಯಲ್ಲಿ ಎಂಟಾಣೆ ದರವನ್ನು ವಿಧಿಸುವುದು ಬೆಂಗಳೂರಿನಲ್ಲಿ ನಾಲ್ಕಾಣೆ ವಿಧಿಸುವುದು ಯಾವ ದೇಶದ ನ್ಯಾಯ ? ಸರ್ಕಾರವೇ ಹೇಳಲಿ ! ಇದನ್ನು ಸರ್ಕಾರ ಪರಿಶೀಲಿಸಬೇಕು. ನಾವೆಲ್ಲಾ ಇಲ್ಲಿ ಬಂದು ಈ ವಿಚಾರಗಳನ್ನು ಹೇಳುವು ದಕ್ಕೆ ಮುಂಚೆಯೇ ಸರ್ಕಾರ ಸರಿಯಾದ ವ್ಯವಸ್ಥೆ ಮಾಡಬೇಕಾದದ್ದು ಅದರ ಕರ್ತವ್ಯ. ಅದನ್ನು ಏಕೆ ಮಾಡಿಲ್ಲವೋ ತಿಳಿಯದು.

ಹಳೆಯ ಮೈಸೂರು ಪ್ರದೇಶದ ಶಿಕ್ಷಕರ ಸಂಬಳ ವನ್ನು ಸರ್ಕಾರ ಹೆಚ್ಚಿಸಿದೆ. ಆದರೆ ಆ ಪ್ರದೇಶದ ಶಾಲೆ ಕಾಲೇಜುಗಳ ಫೀ ದರಗಳನ್ನು ಸರ್ಕಾರ ಹೆಚ್ಚಿಸಿಲ್ಲ, ಹಾಗೂ ಹಳೆಯ ಮೈಸೂರು ರಾಜ್ಯದಲ್ಲಿ ಶಾಲೆ ಕಾಲೇಜುಗಳಲ್ಲಿ ತೆಗೆದುಕೊಳ್ಳುವ ಫೀ ದರಗಳಲ್ಲಿ ಏಕ ರೂಪತೆಯೂ ಇಲ್ಲ. ಸರ್ಕಾರವು ಇಡೀ ರಾಜ್ಯದ ಶಾಲೆ ಕಾಲೇಜುಗಳಲ್ಲಿ ಒಂದೇ ಬಗೆಯ ಫೀ ದರ ಗೊತ್ತುಮಾಡದೆ ಇದ್ದುದು ಶೋಚನೀಯ. ವಿದ್ಯಾರ್ಥಿ ವಿದ್ಯಾರ್ಥಿಗಳಲ್ಲಿ ಪಕ್ಷಪಾತ ಮಾಡುವುದು ಸರ್ಕಾರಕ್ಕೆ ಶೋಭಿಸುವುದಿಲ್ಲ.

ರೋಡ್ ಟ್ರಾನ್ಸ್‌ಪೋರ್ಟ್ ಇಲಾಖೆಯ ಆದಾಯ ಹೆಚ್ಚುತ್ತಿರುವುದು ಸಂತೋಷಕರ. ಆದರೆ ಅದರ ಜೊತೆಗೆ ಅದರ ವೆಚ್ಚ ಹೆಚ್ಚು ವೇಗದಿಂದ ಹೆಚ್ಚು ತ್ತಿರುವುದು ವಿಷಾದಕರ. ಪ್ರವಾಸಿಕರ ಕಷ್ಟನಷ್ಟಗಳಿ ಗಂತೂ ಲೆಕ್ಕವೇ ಇಲ್ಲ. ಹೈದರಾಬಾದು ಪ್ರದೇಶದಲ್ಲಿ ರೋಡ್ ಟ್ರಾನ್ಸ್‌ಪೋರ್ಟ್ ಕೆಲಸಗಾರರು ಪ್ರವಾಸಿ ಕರ ಸಂಗಡ ಕನ್ನಡ ಮಾತನಾಡುವುದು ಸಹ ಅಗೌರವ ವೆಂದು ತಿಳಿಯುತ್ತಿದ್ದಾರೆ. ಹಿಂದೂಸ್ಥಾನಿಯಲ್ಲಿ ಮಾತನಾಡುವುದರಿಂದ ಪ್ರಯಾಣಿಕರಿಗೆ ಅರ್ಥವಾಗದೆ ಇತರ ಪ್ರಯಾಣಿಕರನ್ನು ಕೇಳಿ ತಿಳಿಯಬೇಕಾಗಿ ಬರು ತ್ತದೆ. ಸರ್ಕಾರ ಜನರ ಮೇಲೆ ನಡೆಸುತ್ತಿರುವುದು ಇದೆಂತಹ ಅಪಹಾಸ್ಯ ! ಕರ್ಣಾಟಕ ರಾಜ್ಯದಲ್ಲಿ ನೌಕರರನ್ನು ನೇಮಕ ಮಾಡುವಾಗ ಕನ್ನಡವೇ ಬಾರದವರನ್ನು ನೇಮಿಸುವುದು ಸೂಕ್ತವೇ ? ಈ ರಾಜ್ಯದಲ್ಲಿ ಕೆಲಸ ಮಾಡುವ ನೌಕರರಿಗೆ ಇಲ್ಲಿನ ಪ್ರಮುಖ ಭಾಷೆಯಾದ ಕನ್ನಡ ಬರಲೇಬೇಕು ; ಬಾರ ದಿದ್ದರೆ ಅಂಥವರಿಗೆ ಅಷ್ಟಾಗಿ ಪ್ರೋತ್ಸಾಹವಿರಬಾ ರದು. ಮೋಟಾರಿನ ಟಾಪಿನ ಮೇಲೆ ಸಾಮಾನು ಗಳನ್ನು ಹಾಕಿ ತೆಗೆಯುವಾಗ ಬಡಕೂಲಿಗಳಿಗೆ ಕನ್ನಡ ಮಾತನಾಡಲು ಬಾರದಿರುವಾಗ ಎಷ್ಟು ಕಷ್ಟವಾಗು ತ್ತದೆಂಬುದು ಅನೇಕರಿಗೆ ಗೊತ್ತಿದೆ. ಆದ್ದರಿಂದ ಕೂಡಲೆ ಸೂಕ್ತ ಕ್ರಮ ಕೈಕೊಂಡು ಕನ್ನಡ ಬರುವ ನೌಕರರನ್ನೇ ನೇಮಕಮಾಡಲು ವ್ಯವಸ್ಥೆ ಮಾಡ ಬೇಕು.

ಸರ್ಕಾರಿ ಔದ್ಯೋಗಿಕ ಸಂಸ್ಥೆಗಳ ಮೂಲಕ ಹದಿ ನೈದು ಕೋಟಿ ರೂಪಾಯಿಗಳ ಆದಾಯವಿದೆ, ಅವುಗಳಿ ಗಾಗಿ ಅಷ್ಟೇ ವೆಚ್ಚವಿದೆ. ಅವುಗಳನ್ನು ವಿಸ್ತರಿಸ ಬೇಕಾದರೆ ಸರ್ಕಾರವು ಸಾಲವನ್ನೇ ಎತ್ತಬೇಕು.

ಇವುಗಳಿಗಾಗಿ ಈಗಾಗಲೇ ಎತ್ತಲಾದ ಬಂಡವಾಳದ ರಕಮಿನ ಮೇಲೆಯೂ ಜನರು ಕಂದಾಯದ ರೂಪ ದಿಂದಲೇ ಕೊಡಬೇಕು. ಇದು ಔದ್ಯೋಗಿಕ ಸಂಸ್ಥೆ ಗಳನ್ನು ನಡೆಸುವ ರೀತಿಯಲ್ಲ. ಅವುಗಳಿಂದ ಲಾಭ ವಿಲ್ಲದಿದ್ದರೆ ಸರ್ಕಾರ ಸಾಲಮಾಡಿ ಏಕೆ ಅವುಗಳನ್ನು ವಿಸ್ತರಿಸಬೇಕು ? ಮೈಸೂರಿನ ಕಾರ್ಖಾನೆಗಳ ಆಡ ಳಿತ ವಿಚಿತ್ರವಾಗಿದೆ. ಲಾಭವಿಲ್ಲದಿರುವ ಸಂಸ್ಥೆ ಗಳನ್ನು ಸರ್ಕಾರ ನಡೆಸುವುದು ಯಾವ ನ್ಯಾಯ? ಇದು ಅರ್ಥವಾಗುವುದಿಲ್ಲ. ಫಾಯಿದೆಯಿಲ್ಲದಿರುವ ಸಂಘ ಸಂಸ್ಥೆಗಳನ್ನು ಸರ್ಕಾರ ಕೂಡಲೆ ತೆಗೆದು ಹಾಕಬೇಕು. ಎಲ್ಲ ಔದ್ಯೋಗಿಕ ಸಂಸ್ಥೆಗಳನ್ನೂ ವ್ಯವ ಹಾರಿ ತತ್ವಗಳ ಮೇಲೆ ನಡೆಯಿಸುತ್ತಿದ್ದರೆ ಸರಿ, ಇಲ್ಲವಾದರೆ ಅವುಗಳನ್ನು ಬಂಡವಾಳಗಾರರಿಗೆ ಮಾರಿ ಬಿಡಬೇಕು.

4 P.M.

ಇನ್ನು ಸಮಾಜವಿಕಾಸ ಯೋಜನೆಯ ವಿಷಯ. ಇದೇನು ಸಮಾಜ ವಿಕಾಸವೊ ಅಥವಾ ಸಮಾಜ ವಿನಾಶವೊ, ನನಗಂತೂ ಗೊತ್ತಾಗಲಿಲ್ಲ. ಈ ಸಮಾಜ ವಿಕಾಸ ಯೋಜನೆಗಾಗಿ ಸರ್ಕಾರದವರು ಹಣವನ್ನು ನೀರಿನಂತೆ ವಿನಿಯೋಗಿಸುತ್ತಿರುವುದನ್ನು ನೋಡಿದರೆ ಬಹಳ ಶೋಚನೀಯವಾಗಿದೆ. ಇದರ ಉಪ ಯೋಗ ಮಂತ್ರಿಗಳಿಗೆ ಅಲ್ಲಲ್ಲಿ ಭಾಷಣಗಳನ್ನು ಮಾಡುವದಕ್ಕೂ ಮತ್ತು ತಮ್ಮ ಪಕ್ಷದ ಪ್ರಚಾರ ಮಾಡುವುದಕ್ಕೂ ಅನುಕೂಲವಾಗುತ್ತದೆಯೇ ವಿನಾ ಮತ್ತೆ ಬೇರೆ ಯಾರಿಗೂ ಅನುಕೂಲವಿಲ್ಲ. ಆದ್ದರಿಂದ ಈ ಬಾಬಿಗೆ ಒದಗಿಸಿರುವ ಹಣವನ್ನು ದೇಶದ ಜನರಿಗೆ ಉಪಕಾರಮಾಡುವುದಕ್ಕೋಸ್ಕರ ವಿನಿಯೋಗಿಸ ಬೇಕೆಂದು ಹೇಳುತ್ತೇನೆ. ಅನಾವಶ್ಯಕವಾಗಿ ಇಂತಹ ಯೋಜನೆಗಳಿಗೆ ಹಣ ಒದಗಿಸುವುದನ್ನು ಕಡಮೆ ಮಾಡ ಬೇಕು. ಹೆಚ್ಚು ಹಣವನ್ನು ಲೋಕೋಪಕಾರಿ ಶಾಖೆ ಗಳಿಗೆ ಹಂಚುವುದರಿಂದ ಹೆಚ್ಚಿಗೆ ಪರಿಣಾಮಕಾರಿ ಯಾದ ಕಾರ್ಯಗಳು ನಡೆಯುವುದರಲ್ಲಿ ಯಾವ ಸಂದೇ ಹವೂ ಇಲ್ಲ. ಇದರಿಂದ ಸಮಾಜವಿಕಾಸ ಯೋಜನೆ ಗಳಲ್ಲಿ ಪೋಲಾಗುತ್ತಿರುವ ಹೆಚ್ಚು ಹಣ ಉಳಿತಾಯ ವಾಗುವುದು.

ಇನ್ನು ಸಮಾಜಕಲ್ಯಾಣ ಹಾಗೂ ಖಾದಿ ಗ್ರಾಮೋ ದ್ಯೋಗಗಳ ಅಭಿವೃದ್ಧಿ ವಿಷಯ. ಇದು ಬಹಳ ವಿಚಿತ್ರ ವಾಗಿದೆ. ನಾನು ಈ ವಿಷಯದಮೇಲೆ ಮಾತನಾಡಿ ದರೆ ಸುಮಾರು ಒಂದು ಘಂಟೆಕಾಲ ಹಿಡಿಯುತ್ತದೆ. ಇದರಿಂದ ಅಧಿಕಾರಾರೂಢಪಕ್ಷದವರಿಗೆ ಅನುಕೂಲವೇ ಹೊರತು ಬೇರೆ ಏನೂ ಇಲ್ಲ. ಅದಕ್ಕಾಗಿ ಸಾರ್ವ ಜನಿಕ ಹಣ ವ್ಯಯವಾಗುತ್ತಿರುವುದು ಏನೂ ಪ್ರಯೋಜನವಿಲ್ಲ, ಸಮಾಜಕಲ್ಯಾಣ ಮಾಡುವ ಕೆಲಸ ಗಳು ಸರಿಯಾಗಿ ನಿರ್ವಹಣೆಯಾಗುತ್ತಿಲ್ಲ. ಅದಕ್ಕಾಗಿ ಒದಗಿಸಿರುವ ಹಣ ಸರಿಯಾಗಿ ವಿನಿಯೋಗವಾಗುತ್ತಿಲ್ಲ. ಆದರೆ ಸರ್ಕಾರ ಆ ರೀತಿ ಹಣವನ್ನು ಈ ಗ್ರಾಮೋ ದ್ಯೋಗಗಳಿಗೆ ಒದಗಿಸದಿದ್ದರೂ, ಗ್ರಾಮೋದ್ಯೋಗ ಗಳೇನೂ ನಡೆಯದೆ ಇರಲಾರವು. ಸಮಾಜಕಲ್ಯಾಣ ವಾಗಬೇಕಾದರೆ ಸಮಾಜದ ಜನತೆಯ ಮನಸ್ಸಿನಲ್ಲಿ ಪ್ರೀತಿ ಮತ್ತು ವಿಶ್ವಾಸ ಹೆಚ್ಚಬೇಕು. ಸರ್ಕಾರದವರು ಈಗಿರುವ ರೀತಿ ಮಾಡಿ ಸಮಾಜಕಲ್ಯಾಣ ಮಾಡುತ್ತೇ ವೆಂದು ಹೇಳಿದರೆ, ದೇಶಕ್ಕೆ ಅನ್ಯಾಯಮಾಡಿದಂತಾ ಗುತ್ತದೆಂದು ನಾನು ಹೇಳಬಯಸುತ್ತೇನೆ.

ಇನ್ನು ಸಹಕಾರಿ ಶಾಖೆಗಳ ಬಗ್ಗೆ ನಮ್ಮ ಸರ್ಕಾರ ದವರು 64 ಲಕ್ಷ ರೂಪಾಯಿಗಳನ್ನು ಈ ವರ್ಷ ಒದ ಗಿಸಿದ್ದಾರೆ. ಮುಂಬೈ ಮತ್ತು ಮದ್ರಾಸ್ ಭಾಗ ಗಳಲ್ಲಿ ಒದಗಿಸಿರುವ ಈ ಹಣವು ಸದುಪಯೋಗ ವಾಗುವುದರಲ್ಲಿ ಯಾವ ಸಂಶಯವೂ ಇಲ್ಲ. ಆದರೆ ಹಳೆಯ ಮೈಸೂರು ಪ್ರದೇಶದಲ್ಲಿ ಬಂಡವಾಳವಿಲ್ಲದ ಹಾಗೂ ರಿಜಿಸ್ಟರ್ ಆಗದೆ ಇದ್ದ ಸಹಕಾರೀ ಸಂಸ್ಥೆ ಗಳಿಗೆ ಸರ್ಕಾರವು ಎಷ್ಟೋ ಹಣವನ್ನು ಸಾಲ ಕೊಟ್ಟು ಸಾಕಾದಷ್ಟು ಕಳಕೊಂಡಿದೆ. ಆದ್ದರಿಂದ ಇನ್ನು ಮುಂದೆಯಾದರೂ ಆ ರೀತಿ ಅಂತಹ ಸಂಸ್ಥೆ ಗಳಿಗೆ ಸಾಲಕೊಡದೆ ಇರುವ ಹಾಗೆ ನಮ್ಮ ಸರ್ಕಾರ ದವರು ಜಾಗ್ರತೆಯಿಂದ ಇರಬೇಕೆಂದು ತಮ್ಮ ಮೂಲಕ ಅವರಿಗೆ ತಿಳಿವಳಿಕೆ ಹೇಳುತ್ತೇನೆ.

ಇನ್ನು ಹಳೆಯ ಮೈಸೂರು ಸರ್ಕಾರದಲ್ಲಿ ಅನಾ ಥಾಶ್ರಮಗಳಿಗೆ ಗ್ರ್ಯಾಂಟುಗಳನ್ನು ಕೊಡುತ್ತಿದ್ದು ದನ್ನು ಈಗಲೂ ನಮ್ಮ ಸರ್ಕಾರದವರು ಮುಂದುವರಿ ಸಿಕೊಂಡು ಬರುತ್ತಿದ್ದಾರೆ. ಹೀಗೆ ಮಾಡುವಾಗ ಸರ್ಕಾ ರವು ಈ ಸಂಸ್ಥೆಗಳ ಜಾತೀಯತೆಯ ಸ್ವರೂಪವನ್ನು ಗಮನಿಸಿದಂತೆ ತೋರುವುದಿಲ್ಲ. ಇಂತಹ ಸಂಸ್ಥೆಗಳು ಹೊಸ ಮೈಸೂರಿನಲ್ಲಿ ಸೇರ್ಪಡೆಯಾದ ಪ್ರದೇಶಗಳಲ್ಲಿ ಬೇಕಾದಷ್ಟು ಇವೆಯೆಂಬುದನ್ನು ಇನ್ನೂ ನಮ್ಮ ಸರ ಕಾರದವರು ಲಕ್ಷಿಸಿಲ್ಲವೆಂದು ನನಗೆ ತೋರುತ್ತದೆ. ಇಂತಹ ಪಕ್ಷಪಾತವನ್ನು ತೋರಿಸಬಾರದು. ಅದು ರಾಷ್ಟ್ರದ್ರೋಹ ಮಾಡಿದಂತಾಗುತ್ತದೆ. ಯಾವುದೇ ಬಗೆಯಿಂದ ಜಾತೀಯತೆಗೆ ಪ್ರೋತ್ಸಾಹಿಸುವುದೂ ಕೂಡ ಒಂದು ರಾಷ್ಟ್ರದ್ರೋಹ. ಇಂತಹ ಗ್ರ್ಯಾಂಟು ಗಳನ್ನು ಸರ್ಕಾರದವರು ಸಂಪೂರ್ಣವಾಗಿ ಎಲ್ಲಾ ರಾಜ್ಯಗಳಲ್ಲೂ ಇರುವ ಸಂಸ್ಥೆಗಳಿಗೂ ನೀಡಬೇಕು. ಕೇವಲ ಹಳೆಯ ಮೈಸೂರು ರಾಜ್ಯದಲ್ಲಿನ ಸಂಸ್ಥೆಗಳ ಕಡೆಗೆ ನಮ್ಮ ಸರ್ಕಾರದವರು ವಿಶೇಷವಾಗಿ ಗಮನ ಕೊಡುತ್ತಿದ್ದಾರೆ. ಉತ್ತರ ಕರ್ಣಾಟಕದಲ್ಲಿಯೂ ಮತ್ತು ಹೈದರಾಬಾದ್ ಕರ್ಣಾಟಕದಲ್ಲಿಯೂ ಕೂಡ ಸಾಕಷ್ಟು ಇಂತಹ ಸಂಸ್ಥೆಗಳಿವೆ ಎಂಬುದನ್ನು ಸರ್ಕಾ ರದವರು ಗಮನಿಸಬೇಕು. ಮತ್ತು ಆ ವಿಚಾರದ ಬಗ್ಗೆ ಬೇಗನೆ ಎಚ್ಚರವಾಗಬೇಕು. ಅವರನ್ನು ವಿಚಾ ರವೇ ಮಾಡಲಿಲ್ಲ. ಈಗ ಸುಮಾರು 9 ಕೋಟಿ 36 ಲಕ್ಷ ಚಿಲ್ಲರೆ ರೂಪಾಯಿಗಳ ಖೋತಾ ಬಡ್ಜೆಟ್ಟನ್ನು ನಮ್ಮ ಸರ್ಕಾರದವರು ತೋರಿಸುತ್ತಿದ್ದಾರೆ. ಮಂತ್ರಿ ಗಳಿಗೆ, ಸ್ಪೀಕರ್ ಅವರಿಗೆ, ಚೇರ್ಮನ್ ಅವರಿಗೆ ಕೊಡು ತ್ತಿರುವ ಸೌಕರ್ಯಗಳನ್ನು ನೋಡಿದರೆ, ಇವರಿಗೋ ಸ್ಕರ ಎಷ್ಟೋ ಹಣ ಅನಾವಶ್ಯಕವಾಗಿ ಖರ್ಚಾಗಿ ಖೋತಾ ಬಡ್ಜೆಟ್ ಆಗುವುದಕ್ಕೆ ಕಾರಣವಾಗಿದೆ ಎಂದು ನನಗೆ ತೋರುತ್ತದೆ. ಏಕೆಂದರೆ ಇವರಿಗೆ ಕಾರು, ಬಂಗಲೆಗಳು, ಇನ್ನೂ ಇತರ ಸೌಕರ್ಯಗಳು ಬಹಳ ಹೆಚ್ಚಾಗಿವೆ. ಆದರೆ ಅವರಿಗೆ ಈ ಅನುಕೂಲ ಗಳು ಬೇಡವೆಂದು ನಾನು ಹೇಳುವುದಿಲ್ಲ. ಇವರು ಕುಳಿತುಕೊಳ್ಳುವುದಕ್ಕೆ 30 ಸಾವಿರ ರೂಪಾಯಿಗಳ ಕಾರು ಏಕೆ ಬೇಕು ? 8—10 ಸಾವಿರ ರೂಪಾಯಿ ಗಳ ಕಾರು ಇದ್ದರೆ ಸಾಲದೇ ? ಇವರಿಗೆ ಲೋಡು, ತೆಕ್ಕೆಗಾಡಿ, ಚಮಚ, ಬಟ್ಟಲು, ಬೋಗುಣಿ, ಮಚ್ಚರ ದಾನಿ, ನಿಗೌಸಣತಿ, ಕಪಾಟು, ಬುರ್ಜಿ, ಪಲ್ಲಂಗ, ಇನ್ನೇನು ಅಂಗಿ ಒಂದನ್ನು ಹೊಲಿಸಿಕೊಟ್ಟರೆ ಆಯಿತು. ಇದೊಂದೇ ಬಾಕಿ. ನಾಡಿನ ಜನರ ಪ್ರೀತಿವಿಶ್ವಾಸ ವನ್ನು ಗಳಿಸಬೇಕಾದರೆ ಈಗಿನ ಕಾಲದಲ್ಲಿ 30 ಸಾವಿರ ರೂಪಾಯಿಗಳ ಕಾರು ಇವರಿಗೆ ಏತಕ್ಕೆಬೇಕು ? ಸುಮಾರು 8—10 ಸಾವಿರ ರೂಪಾಯಿಗಳ ಕಾರು ಇದ್ದರೆ ಸಾಕು. ಇದನ್ನು ತಾವು ಸರ್ಕಾರದವರ ಗಮ ನಕ್ಕೆ ತರಬೇಕೆಂದು ಕೇಳಿಕೊಳ್ಳುತ್ತೀದ್ದೇನೆ. ಇನ್ನೂ ಎಷ್ಟೋ ವಿಷಯಗಳಿವೆ. ಹೆಚ್ಚು ಕಾಲವನ್ನು ನಾನು ತೆಗೆದುಕೊಳ್ಳುವುದಿಲ್ಲ. ವಿರೋಧ ಪಕ್ಷದವರು ಸರ್ಕಾರ

(ಡಾ॥ ಸರ್ದಾರ್ ಬಿ. ಕೆ. ನಾಗೂರ್.)

ಮಾಡುವ ತಪ್ಪುಗಳನ್ನು ಬಹಳ ಸೂಕ್ಷ್ಮ ದೃಷ್ಟಿಯಿಂದ ವಿಚಾರಮಾಡಿ ನೋಡಿ, ಆ ತಪ್ಪುಗಳನ್ನು ಹೊರಗೆಡಹುವುದರಿಂದ, ದೇಶಕ್ಕೆ ಹೆಚ್ಚು ಲಾಭವಾಗುವುದು, ಮತ್ತು ಕರ್ಣಾಟಕ ರಾಜ್ಯದ ಪ್ರೀತಿ, ವಿಶ್ವಾಸವನ್ನು ಗಳಿಸಬಹುದು. ವಿರೋಧ ಪಕ್ಷದವರು ದೇಶದ್ರೋಹಿಗಳಲ್ಲ. ಅವರಲ್ಲಿ ಪವಿತ್ರವಾದ ಮನಸ್ಸು, ನಿರ್ಮಲವಾದ ನೀತಿ, ನಿತ್ಯಕರ್ತವ್ಯ ನಿರ್ವಹಣೆ, ಇರುವುದರಿಂದಲೇ ಕರ್ಣಾಟಕರಾಜ್ಯ ಇನ್ನೂ ಅಭಿವೃದ್ಧಿಯಾಗುವುದೆಂದು ನಾನು ಹೇಳುತ್ತೇನೆ. ಇಷ್ಟು ಮಾತನಾಡಲು ನನಗೆ ಕಟ್ಟಕಡೆಯದಾಗಿ ಆದರೂ ಮಾನ್ಯ ಅಧ್ಯಕ್ಷರು ಒಂದು ಅವಕಾಶವನ್ನು ಕಲ್ಪಿಸಿ ಕೊಟ್ಟುದಕ್ಕಾಗಿ, ಈ ನಾಲ್ಕು ಮಾತುಗಳನ್ನು ಈ ಸಭೆಯ ಮುಂದಿಟ್ಟು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಡಿ. ಟಿ. ಸೀತಾರಾಮರಾವ್ (ಭದ್ರಾವತಿ).—ಸಭಾಧ್ಯಕ್ಷರೇ, ಈ ಬಡ್ಜೆಟ್ಟನ್ನು ನಾನು ಸ್ವಾಗತಿಸುತ್ತಾ ಕೆಲವು ಮಾತುಗಳನ್ನು ಸರ್ಕಾರದ ಮುಂದೆ ಇಡಲು ಬಯಸುತ್ತೇನೆ. ಸರ್ಕಾರ ಕನಿಷ್ಠ ಕೂಲಿದರ ನಿಗದಿ ಮಾಡುವ ವಿಷಯದಲ್ಲಿ ಪ್ರಯತ್ನಪಟ್ಟು ಕೆಲವು ಕೈಗಾರಿಕೆಗಳಲ್ಲಿರತಕ್ಕ ಕಾರ್ಮಿಕರಿಗೂ ನೌಕರರಿಗೂ ಒಂದು ಒಪ್ಪಂದವನ್ನು ಮಾಡಿದೆ. ಅದು ಸ್ವಾಗತಾರ್ಹವಾದ ವಿಷಯ. ಆದರೆ ಅನೇಕ ಇಲಾಖೆಗಳಲ್ಲಿರತಕ್ಕ ಸರ್ಕಾರೀ ನೌಕರರಿಗೆ ಆ ಸೌಲಭ್ಯ ಇನ್ನೂ ದೊರಕಿಲ್ಲ. ಅದನ್ನು ದೊರಕಿಸಿಕೊಡಬೇಕು. ಸಮತಾವಾದ ಸಮಾಜ ರಚನೆ ಮಾಡುವ ಒಂದು ಯೋಜನೆಯಲ್ಲಿ ಕನಿಷ್ಠ ಜೀವನದ ಅಂತಸ್ತಿಗೂ, ಹೆಚ್ಚಿನ ಜೀವನದ ಅಂತಸ್ತಿಗೂ ಸರ್ಕಾರದಲ್ಲಿ ತೀವ್ರವಾಗಿ ಹೆಚ್ಚು ಕಡಮೆ ಇರಬಾರದು. ಈಗ ಕನಿಷ್ಠ ಜೀವನದ ಅಂತಸ್ತಿನವರ ಸಂಬಳವನ್ನು ಹೆಚ್ಚುಮಾಡಿ ಸರ್ಕಾರದಲ್ಲಿ ಹೆಚ್ಚಿಗೆ ಸಂಬಳವನ್ನು ತೆಗೆದುಕೊಳ್ಳುವ ಸರ್ಕಾರೀ ಅಧಿಕಾರಿಗಳ ಅಂತಸ್ತನ್ನು ಕಡಿಮೆಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನಮ್ಮ ದೇಶದಲ್ಲಿ ಕೇಂದ್ರ ಸರ್ಕಾರದ ಇಲಾಖೆಯವರಿಗೆ ಒಂದು ರೀತಿಯ ಸಂಬಳ, ಪ್ರಾಂತ ಸರ್ಕಾರದ ಇಲಾಖೆಯವರಿಗೆ ಒಂದು ರೀತಿಯ ಸಂಬಳ—ಹೀಗೆಲ್ಲಾ ಇರುವುದು ಅಷ್ಟು ಸಮಂಜಸವಾದುದಲ್ಲ. ಅಲ್ಲಿನವರೂ ಇಲ್ಲಿನವರೂ ಇಲಾಖೆಗೆ ಸೇರಿದ ಒಂದೇ ಭಾಗದಲ್ಲಿ ವಾಸವಾಗಿರುವಾಗ ಆಯಾ ದರ್ಜೆಯವರೆಲ್ಲರಿಗೂ ಒಂದೇ ರೀತಿಯಾದ ಸಮಾನತೆಯನ್ನು ಸಂಬಳ ಸಾರಿಗೆಗಳಲ್ಲಿ ತೋರಿಸಬೇಕು. ಸಂಬಳಗಳನ್ನು ಏರಿಸಬೇಕೆಂದು ತೆರಿಗೆಗಳನ್ನು ಹಾಕುತ್ತಾ ಹೋದರೆ, ಜನರಿಗೆ ಕೊಳ್ಳುವ ಶಕ್ತಿ ಬರಬೇಕಾದರೆ ಬಹಳ ಕಷ್ಟ. ಈ ಒಂದು ಭಾಗದಲ್ಲೂ ಅವರಿಗೆ ಸಮಾನತೆಯನ್ನುಂಟು ಮಾಡಬೇಕು. ಅದಕ್ಕಾಗಿ ಹೆಚ್ಚಿಗೆ ಸಂಬಳ ಪಡೆಯುವವರು ಅವರ ಜೀವನಮಟ್ಟವನ್ನು ಸ್ವಲ್ಪ ಕಡಮೆ ಮಾಡಿಕೊಳ್ಳಬೇಕು. ಈ ವಿಚಾರದ ಬಗ್ಗೆ ಸರ್ಕಾರದವರು ಗಮನ ಕೊಡಬೇಕೆಂದು ಈ ಮೂಲಕ ತಿಳಿವಳಿಕೆ ಕೊಡುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ರೈತ ಕೂಲಿಗಾರರಿಗೆ ಕೂಲಿ ದರವನ್ನು ನಿಗದಿ ಮಾಡುವ ಏರ್ಪಾಡನ್ನು ಇನ್ನೂ ನಮ್ಮ ಸರ್ಕಾರದವರು ಮಾಡಿಯೇ ಇಲ್ಲ. ಆ ರೀತಿ ದರವನ್ನು ನಿಗದಿ ಮಾಡುವ ಪ್ರಯತ್ನದಲ್ಲಿ ಸರ್ಕಾರದವರು ತೊಡಗಿದ್ದಾರೆಂದು ಅನೇಕ ಯೋಜನೆಗಳಲ್ಲಿ, ಭಾಷಣಗಳಲ್ಲಿ ಕೇಳಿದ್ದೇನೆ. ಆದರೆ ಇನ್ನೂ ಒಂದು ನಿರ್ದಿಷ್ಟವಾದ ತೀರ್ಮಾನವನ್ನು ಕೈಗೊಳ್ಳಲಿಲ್ಲ. ಈಗಿನ ಅಗ್ರಿಕಲ್ಚರಲ್ ಕೂಲಿಗಾರರಿಗೆ ದಿನಂ ಪ್ರತಿ ಕೇವಲ ಮೂರು ಆಣೆ, ನಾಲ್ಕು ಆಣೆ ಹೆಚ್ಚು ಕೂಲಿ ಕೊಟ್ಟರೆ ಅವರು ಎಷ್ಟೋ ಸಂತೋಷಪಡುತ್ತಾರೆ. ಈಗ ಅವರಿಗೆ ಆ ರೀತಿ ಇನ್ನೂ ಕೊಡದೆ ಇರುವುದು ಶೋಚನೀಯವಾಗಿದೆ. ಆದ್ದರಿಂದ ರೈತ ಕೂಲಿಗಾರರಿಗೆ ಯಾವುದಾದರೂ ಒಂದು ರೂಪದಲ್ಲಿ ಸರ್ಕಾರ ಒಂದು ಸೌಕರ್ಯವನ್ನುಂಟುಮಾಡಬೇಕು. ಶೇಕಡ 80 ಭಾಗದಷ್ಟು ರೈತಾಪಿ ಕ್ಷೇತ್ರ ಅಭಿವೃದ್ಧಿಯಾಗಬೇಕು ಎಂದು ಸರ್ಕಾರಕ್ಕೆ ಮನಸ್ಸು ಇದ್ದರೆ, ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿ ಕಡೆಗೆ ಗಮನಕೊಡಬೇಕಾಗಿದೆ. ನಮ್ಮ ಭಾಗದಲ್ಲಿ ಮಲೆನಾಡಿನವರಿಗೆ ಹಸಿಯ ಸೌದೆ ತರಲು ಲೈಸನ್ಸನ್ನು ಕೊಡುತ್ತಿದ್ದರು. ಇತ್ತೀಚೆಗೆ ಕಾಡನ್ನು ಬೆಳಸಬೇಕು, ಅದನ್ನು ಇನ್ನೂ ಅಭಿವೃದ್ಧಿಮಾಡಬೇಕು ಎಂದು ಹಸಿಯ ಸೌದೆಯನ್ನು ತರಿಸುವುದಕ್ಕೆ ಕೊಡುತ್ತಿದ್ದ ಲೈಸೆನ್ಸನ್ನು ನಿಲ್ಲಿಸಿದ್ದಾರೆ. ಕಾಡುಗಳಲ್ಲಿ ಒಣಸೌದೆ ಜನಗಳಿಗೆ ಆಗುವಷ್ಟು ಖಂಡಿತ ಇಲ್ಲ. ಆದ್ದರಿಂದ ಮಲೆನಾಡಿನ ಜನಗಳು ಬದುಕಬೇಕಾದರೆ ಜೀವನವನ್ನು ನಡೆಸಬೇಕಾದರೆ ನಿಜವಾಗಿ ಹಸಿಯ ಸೌದೆಯನ್ನೇ ತರಬೇಕಾಗಿದೆ. ಕಾಡಿನಲ್ಲಿ ಒಣಸೌದೆ ಇರುವುದಿಲ್ಲ. ಒಂದುವೇಳೆ ಹಸಿಯ ಸೌದೆಯನ್ನು ರೈತ ತೆಗೆದುಕೊಂಡುಬಂದರೆ ಅಧಿಕಾರಿಗಳ ಮುಂದೆ ಅವನು ದೊಡ್ಡ ತಪ್ಪಿತಸ್ಥನಾಗುತ್ತಾನೆ. ತನ್ನ ಜೀವನದಲ್ಲಿ ಬದುಕುವುದೇ ಕಷ್ಟವಾಗುತ್ತದೆ. ಕಾಡಿನಲ್ಲಿ ಒಣಸೌದೆ ವಿಶೇಷವಾಗಿ ಸಿಕ್ಕದೆ ಇರುವುದರಿಂದ ಹಿಂದೆ ಹಸಿಯಸೌದೆ ತರಿಸುವುದಕ್ಕೆ ಕೊಡುತ್ತಿದ್ದ ಲೈಸನ್ಸ್ ಪದ್ಧತಿಯನ್ನು ಈಗ ಪುನಃ ಜಾರಿಗೆ ತರುವಂತೆ ವ್ಯವಸ್ಥೆ ಮಾಡಬೇಕು. ಶಿವಮೊಗ್ಗ ಅರಸಾಳು, ಸಾಗರದಿಂದ ಎಷ್ಟೋ ವ್ಯಾಗನುಗಳಲ್ಲಿ ಹಸಿಯಸೌದೆ ಹೋಗುತ್ತಿದೆ. ಒಂದು ಕಡೆ ಕಾಡಿನ ಸಂಪತ್ತು ನಾಶವಾಗುತ್ತಿದೆ, ಇನ್ನೊಂದು ಕಡೆ ಕಾಡನ್ನು ರಕ್ಷಣೆ ಮಾಡಬೇಕು ಎಂದು ಸರ್ಕಾರದವರು ಹೇಳುತ್ತಾರೆ. ಅರ್ಥವೇನು? ರೈತಾಪಿ ಮನುಷ್ಯನಿಗೆ ಕಾಡನ್ನು ರಕ್ಷಣೆ ಮಾಡುವ ದೃಷ್ಟಿಯಿಂದ ಈ ಹಸಿಯ ಸೌದೆಯನ್ನು ತರಿಸುವುದಕ್ಕೆ ಲೈಸನ್ಸನ್ನು ಕೊಡುವುದನ್ನು ನಿಲ್ಲಿಸಿದ್ದಾರೆ. ರೈತರು ಕಷ್ಟಪಟ್ಟು ಕೆಲಸ ಮಾಡುವವರು. ಅವರಿಗೆ ಇಂತಹ ಅವಕಾಶವನ್ನು ಒದಗಿಸದೆ ಇರುವುದು ಶೋಚನೀಯವಾಗಿದೆ. ಒಂದುವೇಳೆ ಹತ್ತು ಒಣಸೌದೆಗಳ ತುಂಡನ್ನು ಹಾಕಿದಾಗ, ಅದರೊಳಗೆ ಇನ್ನೊಂದು ಹತ್ತು ಹಸಿಯಸೌದೆ ತುಂಡುಗಳನ್ನು ಕಾಡಿನಿಂದ ತಂದರೆ ಆತನು ಶಿಕ್ಷೆಗೆ ಗುರಿಯಾಗುತ್ತಾನೆ. ಈ ರೀತಿಯಾಗುತ್ತಿರುವುದನ್ನು ಖಂಡಿತವಾಗಿ ಜಾಗ್ರತೆ ನಿಲ್ಲಿಸಬೇಕೆಂದು ಸರ್ಕಾರದವರಲ್ಲಿ ಪ್ರಾರ್ಥನೆಮಾಡುತ್ತಿದ್ದೇನೆ.

ಮತ್ತೆ ಈ ಯೋಜನೆಗಳಲ್ಲಿ ಸರಕಾರ ಕೈಗಾರಿಕೆಗಳನ್ನು ಪ್ರಾರಂಭಿಸಿದೆ. ಉದಾಹರಣೆಗೆ ಹೊನ್ನೆಮರಡು ಯೋಜನೆಯನ್ನು ತೆಗೆದುಕೊಳ್ಳಬಹುದು. ಈ ಯೋಜನೆಯಲ್ಲಿ ಕೆಲಸ ಮಾಡಲು ಸ್ಥಳದಲ್ಲಿರುವವರಿಗೆ ಅವಕಾಶವನ್ನು ಕೊಡಬೇಕು. ಈಗ ಭದ್ರಾವತಿಯಲ್ಲಿ ಕಬ್ಬಿಣ ಕಾರ್ಖಾನೆಯಲ್ಲಿ ಒಂದು ರಿಕ್ರೂಟ್‌ಮೆಂಟ್ ಕಮಿಟಿ ಎಂಬುದು ಇದೆ. ಇದರಲ್ಲಿ ನೋಡಿದರೆ ಅಲ್ಲಿಯ ಸುತ್ತುಮುತ್ತಲಿನ ಸ್ಥಳದವರಿಗೆ ಸರಿಯಾದ ಅವಕಾಶಗಳು ದೊರೆಯುತ್ತಿಲ್ಲ. ಕಮಿಟಿಯವರು ಸರಕಾರದ ನೀತಿಯೇನಿದೆಯೋ ಅದರಂತೆ ಅನುಸರಿಸುವಾಗ ಮುಖ್ಯವಾಗಿ ಅಲ್ಲಿಯ ಸ್ಥಳದವರಿಗೆ ಹೆಚ್ಚಿನ ಅವಕಾಶ ಕೊಡಬೇಕು. ಸರಕಾರ ಹರಿಜನರಿಗೆ ಇಷ್ಟು, ಒಕ್ಕಲಿಗರಿಗೆ ಇಷ್ಟು ಎಂದು ನಿಗದಿ ಮಾಡಿರುವ ಸ್ಥಾನಗಳಲ್ಲಿ ಅದೇ ರೀತಿಯಲ್ಲಿ ಸ್ಥಳದಲ್ಲಿರುವ ಹರಿಜನರಿಗೆ ಮತ್ತು ಒಕ್ಕಲಿಗರಿಗೆ ಪ್ರಥಮ ಪ್ರಾಶಸ್ತ್ಯ

ದೊರೆಯುವಂತೆ ಮಾಡಬೇಕು. ಹೊರಗಿನಿಂದ ಬರುವ ಹರಿಜನರಿಗೇ ಆಗಲಿ, ಲಿಂಗಾಯಿತರಿಗೇ ಆಗಲಿ ಮೊದಲು ಪ್ರಾಶಸ್ತ್ಯ ಕೊಡಬೇಕೆಂದು ಹೇಳುವುದು ಸರಿಯಲ್ಲ. ಆದುದರಿಂದ ಸ್ಥಳದಲ್ಲಿರುವ ನಿರುದ್ಯೋಗಿಗಳಾದ ಆಯಾ ಜನಾಂಗದವರಿಗೆ ಮೊದಲು ಅವಕಾಶ ಕೊಟ್ಟು ಅನಂತರ ಇತರರಿಗೆ ಅವಕಾಶ ಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಈ ಹೊನ್ನೆಮರಡು ಯೋಜನೆಗಾಗಿ ಲಕ್ಷಾಂತರ ರೂಪಾಯಿಗಳ ನಾಟಾಗಳನ್ನು ವ್ಯಾರಾಟ ಮಾಡಿದರು. ಅರಣ್ಯದಿಂದ ಬರುವ ಈ ಉತ್ಪನ್ನಗಳಿಂದ ಸರಕಾರಕ್ಕೆ ಆದಾಯ ಬರುತ್ತದೆ. ಆದರೆ ಈ ನಾಟಾಗಳನ್ನು ಹರಾಜು ಮಾಡುವುದರಿಂದ ಸರಕಾರಕ್ಕೆ ನಷ್ಟವುಂಟಾಗುತ್ತದೆ. 50 ಲಕ್ಷ ಬರುವ ಕಡೆ, ನಾಲ್ಕು ಲಕ್ಷ ರೂಪಾಯಿಗಳ ಆದಾಯ ಬರುತ್ತಿದೆ ಎಂದು ಕೇಳಿದ್ದೇನೆ. ಆದುದರಿಂದ ಈ ರೀತಿಯಾದ ಹರಾಜುಗಳನ್ನು ತಪ್ಪಿಸಿ ಸರಿಯಾಗಿ ಮಾರಾಟ ಮಾಡುವ ವ್ಯವಸ್ಥೆಯನ್ನು ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಭದ್ರಾವತಿಯಲ್ಲಿ ಕಬ್ಬಿಣದ ಮತ್ತು ಕಾಗದದ ಕಾರ್ಖಾನೆಗಳಿವೆ. ಈ ಎರಡು ಕಾರ್ಖಾನೆಗಳೂ ಸರಕಾರದ ಮ್ಯಾನೇಜುಮೆಂಟಿನಲ್ಲಿವೆ. ಇಲ್ಲಿನ ಕಾರ್ಖಾನೆಯ ಆಡಳಿತವರ್ಗಕ್ಕೂ ಕಾರ್ಮಿಕ ಸಂಘದವರಿಗೂ, ನಡೆದ ಒಪ್ಪಂದದ ಪ್ರಕಾರ ಸರಿಯಾದ ವೇತನಗಳನ್ನು ಕೊಡಬೇಕೆಂದು ನಿರ್ಧರಿಸಲಾಗಿತ್ತು. ಇದಕ್ಕೆ ನಮ್ಮ ರಾಜಪ್ರಮುಖರೂ, ಅರ್ಥಿಕಸಚಿವರೂ ಮೆಚ್ಚಿಗೆಯನ್ನು ವ್ಯಕ್ತಪಡಿಸಿದ್ದಾರೆ ; ಮತ್ತು ಈ ಸಂದರ್ಭದಲ್ಲಿ ಡಿಯರ್‌ನೆಸ್ ಅಲೋಯೆನ್ಸನ್ನು ಬೆಂಗಳೂರು ಮತ್ತಿತರ ಕಡೆಗಳಲ್ಲಿ ಕೊಡುವಂತೆಯೇ ಇಲ್ಲಿಯ ಕಾರ್ಮಿಕರಿಗೂ ಕೊಡಬೇಕಾದುದು ಅಗತ್ಯ. ಕಷ್ಟಪಟ್ಟು ಕೆಲಸಮಾಡತಕ್ಕ ಈ ಕಾರ್ಮಿಕರಿಗೆ ಸರಕಾರ ಬೆಂಬಲ ಕೊಟ್ಟು ಸಹಾಯ ಮಾಡಬೇಕು. ಯಾವ ರೀತಿಯಾಗಿ ಒಂದು ಸಮಾನತೆಯ ದೃಷ್ಟಿ ಇರಬೇಕೋ ಆ ರೀತಿಯಾಗಿ ಈಗ ಡಿಯರ್‌ನೆಸ್ ಅಲೋಯೆನ್ಸ್ ಕೊಡುತ್ತಿಲ್ಲ. ಹಿಂದೆ ಯಾವ ರೀತಿಯಾದ ಒಪ್ಪಂದವಾಯಿತೋ ಅದನ್ನು ಅನುಸರಿಸಿ ಇವರಿಗೆಲ್ಲ ಅನುಕೂಲವಾಗುವಂತೆ ಮಾಡಬೇಕು.

ಇನ್ನು ಕಾರ್ಖಾನೆಯಲ್ಲಿ ಕೆಲಸ ಮಾಡುವ ಕೂಲಿಗಾರರಿಗೆ ಜಮೀನು ಕೊಡತಕ್ಕ ವಿಷಯದಲ್ಲಿ ಹೇಳಬೇಕಾಗಿದೆ. ಕಾರ್ಖಾನೆಯ ನೌಕರರು ಬಡ ನೌಕರರು ಮತ್ತು ಮಧ್ಯಮ ವರ್ಗಕ್ಕೆ ಸೇರಿದವರು. ಇವರುಗಳಿಗೆ ಜಮೀನು ಮಾಡಿಕೊಳ್ಳಲು ಅವಕಾಶ ಕೊಡಬೇಕು. ಬಹುತೇಕ ಬಡವರಿಗೇ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳುಗಳು ಹೆಚ್ಚು. ಕೆಲವರಿಗೆ ಹನ್ನೆರಡು ಮಕ್ಕಳಿರುತ್ತವೆ. ಅವರ ಜೀವನ ಬಹಳ ಕಷ್ಟ. ಅವರುಗಳು ಏನೋ ಒಂದೆರಡು ಎಕರೆ ಜಮೀನು ಮಾಡಿಕೊಂಡು ಅವರ ಜೀವನಕ್ಕೆ ಅನುಕೂಲ ಪಡಿಸಿಕೊಂಡರೆ ಅವರಿಗೆ ಅನುಕೂಲವಾಗುತ್ತದೆ. ಆದುದರಿಂದ ಇಂತಹ ಬಡ ಕಾರ್ಮಿಕರಿಗೆ ಜಮೀನನ್ನು ಕೊಳ್ಳಲು ಅವಕಾಶವನ್ನು ಮಾಡಿಕೊಡಬೇಕೆಂದು ಸರಕಾರವನ್ನು ಕೇಳಿಕೊಳ್ಳುತ್ತೇನೆ.

ಗ್ರಾಮಾಂತರ ಕೈಗಾರಿಕೆಗಳ ವಿಷಯದಲ್ಲಿ ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಅಷ್ಟು ಉತ್ತೇಜನ ಕೊಡುತ್ತಿಲ್ಲ. ಇದರ ಕಡೆ ಸರಕಾರ ಸಹಾಯ ಮಾಡಬೇಕು, ಅಲ್ಲದೆ ಈ ಭದ್ರಾವತಿಯಲ್ಲಿ ಕಾರ್ಮಿಕರಿಗೆ ಸರಿಯಾಗಿ ಕುಡಿಯುವ ನೀರು ಸರಬರಾಜು ಆಗುತ್ತಿಲ್ಲ. ಮ್ಯಾನೇಜುಮೆಂಟಿಗೂ ಮತ್ತು ಮುನಿಸಿಪಾಲಿಟಿಯವರ ಅವ್ಯವಸ್ಥೆಗಳಿಂದ ಈ ತೊಂದರೆಗಳಾಗಿವೆ. ಇವನ್ನು ಸರಿಪಡಿಸಬೇಕು.

ಭದ್ರಾವತಿಯಲ್ಲಿ ಒಂದು ಇಂಜಿನಿಯರಿಂಗ್ ಸ್ಕೂಲನ್ನು ಸ್ಥಾಪನೆ ಮಾಡಲು ಸರಕಾರ ಸಹಾಯ ಮಾಡಬೇಕು. ಏಕೆಂದರೆ ಇದರಿಂದ ಮಲೆನಾಡಿನ ಅಭಿವೃದ್ಧಿಯಾಗಲು ಅನುಕೂಲವಾಗುತ್ತದೆ.

ಮತ್ತೆ ಈ ಭದ್ರಾವತಿಯಿಂದ ಅಜ್ಜಂಪುರಕ್ಕೆ ಹೋಗಬೇಕಾದರೆ ಮಧ್ಯದಲ್ಲಿ ಒಂದು ದ್ವೀಪದಂತಿರುವ ಗುಡ್ಡವಿದೆ. ಇದರಿಂದಾಗಿ ಹೊಸದುರ್ಗ, ತರೀಕೆರೆ, ಚನ್ನಗಿರಿ, ಹೀಗೆ ಸುತ್ತಿಕೊಂಡು ಹೋಗಬೇಕಾಗಿದೆ. ಸರಿಯಾದ ರಸ್ತೆ ಸೌಕರ್ಯಗಳಿಲ್ಲ. ಈ ಕಡೆ ರಸ್ತೆ ಮಾಡುವುದು ಬಹಳ ಅಗತ್ಯವಾಗಿದೆ. ನಮ್ಮ ಪಿ.ಡಬ್ಲ್ಯು. ಇಲಾಖೆಯವರು ಈ ಭದ್ರಾವತಿ ಉಬ್ರಾಣಿ ಅಜ್ಜಂಪುರ ರಸ್ತೆಯನ್ನು ಮಾಡಿಸಿ ಕೊಡಬೇಕೆಂದು ಮಾನ್ಯ ಮಂತ್ರಿಗಳನ್ನು ಪ್ರಾರ್ಥನೆಮಾಡಿ, ಈಗ ಅರ್ಥಿಕ ಮಂತ್ರಿಗಳು ಮಂಡಿಸಿರುವ ಆಯವ್ಯಯದ ಪಟ್ಟಿಯನ್ನು ಸ್ವಾಗತಿಸಿ, ಅಧ್ಯಕ್ಷರು ಇಷ್ಟು ಅವಕಾಶವನ್ನು ಕಲ್ಪಿಸಿ ಕೊಟ್ಟಿದ್ದಕ್ಕಾಗಿ ಅವರನ್ನೂ ವಂದಿಸಿ ಈ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಬಿ. ಎಸ್. ಶಂಕರಪ್ಪ (ಹೊಸದುರ್ಗ).—ಮಾನ್ಯ ಅಧ್ಯಕ್ಷರೇ, ಈ ಸಭೆಯ ಮುಂದೆ ಸರಕಾರದವರು ಮಂಡಿಸಿರುವ ಆಯವ್ಯಯದ ಪಟ್ಟಿಯ ವಿಷಯದಲ್ಲಿ ನಾನು ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಮೊದಲು ಜವಾಬ್ದಾರಿ ಸರಕಾರ ಬರುವುದಕ್ಕೆ ಮುಂಚೆ ಒಂದು ಆಯವ್ಯಯ ಮಂಡಿಸುತ್ತಿದ್ದಾಗ ಹಣಕಾಸಿನ ಶಾಖೆಯು ಬಡ್ಜೆಟ್ಟನ್ನು ಯಾವ ಯಾವ ರೀತಿ ಯಾವ ಯಾವ ಹೆಡ್ಡಿನಲ್ಲಿ ಯಾವ ಯಾವ ಕೆಲಸಗಳಿಗಾಗಿ ನಿಗದಿ ಮಾಡಿದೆ ಎನ್ನುವ ಪರಿಚಯಮಾಡಿಕೊಡುವ ಪದ್ಧತಿ ಹಿಂದಿನಿಂದಲೂ ಎಂದರೆ ರೆಪ್ರೆಸೆಂಟೇಟಿವ್ ಅಸೆಂಬ್ಲಿಯ ಕಾಲದಿಂದಲೂ ಮತ್ತು ರೆಜಿಸ್ಲೇಟಿವ್ ಕೌನ್ಸಿಲ್ಲಿನಲ್ಲಿಯೂ ಇತ್ತು. ಇದೇ ರೀತಿ ಇತರ ಸಂಸ್ಥಾನಗಳಲ್ಲಿಯೂ ಇದೆ ಎಂದು ನಾನು ಕೇಳಿದ್ದೇನೆ.

ಶ್ರೀ ಟಿ. ಮರಿಯಪ್ಪ.—ಸ್ಕೂಲನ್ನು ಇಡಬೇಕೆಂದು ಹೇಳುತ್ತಿದ್ದೀರೇನು ?

ಶ್ರೀ ಬಿ. ಎಸ್. ಶಂಕರಪ್ಪ.—ಅಲ್ಲ. ಈಗ ರಿಪೇರ್ಸ್ ಫಾರ್ ಚಾನ್ಸ್ ಹೆಡ್ 168 ಎಂದಿದೆ. ಆದರೆ ನಮಗೆ ಯಾವ ಯಾವ ಬಾಬುಗಳಿಗೆ ಎನ್ನುವ ವಿವರಗಳನ್ನು ಸರಿಯಾಗಿ ವಿಶದಪಡಿಸಿಲ್ಲ. ಆದುದರಿಂದ ಈ ರೀತಿಯ ಒಂದು ಪರಿಚಯವನ್ನು ಮಾಡಿಕೊಡುವುದು ಒಳ್ಳೆಯದು ; ಮತ್ತು ಈ ಅಭ್ಯಾಸವನ್ನು ಮುಂದುವರಿಸಿ ಕೊಂಡುಬರಬೇಕೆಂದು ನಾನು ಸಲಹೆ ಮಾಡುತ್ತೇನೆ.

ಎರಡನೆಯದಾಗಿ ಈಗ ನಾಲ್ಕೈದು ವರ್ಷಗಳಿಂದಲೂ ನಾವು ನೋಡುತ್ತಿದ್ದೇವೆ. ರಿಸರ್ವ್ ಫಂಡು ಐದು ಕೋಟಿಯಿದ್ದದ್ದನ್ನು ಖರ್ಚುಮಾಡಿ ಒಂದು ಕೋಟಿ ರೂಪಾಯಿಗಳ ಸಾಲ ಮಾಡಿದ್ದಾರೆ. ಇದಕ್ಕೆ ಕಾರಣವೇನು? ಏತಕ್ಕೋಸ್ಕರ ಜಾಸ್ತಿಯಾಗಿ ಖರ್ಚಾಯಿತು ಎಂಬುದು ಗೊತ್ತಾಗಲಿಲ್ಲ. ಸರಕಾರದವರು ಸ್ವಾಭಾವಿಕವಾಗಿ ಅಧಿಕಾರಕ್ಕೆ ಬರುವ ಮುನ್ನ ಜನಗಳ ಮುಂದೆ ಕೆಲವು ವಾಗ್ದಾನಗಳನ್ನು ಮಾಡಿ ಬರುತ್ತಾರೆ. ಆದರೆ ಅಧಿಕಾರಕ್ಕೆ ಬಂದ ಮೇಲೆ ಆ ಮಾತುಗಳನ್ನೆಲ್ಲ ಸಂಪೂರ್ಣವಾಗಿ ಮರೆಯುತ್ತಾರೆ. ಉದಾಹರಣೆಗೆ ಒಂದೆರಡು ಅಂಶಗಳನ್ನು ಹೇಳಬಹುದು. ಈ ಕಾಂಗ್ರೆಸ್ಸಿನ ಸರಕಾರವು ಅಧಿಕಾರಕ್ಕೆ ಬರುವ ಮುನ್ನ ಎಂಟು ಜನ ಡೆಪ್ಯುಟಿ ಕಮೀಷನರುಗಳು ಏಕಿರಬೇಕು ಎಂದು ಹೇಳುತ್ತಿದ್ದವರು ಅನಂತರ ಒಂಬತ್ತು ಜನ ಡೆಪ್ಯುಟಿ ಕಮಿಷನರುಗಳಾದರು. ಹೀಗೇಕಾಯಿತು ಎಂದು ನಾನು ಕೇಳಬೇಕಾಗಿದೆ. ಇವರು ಅಧಿಕಾರಕ್ಕೆ ಬಂದ ಒಂದೆರಡು ವರ್ಷಗಳಲ್ಲಿ ಈ ಅಧಿಕಾರಿಗಳ ಸಂಖ್ಯೆ ವಿಪರೀತವಾಗಿ ಹೆಚ್ಚಿದೆ. ತತ್ರಾಪಿ 1952ನೆಯ

(ಶ್ರೀ ಬಿ. ಎಸ್. ಶಂಕರಪ್ಪ.)

ಇಸವಿಯಿಂದ 1957ನೆಯ ಇಸವಿಯ ಕಾಲದಲ್ಲಿ ಅನೇಕ ಹೊಸ ಜಾಗಗಳನ್ನು ನಿರ್ಮಾಣ ಮಾಡಿ ಸರ್ಕಾರದ ಹಣವನ್ನು ಪೋಲು ಮಾಡಿದ್ದಾರೆ. ಇದು ತಲೆ ಶಿರೋಭಾರವಾಗಿದೆ. ಇದಕ್ಕೇನು ಕಾರಣ? ಹಳ್ಳಿಗಳನ್ನು ನಾವು ಸ್ವಯಂ ಪರಿಪೂರ್ಣವಾಗಿ ಮಾಡಿ ಸರಕಾರದ ವರಮಾನ ದೇಶಾದ್ಯಂತವೂ ಖರ್ಚಾಗದೆ ಕೇವಲ ದೊಡ್ಡ ದೊಡ್ಡ ಪಟ್ಟಣವಾಸದವರಿಗೆ ಖರ್ಚು ಮಾಡುತ್ತಿರುವ ಬೇಜವಾಬ್ದಾರಿ ಸರ್ಕಾರದ ನೀತಿಯನ್ನು ತಪ್ಪಿಸಿ ಹಳ್ಳಿಗಳನ್ನು ಪುನರುದ್ಧಾರ ಮಾಡುತ್ತೇವೆಂದು ಮಾಡಿದ ವಾಗ್ದಾನ ಏನಾಗಿದೆ ? ಆ ಮಾತುಗಳೆಲ್ಲಾ ಅಂದಿಗೇ ಹೊರಟು ಹೋದವು ಎಂಬ ಭಾವನೆ ಜನರಲ್ಲುಂಟಾಗಿದೆ. ಬಡ್ಜೆಟ್ಟಿನ ಖೋತಾ ಬೇರೆ ಎದ್ದು ಕಾಣುತ್ತಿದೆ. ಇದಕ್ಕೆ ಕಾರಣ ಒಂದು ಕಡೆ ಅತಿವ್ಯಯ, ಇನ್ನೊಂದು ಕಡೆ ಅನವ್ಯಯ. ಸರಕಾರದ ಆದಾಯವನ್ನು ಹೆಚ್ಚಿಸಿಕೊಂಡು ಈ ಖೋತಾವನ್ನು ಸರಿಪಡಿಸಿಕೊಳ್ಳುತ್ತೇವೆಂದು ಹೇಳುವುದಕ್ಕೆ ಬದಲಾಗಿ ನಿಮ್ಮ ವ್ಯಥಾ ಖರ್ಚುಗಳನ್ನು ಕಡಮೆ ಮಾಡಿಕೊಳ್ಳುವುದನ್ನು ಅಭ್ಯಾಸ ಮಾಡಬೇಕು. ಅದನ್ನು ಮಾಡದೆ ಸರ್ಕಾರದ ಉಳಿವಿಗೆ ಬೇರೆ ಮಾರ್ಗವೇ ಇಲ್ಲ. ಏಕೆಂದರೆ ಇದನ್ನು ಬಿಟ್ಟರೆ ನೀವು ಇಲ್ಲವೇ ಸಾಲವೆತ್ತಬೇಕು ಅಥವಾ ತೆರಿಗೆ ಹಾಕಬೇಕು. ಹೀಗಿರುವಲ್ಲಿ ಖರ್ಚನ್ನು ಕಡಮೆ ಮಾಡುವ ಉಪಾಯವನ್ನು ಸರಕಾರದವರೇಕೆ ಇನ್ನೂ ಯೋಚನೆ ಮಾಡಿಲ್ಲವೋ ಗೊತ್ತಿಲ್ಲ. ದಯವಿಟ್ಟು ತಮ್ಮ ಖರ್ಚು ವೆಚ್ಚಗಳ ಕಡೆ ಗಮನಕೊಟ್ಟು ತಾವು ಹಿಂದೆ ಹಳ್ಳಿಗಳವರ ವಿಷಯದಲ್ಲಿ ಕೊಟ್ಟ ವಾಗ್ದಾನವನ್ನು ಪರಿಪಾಲಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಟಿ. ಮರಿಯಪ್ಪ.—ತಾವೇ ನೋಡಬಹುದು, ಇಂಟೆರಿಮ್ ಬಡ್ಜೆಟ್ಟು ಹನ್ನೊಂದು ಕೋಟಿ ಡಿಫಿಸಿಟ್ ತೋರಿಸುತ್ತಿತ್ತು. ಈ ಬಡ್ಜೆಟ್ಟು ಒಂಬತ್ತು ಕೋಟಿ ಚಿಲ್ಲರೆಯಷ್ಟು ಮಾತ್ರ ತೋರಿಸಿ ಖರ್ಚನ್ನು ಕಡಮೆ ಮಾಡಿದೆ.

ಶ್ರೀ ಬಿ. ಎಸ್. ಶಂಕರಪ್ಪ.—ನೀವು ಮಾಡುತ್ತಿರುವ ಅತಿವ್ಯಯವನ್ನು ಉದಹರಿಸುವುದಾದರೆ 50 ಸಿವಿಲ್ ಕಾಮಗಾರಿಗಳು ಎಂಬ ಭಾಗವನ್ನು ನೋಡಿ. ಅಲ್ಲಿ ಸಬ್ ಅಸಿಸ್ಟೆಂಟ್ ಎಂಜಿನಿಯರುಗಳಿಗೆ, ಅಸಿಸ್ಟೆಂಟ್ ಎಂಜಿನಿಯರುಗಳಿಗೆ, ಸಬ್ ಓವರ್ಸಿಯರುಗಳಿಗೆ ಬಿಲ್ಡಿಂಗ್‌ಗಳನ್ನು ಕಟ್ಟುವ ಯೋಜನೆ ಮಾಡಿರುವುದನ್ನು ತಿಳಿಸಿದ್ದೀರಿ. ಒಬ್ಬ ಸಬ್ ಅಸಿಸ್ಟೆಂಟ್ ಎಂಜಿನಿಯರಿಗೆ ಕ್ವಾರ್ಟರುಗಳನ್ನು ಕಟ್ಟಿಸಿಕೊಡುವುದಕ್ಕೆ 13,000 ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೀರಲ್ಲ. ಇಂಥ ದೊಡ್ಡ ದೊಡ್ಡ ಬಂಗಲೆಗಳನ್ನು ಕಟ್ಟಿಸಿ ಕೊಡುವುದು ದೇಶದ ಉದ್ಧಾರಕ್ಕಲ್ಲ. ಒಬ್ಬ ಸಬ್ ಅಸಿಸ್ಟೆಂಟ್ ಇಂಜಿನೆಯರಿಗೆ ಒಬ್ಬ ಹೆಂಡತಿ ನಾಲ್ಕಾರು ಮಕ್ಕಳು ಜವಾನರು ಇರಬಹುದು. ಅಂಥವರಿಗೆ ಇಷ್ಟೊಂದು ಖರ್ಚಿನ ಮನೆಯೇ ! ನಾನೂ ಅನೇಕ ದನಕರುಗಳನ್ನು ಕಟ್ಟಿಕೊಂಡು ಮಕ್ಕಳು ಮರಿಗಳೊಂದಿಗೆ ಕೇವಲ ಐದು-ಆರು ಸಾವಿರ ರೂಪಾಯಿಗಳ ಖರ್ಚಿನಲ್ಲಿ ಸಾಮಾನ್ಯ ಮನೆಯನ್ನು ಕಟ್ಟಿಕೊಂಡು ವಾಸಮಾಡುತ್ತಿಲ್ಲವೇ ! ಹೀಗೆ ಸಣ್ಣ ಸಣ್ಣ ಮನೆಗಳನ್ನು ಕಟ್ಟಿಕೊಂಡು ವಾಸ ಮಾಡುವುದಕ್ಕೆ ಸಾಧ್ಯವಿರುವಾಗ 18-20 ಸಾವಿರ ರೂಪಾಯಿಗಳನ್ನು ಖರ್ಚು ಮಾಡುವುದು ಸರಿಯಲ್ಲ. ಇದಕ್ಕೆ ಒದಗಿಸಿದ್ದ ಹಣದಲ್ಲಿ ಹೋದವರ್ಷ ಆಗಲೇ ಸ್ವಲ್ಪ ಭಾಗ ಖರ್ಚು ಮಾಡಿದ್ದೀರಿ. ಆ ಅಂದಾಜಿನಂತೆ ಈಗ ಖರ್ಚುಮಾಡಲೇ ಬೇಕು. ಆದರೂ ಇನ್ನು ಮುಂದಕ್ಕಾದರೂ ಖರ್ಚನ್ನು ಕಡಮೆಮಾಡುವ ಅಭ್ಯಾಸವನ್ನು ಮಾಡಿಕೊಳ್ಳಬೇಕೆಂದು ನಾನು ಸರ್ಕಾರದವರಿಗೆ ಹೇಳಬಯಸುತ್ತೇನೆ. ಎರಡನೆಯದಾಗಿ ಇಲ್ಲಿಯೋ ಬೆಂಗಳೂರಿನಲ್ಲಿ ಮಂತ್ರಿಗಳಿಗೆಂದು ಜಯಮಹಲ್ ಬಡಾವಣೆಯಲ್ಲಿ ಕಟ್ಟಿರುವ ಮನೆಗಳನ್ನು ನೋಡಿ, ಅವಕ್ಕಾಗಿ ಒಂದೂವರೆ ಲಕ್ಷವೋ, ಎರಡು ಲಕ್ಷವೋ ಖರ್ಚುಮಾಡಿದ್ದೀರಿ. ಆದರೆ ಇವತ್ತಿಗೂ ಅಲ್ಲಿ ಯಾರೂ ವಾಸಮಾಡುತ್ತಿಲ್ಲ. ಮಿಗಿಲಾಗಿ ಮಂತ್ರಿಗಳು ತಮಗಾಗಿ ವಾಸಕ್ಕೆಂದು ಏರ್ಪಡಿಸಿರುವ ಈ ಮನೆಗಳನ್ನು ಬಿಟ್ಟು ಗೆಸ್ಟ್‌ಕ್ವಾರ್ಟರುಗಳಲ್ಲಿ ತಾವು ಸೇರಿಕೊಂಡು ಈ ಸಭೆಯ ಸದಸ್ಯರುಗಳಿಗೆ ಇಳಿದುಕೊಳ್ಳುವುದಕ್ಕೆ ಅವಕಾಶವಿಲ್ಲದಂತೆಮಾಡಿ ನಮಗೆ ಸಿದ್ದಿರೋಡ್ ಮುಂತಾದ ಕಡೆಗಳಲ್ಲಿ ಬಾಡಿಗೆಗೆ ಮನೆಗಳನ್ನು ತೆಗೆದುಕೊಂಡು ಅದಕ್ಕಾಗಿ ತಿಂಗಳಿಗೆ 1,300 ರೂಪಾಯಿಗಳಷ್ಟು ಬಾಡಿಗೆ ಕೊಡುತ್ತಿದ್ದಾರೆ! ಇತ್ತ ಎರಡು ಲಕ್ಷ ರೂಪಾಯಿಗಳನ್ನು ಹಾಕಿದ್ದು waste ಆಯಿತು. ಅತ್ತ ವ್ಯಥಾ ಬಾಡಿಗೆ ಕೊಡುತ್ತಿದ್ದೀರಿ. ಈ ರೀತಿ ಅತಿವ್ಯಯವಾಗುತ್ತಿರುವುದನ್ನು ನಿಲ್ಲಿಸಬೇಕೆಂದು ನಾನು ಸಲಹೆ ಮಾಡುತ್ತೇನೆ. ಅಲ್ಲದೆ ಸ್ವಾಭಾವಿಕವಾಗಿ, ನಮ್ಮ ಸರ್ಕಾರದ ಮಂತ್ರಿಗಳು ಈಗ ಆಡಳಿತದಲ್ಲಿದ್ದರೂ ಕೇವಲ ಹಳ್ಳಿಗಳಲ್ಲೇ ಹುಟ್ಟಿ, ಅಲ್ಲಿನ ಬಡತನ, ಕಷ್ಟ ಸುಖಗಳನ್ನು ಅರಿತವರಾಗಿರುವುದರಿಂದ, ಅವರೇನೂ ಪಾಶ್ಚಾತ್ಯ ಪದ್ಧತಿಗಳನ್ನನುಸರಿಸದೆ ಸರಳ ಜೀವಿಗಳಾಗಿ ಇರತಕ್ಕ accommodationನಲ್ಲಿ ಸರಿಪಡಿಸಿಕೊಂಡು ಹೋಗುತ್ತಾರೆಂದು ನಂಬಿದ್ದೇವೆ. ಆ ರೀತಿ ಖರ್ಚನ್ನು ನಾನಾ ವಿಧದಲ್ಲಿ ಕಡಮೆ ಮಾಡಿಕೊಂಡು ಹಳ್ಳಿಗಳ ಅಂತಸ್ತನ್ನು ಉತ್ತಮಪಡಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಆಮೇಲೆ ಹಣ ಹೇಗೆ ಅನವ್ಯಯವಾಗುತ್ತಿದೆ ಯೆಂಬದರ ಬಗ್ಗೆ ಸ್ವಲ್ಪ ಹೇಳಬಯಸುತ್ತೇನೆ. ಮಂತ್ರಿಗಳು ಕಾರುಗಳನ್ನು ಕೊಂಡುಕೊಂಡಿರುವುದನ್ನು ನೋಡಿ. ಎಲ್ಲ ಮಂತ್ರಿಗಳಿಗೂ ಒಂದೊಂದು ಕಾರನ್ನು ಕೊಡುವುದು ಅನಾವಶ್ಯಕವಾಗಿತ್ತು. ಒಂದೆರಡು ಕಾರುಗಳನ್ನು ಮಾತ್ರ ಇಟ್ಟುಕೊಂಡು, ಕೆಲವು ಮಂತ್ರಿಗಳು ಆಫೀಸಿನಲ್ಲಿರುವದು, ಆ ಸಂದರ್ಭದಲ್ಲಿ ಮಿಕ್ಕ ಮಂತ್ರಿಗಳು ಕಾರುಗಳನ್ನು ಉಪಯೋಗಿಸಿಕೊಳ್ಳುವ ಏರ್ಪಾಡು ಮಾಡಬಹುದಾಗಿತ್ತು. ಅದು ಬಿಟ್ಟು ತಾವೀಗ ಮಾಡಿರುವುದು ಸರ್ಕಾರಿ ಬಾಬುಗಳನ್ನು ತಮ್ಮ ಪಕ್ಷದ ಪ್ರಭಾವವನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿ, ತಮ್ಮ ಅಭ್ಯುದಯಕ್ಕಾಗಿ, ತಾವು ಚುನಾವಣೆಗಳಲ್ಲಿ ಜಯಗಳಿಸುವುದಕ್ಕಾಗಿ ಉಪಯೋಗ ಮಾಡಿರುವುದು ಸರಿಯಲ್ಲ. ಇಂಥದಕ್ಕೆಲ್ಲಾ ಕಾರನ್ನು ಉಪಯೋಗಮಾಡಿ ಅದು ಡ್ಯಾಮೇಜ್ ಆದರೆ ಕೊನೆಗೆ ಯಾರಿಗೆ ನಷ್ಟವಾಗುತ್ತದೆ? ಹೀಗೆ ಸರ್ಕಾರದ ಹಣವನ್ನು, ನಾವು ಕೊಡುವ ಕಂದಾಯದ ಹಣವನ್ನು, ಪಕ್ಷದ ಬೆಳವಣಿಗೆಗೆ, ಪಕ್ಷದ ಅಭ್ಯರ್ಥಿಗಳ ಅಭ್ಯುದಯಕ್ಕೆ ಉಪಯೋಗಿಸುವುದನ್ನು ತಡೆಗಟ್ಟಬೇಕೆಂದು ನಾನು ಸಲಹೆ ಮಾಡುತ್ತೇನೆ.

ಆಮೇಲೆ, ಮಂತ್ರಿಗಳು ಎಷ್ಟು ಸಂಚಾರ ಮಾಡುತ್ತಿದ್ದಾರೆ, ಆ ಬಗ್ಗೆ ಎಷ್ಟು ಪ್ರಯಾಣ ಭತ್ಯ ತೆಗೆದುಕೊಳ್ಳುತ್ತಿದ್ದಾರೆ, ಇದರಿಂದಾಗಿ ಸಾರ್ವಜನಿಕರು ಎಷ್ಟು ಹಣ ಖರ್ಚು ಮಾಡಿಕೊಂಡು ಇವರಿಗಾಗಿ ಕಾದು ನೋಡುತ್ತಿರಬೇಕಾಗಿದೆ ಎಂಬದನ್ನೂ ನೋಡಬೇಕು. ಇಷ್ಟಾದರೂ ಇವರುಗಳು ನಿಜವಾಗಿ ಸಂಚಾರ ಕಾಲದಲ್ಲಿ ಮುಖ್ಯವಾಗಿ ನಡೆಯ ಬೇಕಾದ ಕೆಲಸಗಳನ್ನು ನೋಡುತ್ತಾರೆಯೇ ? ಇವರು ಹೋದ ಕಡೆಗಳಲ್ಲೆಲ್ಲಾ ಅಲ್ಲಿನ ಕಾಂಗ್ರೆಸ್ ಆಫೀಸನ್ನು ನೋಡುವುದು, ಡಿಸ್ಟ್ರಿಕ್ಟ್ ಬೋರ್ಡು ಅಥವಾ ಮ್ಯುನಿಸಿಪಲ್ ಆಫೀಸಿನಲ್ಲಿ ಚಿನ್ನವತ್ತಳೆ ತೆಗೆದುಕೊಂಡು ಭಾಷಣ ಮಾಡುವುದು...

ಇದೇ ಆಯಿತು. ಉದಾಹರಣೆಗೆ ನಮ್ಮ ತಾಲ್ಲೂಕಿನಲ್ಲೇ ಕೆಲವು ಕೆಲಸಗಳು ಷುರುವಾಗಿ ನಾಲ್ಕು ವರ್ಷವಾಯಿತು, ಇನ್ನೂ ಮುಗಿದಿಲ್ಲ: 68—A Construction of Irrigation Navigation, Embankment and Drainage Works—(Non-commercial) ಎಂಬುದರಲ್ಲಿ ಈ ವರ್ಷ ನಮ್ಮ ಹೊಸದುರ್ಗ ತಾಲ್ಲೂಕು ಬೆಳಗೂರ್ ಟ್ಯಾಂಕ್ ಫೀಡರ್ ಛಾನಲ್ ರೆಸ್ಟೋರೇಷನ್ನಿಗೆಂದು 47,000 ರೂಪಾಯಿಗಳನ್ನು provide ಮಾಡಿ 23,000 ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಇದುವರೆಗೂ ಆ ಕೆಲಸ ಪೂರ್ತಿಯಾಗಿಲ್ಲ. ಈ ಸಾರಿ 15,000 ರೂಪಾಯಿಗಳನ್ನು ಒದಗಿಸಿರುವುದಾಗಿ ಕಾಣಿಸಿದ್ದೀರಿ. ಹೀಗೆ ನಾಲ್ಕು ವರ್ಷಗಳಿಂದ 23,000 ರೂಪಾಯಿಗಳನ್ನು ಖರ್ಚು ಮಾಡಿ ಮೂರುಕಾಸಿನ ಲಾಭವನ್ನೂ ಕೂಡ ನೀವು ಪಡೆಯಲಾಗಿಲ್ಲ. ಆದ್ದರಿಂದ ನೀವು ಹೀಗೆಲ್ಲಾ ನಿಮ್ಮ ಆಡಂಬರಗಳಿಗಾಗಿ, ನಿಮ್ಮ ಜೀವನೋಪಾಯವನ್ನು ಜರುಗಿಸಿಕೊಳ್ಳುವುದಕ್ಕಾಗಿ ನಾನಾ ಕಡೆಗೆ ಸಂಚಾರ ಮಾಡಿ ಸಾರ್ವಜನಿಕ ಹಣವನ್ನು ಪೋಲು ಮಾಡುವುದನ್ನು ತಪ್ಪಿಸಿದರೆ ಈ ಖೋತಾ ಬಡ್ಜೆಟ್ಟನ್ನು ಸರಿದೂಗಿಸಿಕೊಳ್ಳುವುದಕ್ಕೆ ಅವಕಾಶವಿದೆ.

ಇಂಥವುಗಳ ಕಡೆ ಗಮನಕೊಡದೆ ಕೆಲವು ತೆರಿಗೆಗಳನ್ನು ಹಾಕುವುದರಲ್ಲಿ ನಿರತರಾಗಿದ್ದೀರಿ. ಇದರಿಂದಾಗಿ ಪ್ರಜೆಗಳಿಗೆ ಬಹಳ ಕಿರುಕುಳಗಳಾಗುತ್ತಿವೆ. ನಿನ್ನೆ ತಾನೆ ತಿಪಟೂರು, ಅರಸೀಕೆರೆ ಮುಂತಾದ ಕಡೆಗಳಿಂದ ಕೊಬ್ಬರಿ ವರ್ತಕರ ಪರವಾಗಿ ಕೆಲವರು ತಮ್ಮಲ್ಲಿಗೆ ಬಂದು ಮನವಿಮಾಡಿ ಕೊಂಡಿದ್ದಾರೆ. ತಾವೀಗ ಮಾಡಿರುವ ರೀತ್ಯಾ ಹೇಗೆ ಅವರ ಮೇಲೆ ಮಲ್ಟಿ ಪಾಯಿಂಟ್ ಟ್ಯಾಕ್ಸ್ ಬೀಳುವಂತಾಗುತ್ತದೆ ಎಂದು ತಮ್ಮಲ್ಲಿ ಬಿನ್ನವಿಸಿ ಕೊಂಡಿದ್ದಾರೆ. ಇನ್ನೊಂದೇನೆಂದರೆ, ನೀವೆಷ್ಟು ಟ್ಯಾಕ್ಸ್‌ಗಳನ್ನು ಹೆಚ್ಚಿಸುತ್ತಾ ಹೋಗುತ್ತೀರೋ ಅಷ್ಟು ಲಂಚರುಷುವತ್ತುಗಳು ಜಾಸ್ತಿಯಾಗುತ್ತವೆ. ಹಿಂದೆ ಮಾರಾಟೆಯವರ ಕಾಲದಲ್ಲಿ ಚೌತಾಯವೆಂದು ಹಾಕುತ್ತಿದ್ದರು ಆದರೂ ಅವರ ಕೈಗೆ ಮಾತ್ರ ಏನೂ ಹೆಚ್ಚಿಗೆ ಬರುತ್ತಿರಲಿಲ್ಲ. ಇದನ್ನು ಮನಗಂಡು ನಾನು ಹೇಳಿದಂತೆ ನಿಮ್ಮ ಖರ್ಚುವೆಚ್ಚಗಳನ್ನು ಕಡಮೆಮಾಡಿಕೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ.

(ಅನೇಕ ಮಾನ್ಯ ಸದಸ್ಯರು ಭಾಷಣ ಮಾಡಲು ಎದ್ದು ನಿಂತರು)

ಅಧ್ಯಕ್ಷರು.—ಇನ್ನು ಸದಸ್ಯರು ಯಾರಿಗೂ ಮಾತನಾಡಲು ಅವಕಾಶಕೊಡಲಾರೆ. ಈಗ ಉಳಿದಿರುವ ಎರಡು ಗಂಟೆಗಳು ಸರ್ಕಾರದವರು ಉತ್ತರ ಕೊಡುವುದಕ್ಕೆ ಬೇಕಾಗುತ್ತವೆ. ಇನ್ನು ಸರ್ಕಾರದವರು ಉತ್ತರ ಕೊಡಬಹುದು.

Sri C. M. ARUMUGHAM (Kolar Gold Fields—S. C.).—From the beginning of the Budget discussion I am asking for a chance. Seats are reserved in this House for the Scheduled Castes and they should be given a chance because we come here to represent the views of the Scheduled Castes.

Mr. SPEAKER.—I have given chances for five members of the Scheduled Castes.

Sri C. M. ARUMUGHAM.—We are 30 in this House.

Mr. SPEAKER.—If you want I will give you the names of persons belonging to the Scheduled Castes who have spoken on the Budget. If I have not given you a chance . . .

Sri C. M. ARUMUGHAM.—I am not saying that. All the members of the Scheduled Castes here should be given a chance.

Mr. SPEAKER.—It is not possible to give chance for all the persons.

Sri C. M. ARUMUGHAM.—Sir, we must be given a chance. Seats are reserved for the members of the Scheduled Castes and we are 30 persons here.

Mr. SPEAKER.—The seats may be reserved but the speeches are not reserved for any caste. I have given chances for five members belonging to the Scheduled Castes.

4-30 P.M.

Sri K. PUTTASWAMI (Mysore).—Mr. Speaker, have I your permission to ask for clarification from the Finance Minister?

Mr. SPEAKER.—Yes.

***Sri K. PUTTASWAMI.**—I referred to page 38 of the Budget Memorandum. Under Central Loans, the loan that is allotted to Mysore State from Ex-Bombay St.te, *viz.*, 72,33,67,426-1-0 at 14.28 per cent is given as 677.37 lakhs. It should be 1,033.38 lakhs. In the speech of the Finance Minister the Government of India loan is given as 4,426,48 lakhs. If a proper calculation is made the Government of India loan would be 4,782,49 lakhs. Thus there is a difference of 300 and odd lakhs.

Mr. SPEAKER.—You mean to say that there is a difference between the Budget speech and . . .

Sri K. PUTTASWAMI.—No. In the Budget speech of the Finance Minister it is stated that the Government of India loan is Rs. 4,426,48 lakhs In the Memorandum it is calculated as 3,928·80 lakhs on 1st November 1956. There is no mistake about the date The calculation seems to be rather not correct. If a proper calculation is made the Government of India loan

(SRI K. PUTTASWAMI)

would be 4,782.49 lakhs. I want to know which of these figures is correct.

Mr. SPEAKER.—It will be replied in the course of the speech by the Hon'ble the Finance Minister. Now the Hon'ble Minister for Agriculture will reply.

ಶ್ರೀ ಎಚ್. ಎಸ್. ರುದ್ರಪ್ಪ.—ಅಧ್ಯಕ್ಷರೇ, ಈಗ ನನಗಿರುವ ಕಾಲಾವಧಿಯಲ್ಲಿ ನನಗೆ ಸಂಬಂಧಪಟ್ಟ ಖಾತೆಗಳ ವಿಚಾರವಾಗಿ ಕೆಲವು ವಿಷಯಗಳನ್ನು ನಾನೀಗ ಈ ಮಾನ್ಯ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಈ ಸಭೆಯ ಮಾನ್ಯ ಸದಸ್ಯರ ಪೈಕಿ ಅನೇಕರು ನನಗಿರತಕ್ಕ ಇಲಾಖೆಗಳ ಬಗ್ಗೆ ಅನೇಕ ವಿಷಯಗಳಲ್ಲಿ ಬಹಳ ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ; ಇನ್ನು ಕೆಲವರು ಕೆಲವು ಟೀಕೆಗಳನ್ನೂ ಸಹ ಮಾಡಿದ್ದಾರೆ. ಯಾರು ಯಾರು ನನಗಿರತಕ್ಕ ಬಾಬುಗಳ ವಿಚಾರದಲ್ಲಿ ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೋ ಅಂಥವರಿಗೆಲ್ಲ ನಾನು ಮೊಟ್ಟ ಮೊದಲನೆಯದಾಗಿ ಸರಕಾರದ ಪರವಾಗಿ ವಂದಿಸುತ್ತೇನೆ.

ಮೊಟ್ಟ ಮೊದಲನೆಯದಾಗಿ ಅರಣ್ಯ ಶಾಖೆ ವಿಚಾರವನ್ನು ತೆಗೆದುಕೊಳ್ಳೋಣ. ಈ ಬಾಬಿನಿಂದ ಬರತಕ್ಕ ಉತ್ಪತ್ತಿ ಇತ್ತೀಚೆಗೆ ಕಡಮೆ ಯಾಗುತ್ತಿದೆಯೆಂದು ಕೆಲವರು ಹೇಳಿದ್ದಾರೆ. ಈಗಿರುವ ಅಂದಾಜಿನ ಪ್ರಕಾರ ಈ ಬಾಬಿನಿಂದ ಬರತಕ್ಕ ಉತ್ಪತ್ತಿ ಮೂರು ಕೋಟಿ 27 ಲಕ್ಷ ರೂಪಾಯಿಗಳೆಂದೂ, ಒಂದು ಕೋಟಿ 50 ಲಕ್ಷ ರೂಪಾಯಿಗಳ ಖರ್ಚೆಂದೂ ತಿಳಿದು ಬಂದಿದೆ—ಎಂದರೆ ಒಂದು ಕೋಟಿ 87 ಲಕ್ಷ ರೂಪಾಯಿಗಳ ನಿವ್ವಳ ಉತ್ಪತ್ತಿ ಇದೆಯೆಂಬುದಾಗಿ ಕಂಡು ಬಂದಿದೆ.

[SRIMATHI LAKSHMIDEVI RAMANNA—in the Chair]

ಆದರೆ ಸಾಧಾರಣ ರೀತಿಯಲ್ಲಿ ನಮಗಿರತಕ್ಕ ಅರಣ್ಯವೇನಿದೆಯೋ ಅದರಿಂದ ಈಗ ನಮಗೆ ಬರುತ್ತಿರುವ ಉತ್ಪತ್ತಿಯನ್ನು ಲೆಕ್ಕ ಹಾಕಿದರೆ ಅದು ತೀರ ಕಡಮೆಯೆಂದು ನನಗೂ ಅನಿಸುತ್ತಿದೆ. ಆದರೆ ಈಗ ಸಾಮಾನ್ಯವಾಗಿ ನಮ್ಮ ಹೊಸ ಮೈಸೂರು ರಾಜ್ಯದಲ್ಲಿರತಕ್ಕ ಅರಣ್ಯ ಬಹಳ ಉತ್ತಮವಾದುದು. ನಮ್ಮಲ್ಲಿ ಈಗ ಸುಮಾರು 12 ಲಕ್ಷ ಚದರ ಮೈಲಿಗಳಷ್ಟು ಅರಣ್ಯವಿದೆ. ಆದರೆ ಈ ದಿವಸ ಈ ಬಾಬಿನಿಂದ ಬರತಕ್ಕ ಉತ್ಪತ್ತಿಯನ್ನು ಇಷ್ಟು ವಿಸ್ತೀರ್ಣವಿರುವ ಅರಣ್ಯಕ್ಕೆ ಹೋಲಿಸಿನೋಡಿದರೆ ಅದು ಕಡಮೆಯಾಯಿತೆಂದೇ ನನಗೂ ಅನಿಸುತ್ತಿದೆ. ಆದರೆ ಇದನ್ನೆಲ್ಲ ಸರಿಪಡಿಸುವುದಕ್ಕೆ ಸರ್ಕಾರದವರು ಮತ್ತು ಈ ಮಾನ್ಯ ಸಭೆಯ ಸದಸ್ಯರು ಎಲ್ಲರೂ ಒಟ್ಟಾಗಿ ಆಲೋಚನೆ ಮಾಡಬೇಕಾಗಿದೆ. ಆದರೆ ಇತ್ತೀಚೆಗೆ ಈ ಬಾಬಿನಲ್ಲಿ ಖರ್ಚು ವೆಚ್ಚಗಳು ಜಾಸ್ತಿ ಆಗಿವೆ; ಬರತಕ್ಕ ಆದಾಯ ಕಡಮೆಯಾಗಿದೆ. ಆದರೆ ಈ ಸಂಬಂಧದಲ್ಲಿ ಸಾರ್ವಜನಿಕರ ಸಹಾಯ ಸಹಕಾರಗಳು ದೊರೆತರೆ ಮಾತ್ರವೇ ಸರ್ಕಾರಕ್ಕೆ ಈ ಬಾಬಿನಿಂದ ಹೆಚ್ಚು ಉತ್ಪತ್ತಿಯನ್ನು ಬರಮಾಡಿಕೊಳ್ಳಲು ಸಾಧ್ಯ ಎಂಬತಕ್ಕ ಅಂಶವನ್ನು ನಾನೀ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಈ ದಿವಸ "ಈ ಅರಣ್ಯ ಫಾರೆಸ್ಟ್ ಇಲಾಖೆಗೆ ಸಂಬಂಧಪಟ್ಟದ್ದು, ನಮಗೇನೂ ಸಂಬಂಧಪಟ್ಟದ್ದಲ್ಲ" ಎನ್ನತಕ್ಕ ಭಾವನೆ ಜನರಲ್ಲಿ ಬಂದುಹೋಗಿದೆ. ಅರಣ್ಯ ಸಂಪತ್ತೆಂದರೆ ಅದು ದೇಶದ ಸಂಪತ್ತು. ಆದುದರಿಂದ ಸರ್ಕಾರ ಮತ್ತು ಸಾರ್ವಜನಿಕರು ಈ ಎರಡು ಪಕ್ಷಗಳೂ ಇದರಿಂದ ಲಾಭ ಪಡೆಯತಕ್ಕ ರೀತಿ ಯಾವುದಿದೆಯೋ ಅದನ್ನು ಕಂಡು ಹಿಡಿದು ಅದರಂತೆ ಕೆಲಸ ನಡೆಸಬೇಕಾದದ್ದು ಅತ್ಯಗತ್ಯ ಎಂಬುದನ್ನು ತಾವು ಮರೆಯಬಾರದು. ಆದರೆ ನಾನು ಈ ಅರಣ್ಯ ಖಾತೆಯ ಆಡಳಿತವನ್ನು ವಹಿಸಿಕೊಂಡಮೇಲೆ, ಜನರಲ್ಲಿ ಅರಣ್ಯದ ಅಭಿವೃದ್ಧಿಗೆ ಪ್ರೋತ್ಸಾಹ ನೀಡುವುದಕ್ಕೆ ಬದಲಾಗಿ ಅದಕ್ಕೆ ಹೆಚ್ಚು ಲುಕ್ಸಾನನ್ನುಂಟು ಮಾಡಬೇಕೆಂಬ ಮನೋಭಾವವಿದ್ದಂತೆ ನನಗೆ ಕಂಡುಬರುತ್ತಿದೆ. ಜನರಲ್ಲಿರತಕ್ಕ ಈ ಮನೋಭಾವನೆ ಬದಲಾಗಬೇಕು. ಅದಾದ ಬಳಿಕ ನಾವೆಲ್ಲರೂ ಕ್ರಮಕ್ರಮವಾಗಿ ಅರಣ್ಯಗಳ ಅಭಿವೃದ್ಧಿಗೆ ಏನೇನು ಪ್ರಯತ್ನಗಳನ್ನು ನಡೆಸಬೇಕೋ ಅವುಗಳಿಗಾಗಿ ವಿಶೇಷ ಶ್ರಮವಹಿಸಬೇಕಾಗಿರುತ್ತದೆ. ಆದರೆ ಈ ವಿಚಾರವಾಗಿ ಜನರಲ್ಲಿ ಒಂದು ಪ್ರಚಾರ ನಡೆಸತಕ್ಕದ್ದೂ ಕೂಡ ಬಹಳ ಅಗತ್ಯವೆಂಬುದಾಗಿ ನನಗೆ ತೋರುತ್ತಿದೆ. ನಮಗೀದಿವಸ ಅರಣ್ಯಗಳಿಂದ ಕಟ್ಟಿಗೆ ದೊರೆಯಬೇಕಾಗಿದೆ. ಮನೆಗಳಿಗಾಗತಕ್ಕ ಉತ್ತಮ ಮುಟ್ಟುಗಳು ಬೇಕಾಗಿವೆ. ಹೀಗೆ ಕಾಡುಗಳಿಂದ ನಮಗೆ ಅತ್ಯಂತ ಉಪಯುಕ್ತ ವಸ್ತುಗಳು ದೊರೆಯಬೇಕಾಗಿರುವಾಗ ಸಹ ಇದರ ಪೋಷಣೆಗೆ ಹೆಚ್ಚು ಗಮನ ಕೊಡದೆ ಇದನ್ನು ಕಡಿಯುವುದರಲ್ಲೇ ಜನರಿಗೆ ಹೆಚ್ಚು ಆಶೆಯಿರುವಂತೆ ನನಗೆ ಕಂಡು ಬರುತ್ತಿದೆ. ಹೀಗೆ ಎಲ್ಲೆಲ್ಲಿ ಕಾಡಿತ್ತೋ ಅಲ್ಲಿ ಅದನ್ನು ಕಡಿದು ಹಾಕಿದ ನಂತರ ಪುನಃ ಅಲ್ಲಿ ಕಾಡನ್ನು ಬೆಳೆಸಲು ಜನರು ಯಾವ ಪ್ರಯತ್ನಗಳನ್ನೂ ಮಾಡುತ್ತಿಲ್ಲ. ಹೀಗೆ ಪ್ರತಿದಿನವೂ ಈ ಅರಣ್ಯಗಳನ್ನು ಕಡುತಲೆ ಮಾಡುತ್ತಿರುವುದರಿಂದ ಈ ದಿವಸ ಈ ಅರಣ್ಯ ಶಾಖೆಯಲ್ಲಿ ಆದಾಯಕ್ಕೆ ಬದಲು ಲುಕ್ಸಾನಾಗುತ್ತಿದೆ. ಆದರೆ ಹತ್ತಾರು ವರ್ಷಗಳಿಂದೀಚೆಗೆ ಈ ಪ್ರಾಥಮಿಕ ಮತ್ತು ದ್ವಿತೀಯ ಪಾಂಚವಾರ್ಷಿಕ ಯೋಜನೆಗಳ ಫಲವಾಗಿ ನಮ್ಮ ಸರ್ಕಾರ ಈ ಅರಣ್ಯಗಳನ್ನು ಹೆಚ್ಚು ಹೆಚ್ಚಾಗಿ ಬೆಳಸಲು ಪ್ರಯತ್ನಗಳನ್ನು ಮಾಡುತ್ತಿದೆ. ಈಗತಾನೇ ನಮ್ಮ ಶ್ರೀಮಾನ್ ವೆಂಕಟೇಗೌಡರು ಅವರ ಪ್ರಾಂತ್ಯದಲ್ಲಿ ಸೌದೆಗೆ ಬಹಳ ತೊಂದರೆ ಆಗಿದೆಯೆಂದು ಹೇಳಿದರು. ನಾನು ಮೊನ್ನೆ ಶಿವಮೊಗ್ಗಾಕ್ಕೆ ಹೋಗಿದ್ದಾಗ ಜನರು ಅಲ್ಲಿ ಸಹ ಈಗ ಕಟ್ಟಿಗೆ ಬೆಲೆ ಬಹಳ ಜಾಸ್ತಿಯಾಗಿದೆ ಎಂದು ತಿಳಿಸಿದರು. ಆದರೆ ತುಮಕೂರು-ಕೋಲಾರ-ಬೆಂಗಳೂರು ಇಂಥ ಮೈದಾನ ಜಿಲ್ಲೆಗಳವರು ಆ ರೀತಿ ಹೇಳುವುದು ಸಹಜ. ಆದರೆ ಮಲೆನಾಡಿನಲ್ಲಿರತಕ್ಕವರೂ ಸಹ ಹೀಗೆ ಹೇಳಿದರೆ ಏನು ಮಾಡುವುದು ? ಅಂತೂ ಈ ದಿವಸ ಮಲೆನಾಡಿನಲ್ಲೂ ಸಹ ಸೌದೆಗೆ ಅಭಾವ ಉಂಟಾಗಿದೆ. ಅಲ್ಲಿಯ ಜನರು ಸರ್ಕಾರದವರು ಹಸಿ ಮರಗಳನ್ನೇ ಕಡಿದು ಮೈಸೂರು ಬೆಂಗಳೂರಿಗೆ ಸೌದೆ ಸರಬರಾಯಿ ಮಾಡುತ್ತಿರುವುದರಿಂದ ಮಲೆನಾಡಿಗೆ ಸೌದೆಯ ಅಭಾವ ಉಂಟಾಯಿತು ಎಂದು ಹೇಳುತ್ತಿದ್ದಾರೆ. ಆದ ಪ್ರಯುಕ್ತ ಈ ನಾನಾ ತೊಂದರೆಗಳನ್ನು ನೀಗಲು ಏನೇನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗಿದೆ ಎಂಬುದನ್ನು ಆಲೋಚಿಸಬೇಕಾದದ್ದು ಸರ್ಕಾರದವರ ಮತ್ತು ಈ ಮಾನ್ಯ ಸಭೆಯವರ ಆದ್ಯ ಕರ್ತವ್ಯವಾಗಿದೆ. ಪರಿಸ್ಥಿತಿ ಹೀಗೆ ಇನ್ನೂ 5-10 ವರ್ಷಗಳ ತನಕ ಮುಂದುವರಿದರೆ ಆಗ ಯಾರಿಗೂ ಸೌದೆಯೂ ಸಿಕ್ಕುವುದಿಲ್ಲ ಮರಗಳೂ ಇರುವುದಿಲ್ಲ. ಈ ಅಭಾವವನ್ನು ನೀಗಲು ಬೆಂಗಳೂರು ಜಿಲ್ಲೆಯಲ್ಲಿ 3 ಸಾವಿರ ಎಕರೆ ಜಮೀನಿನಲ್ಲಿ ಮರಗಿಡಗಳನ್ನು ಬೆಳೆಸುವ ಏರ್ಪಾಡನ್ನು ಮಾಡಿದ್ದೇವೆ. ತುಮಕೂರು ಜಿಲ್ಲೆ,

ಕೋಲಾರ ಜಿಲ್ಲೆ ಇಂಥ ಬಯಲು ಪ್ರದೇಶಗಳಲ್ಲಿ ಮರಗಿಡಗಳನ್ನು ಬೆಳೆಸುವುದಕ್ಕೆ ಪ್ರಯತ್ನ ಮಾಡಿದೆ. ಆದರೆ ಸಾರ್ವಜನಿಕರ ಸಹಾಯ ದೊರೆಯುತ್ತ ಇಲ್ಲ. ಸರ್ಕಾರದವರು ಸಾರ್ವಜನಿಕರ ಹಣವನ್ನು ವಿಶೇಷ ವಾಗಿ ಖರ್ಚುಮಾಡಿ ಮರ ಗಿಡಗಳನ್ನು ಹಾಕಿದ ಮೇಲೆ ಅದನ್ನು ಪೋಷಣೆ ಮಾಡತಕ್ಕ ಜವಾಬ್ದಾರಿಯನ್ನು ಬಹುಶಃ ಫಾರೆಸ್ಟ್ ಇಲಾಖೆಯವರು ಇಬ್ಬರು ಮೂವರು ಜನರನ್ನಿಟ್ಟು ಅವರಿಗೆ ವಹಿಸಿ, ಅವರು ಕಾಯಬೇಕೆಂದರೆ ಸಾಧ್ಯವಾಗುವುದಿಲ್ಲ. ಬಹುಶಃ ಕಾಯುವುದಕ್ಕೆ ಆ ರೀತಿ ಖರ್ಚು ಜಾಸ್ತಿ ಮಾಡಿದರೆ ಮನೋಭಾವ ಏನಾಗುತ್ತದೆ ಎಂಬುದನ್ನು ತಾವು ನೋಡಬೇಕು. ನಮ್ಮ ಜವಾಬ್ದಾರಿ ಏನಿದೆ ಎಂದರೆ ಪ್ರತಿಯೊಂದು ಹಳ್ಳಿಯಲ್ಲೂ ಪ್ರಚಾರ ಮಾಡಿ, ಕಾಡನ್ನು ಬೆಳೆಸುವುದು ಜನರ ಉಪಯೋಗಕ್ಕೆ, ಸರ್ಕಾರ ಖರ್ಚುಮಾಡತಕ್ಕ ಹಣ ಸಾರ್ವಜನಿಕರ ಹಣ ಅದನ್ನು ಸದುಪಯೋಗ ಮಾಡ ಬೇಕಾದರೆ ಗಿಡಗಳನ್ನು ಕಾಪಾಡಬೇಕಾದದ್ದು ಪ್ರತಿ ಗ್ರಾಮದ ಪ್ರತಿಯೊಬ್ಬ ಪ್ರಜೆಯ ಕರ್ತವ್ಯ ಎಂದು ಹೇಳ ದಿದ್ದರೆ ಅರಣ್ಯ ಖಾತೆಯಿಂದ ಸಂಪಾದನೆಯಾಗುವುದಿಲ್ಲ ಎಂದು ಅರಿಕೆ ಮಾಡಿಕೊಳ್ಳುತ್ತೇನೆ. ಸರ್ಕಾರದವರು ಈಗ ಮಾಡಿರತಕ್ಕ ಯೋಜನೆಯಿಂದ ನನಗೆ ಅನಿಸು ತ್ತದೆ, ಹತ್ತಾರು ವರ್ಷಗಳಲ್ಲಿ ಈಗಿರತಕ್ಕ ಕಷ್ಟ ಪರಿ ಹಾರವಾಗಿ ಜನಗಳಿಗೆ ಅನುಕೂಲವಾಗುವುದೂ ಅಲ್ಲದೇ ಬೇಕಾದಷ್ಟು ಲಾಭವೂ ಬರುತ್ತದೆ. ಈ ಕಾರಣದಿಂದ ತಮ್ಮಲ್ಲಿ ಈ ವಿಷಯವನ್ನು ಇಟ್ಟಿದ್ದೇನೆ. ತಾವೆಲ್ಲರೂ ಸರ್ಕಾರದೊಡನೆ ಸಹಕರಿಸಿ ಸರ್ಕಾರದವರ ಯೋಜನೆ ಗಳಿಗೆ ಬೆಂಬಲಕೊಟ್ಟು ಅರಣ್ಯ ಶಾಖೆಯ ಉತ್ಪನ್ನ ವನ್ನು ಹೆಚ್ಚು ಮಾಡುವುದಕ್ಕೆ ಪ್ರಯತ್ನ ಮಾಡ ಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀಮಾನ್ ನಾಗೂರ್ ಅವರು ಬಿಜಾಪುರದ ವಿಚಾರ ಹೇಳಿದರು. ಅಲ್ಲೂ ಸಹ ವಿಶೇಷ ಹಣ ಖರ್ಚು ಮಾಡಿ ಮರಗಿಡಗಳನ್ನು ಹಾಕಬೇಕೆಂದು ಪ್ರಯತ್ನ ಮಾಡಿದ್ದೇವೆ. ವನಮಹೋತ್ಸವ ನಡೆಸಿ ಸಸಿಗಳನ್ನು ನೆಡಿಸಿದ್ದೇವೆ. ಆದರೆ ಅದರಲ್ಲಿ ಎಷ್ಟು ಪೋಷಣೆ ಆಗಿದೆ ಎಂಬ ವಿಷಯ ನಮಗೆ ಗೊತ್ತಾಗಿದೆ. ನಮ್ಮ ತಪ್ಪನ್ನು ನಾವು ಒಪ್ಪಿಕೊಳ್ಳಬೇಕು. ಈ ದೃಷ್ಟಿ ಯಿಂದ ನಾವು ವಿಶೇಷವಾದಂಥ ಒಂದು ಹೆಚ್ಚಿನ ಕಾರ್ಯಕ್ರಮ ತೆಗೆದುಕೊಂಡು ಸಾರ್ವಜನಿಕರು ಇದರಲ್ಲಿ ಆಸಕ್ತಿವಹಿಸಿ ಕೆಲಸಮಾಡುವಂತೆ ಮಾಡ ಬೇಕು ; ಮತ್ತು ಹೆಚ್ಚಿನ ಪ್ರಯೋಜನವಾಗಬೇಕೆಂದು ಹೇಳಿ, ನಾವು ನಷ್ಟ ಮಾಡಿಕೊಂಡೂ, ಸಾರ್ವಜನಿಕರಿಗೆ ಪ್ರೋತ್ಸಾಹ ಕೊಡಬೇಕೆಂದು ಅವರಿಗೆ ಸಸಿಗಳನ್ನು ಒದಗಿಸುತ್ತಾ ಇದ್ದೇವೆ. ಖಾಸಗೀ ಜನರೂ ಸಹ ಮುಂದೆ ಬಂದು ಸಸಿಗಳನ್ನು ಪೋಷಣೆ ಮಾಡಿ ಬೆಳೆಸುತ್ತಾ ಇದ್ದಾರೆ. ಲಾಭಬರುವ ದೃಷ್ಟಿಯಿಂದ ಮಾಡುತ್ತಾ ಇದ್ದಾರೆ. ಬಹಳ ಒಳ್ಳೆಯದು. ಹೀಗೆ ನಾನಾ ಕಡೆ ಆಗುತ್ತಿರುವುದನ್ನು ತಾವು ಪತ್ರಿಕೆಯಲ್ಲಿ ಓದಿರಬಹುದು. ನಾನು ಮಂಡ್ಯ ಡಿಸ್ಟ್ರಿಕ್ಟಿಗೆ ಮೊನ್ನೆ ಹೋಗಿದ್ದೆ. ಅಲ್ಲಿ 5 ಲಕ್ಷ ಸಸಿಗಳನ್ನು ಮಾರುವುದಕ್ಕೆ ಏರ್ಪಾಡು ಮಾಡಿದೆ. ನಮಗೆ ಲುಕ್ಸಾನು ಆಗುತ್ತಾ ಇದೆ. ಆದರೂ ಕೂಡ ಸಬ್ಸಿಡಿ ಕೊಟ್ಟು ಮಾರುತ್ತಾ ಇದ್ದೇವೆ. ಖಾಸಗೀ ಜನರು ಯಾರು ಮರ ಗಿಡ ಗಳನ್ನು ಬೆಳೆಸುತ್ತೇವೆ ಎಂದು ಮುಂದೆ ಬರುತ್ತಾರೋ ಅವರಿಗೆ ಒದಗಿಸುವ ಸಲುವಾಗಿ 4 ಲಕ್ಷದಿಂದ 5 ಲಕ್ಷದ ವರೆಗೆ ಸಸಿಗಳನ್ನು ಒದಗಿಸಿದ್ದೇವೆ. ಅವರು ಬಹಳ ಸಂತೋಷದಿಂದ ತೆಗೆದುಕೊಂಡು ಹೋಗುತ್ತಾ ಇದ್ದಾರೆ. ಅವರ ಡಿಮ್ಯಾಂಡು ಹೆಚ್ಚುತ್ತಾ ಇದೆ, ಅದಕ್ಕನುಸಾರವಾಗಿ ಸಪ್ಲೈಮಾಡುವುದಕ್ಕೆ ನಮಗೆ ಆಗುತ್ತಿಲ್ಲ. ಲಾಭ ದೃಷ್ಟಿಯಿಂದ ಅವರು ಕೆಲಸ ಮಾಡುತ್ತಾರೆ ಎಂದು ಒಪ್ಪಿಕೊಂಡರೂ ಕೂಡ ಈ ರೀತಿ ಮಾಡದೆ ಇದ್ದರೆ ಮುಂದೆ ತೊಂದರೆಯಾಗುತ್ತದೆ ಎಂಬ ಉದ್ದೇಶದಿಂದ ಸರ್ಕಾರದವರು ವಿಶೇಷವಾಗಿ ಹಣ ಖರ್ಚು ಮಾಡುತ್ತಾ ಇದ್ದಾರೆ. ಅದನ್ನು ತಾವೆಲ್ಲರೂ ಗಮನಿಸಿ ಪ್ರತಿಯೊಂದು ಸ್ಥಳದಲ್ಲೂ ಸಹ ಸರಕಾರದವರು ಮಾಡಿದಂಥ ಈ ಅರಣ್ಯ ಸಂಪತ್ತನ್ನು ಬೆಳೆಸುವ ಯೋಜನೆಗೆ ಸಹಕಾರ ನೀಡಿ, ಅದರಿಂದ ಲುಕ್ಸಾನಾಗದ ಹಾಗೆ ನೋಡಿಕೊಳ್ಳಬೇಕೆಂದು ಹೇಳು ತ್ತೇನೆ. ಏಕೆಂದರೆ ಈ ಕೆಲಸ ಫಾರೆಸ್ಟ್ ಇಲಾಖೆ ಯವರಿಂದ ಬಹುಶಃ ಸಾಧ್ಯವಾಗುವುದಿಲ್ಲ. ಅವರು ಬೇಲಿ ಕಟ್ಟಿ ಅದನ್ನು ಕಾಪಾಡುತ್ತೇವೆ ಎಂದರೆ ಆಗುವು ದಿಲ್ಲ. ಆ ದೃಷ್ಟಿಯಿಂದ ತಾವು ಪ್ರೋತ್ಸಾಹಕೊಟ್ಟರೆ ಬಹುಶಃ ಪ್ರತಿ ವರ್ಷವೂ ಅರಣ್ಯ ಖಾತೆಯ ಸಂಪ ತ್ತನ್ನು ಪೋಷಿಸಿ ಹೆಚ್ಚು ಲಾಭವನ್ನು ಪಡೆಯುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಅಷ್ಟು ಮಾತ್ರ ಹೇಳುತ್ತೇನೆ. ಮುಂದಿನ ಬಡ್ಜೆಟ್‌ನಲ್ಲಿ ತಮಗೆ ಇದರ ಫಲ ಗೊತ್ತಾಗುತ್ತದೆ. ಇಷ್ಟು ಮಾತ್ರ ತಾವು ಸಹಕಾರ ಮಾಡಿದರೆ ಇದರಿಂದಾಗತಕ್ಕ ಪ್ರಯೋಜನ ಚೆನ್ನಾಗಿರುತ್ತದೆ ಎಂದು ತಮ್ಮಲ್ಲಿ ಅರಿಕೆ ಮಾಡು ತ್ತೇನೆ.

Sri H. M. CHANNABASAPPA.—If the Minister would yield, I would like to know whether Government has made a survey of the total fuel requirements of the State and the rate of exploitation.

ಶ್ರೀ ಎಚ್. ಎಸ್. ರುದ್ರಪ್ಪ.—ಮಾನ್ಯಸದಸ್ಯರು ಹೇಳಿದಹಾಗೆ ಡೀಟೇಲ್ ಆಗಿ ಸರ್ವೆಮಾಡಿಲ್ಲ. ಆದರೆ ಪ್ರತಿಯೊಂದು ಡಿಸ್ಟ್ರಿಕ್ಟಿನಲ್ಲೂ ಇಷ್ಟಿಷ್ಟು ಖೋತಾಬರ ಬಹುದು, ಆ ಖೋತಾವನ್ನು ನಾವು ಯಾವರೀತಿ ಎದುರಿಸಬೇಕು, ಯಾರೀತಿ ಸರಿಮಾಡಬೇಕು ಎಂಬ ವಿಷಯದಲ್ಲಿ ಮುಖ್ಯವಾಗಿ ಬಯಲುಪ್ರದೇಶದ ಪ್ರತಿ ಯೊಂದು ಡಿಸ್ಟ್ರಿಕ್ಟಿನಲ್ಲೂ ವರ್ಕ್‌ಪ್ಲಾನ್ ಪ್ರಕಾರ ಈಗ ಕೆಲಸ ನಡೆಯುತ್ತಾ ಇದೆ. ಯಾವಯಾವ ಪ್ರದೇಶಕ್ಕೆ, ಎಷ್ಟೆಷ್ಟು ಸೌದೆಗೆಬೇಕಾಗುತ್ತದೆ ಎಂಬ ಲೆಕ್ಕಾ ಚಾರದಮೇಲೆ ಗಿಡಗಳನ್ನು ಬೆಳೆಸುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದೇವೆ ಎಂದು ಹೇಳಿ ಇಷ್ಟುಮಾತ್ರ ತಮ್ಮಲ್ಲಿ ಅರಿಕೆಮಾಡುತ್ತೇನೆ.

ಹಸಿಸೌದೆಗೆ ಲೈಸೆನ್ಸ್ ಕೊಡಬೇಕೆಂದು ಕೆಲವರು ಹೇಳಿದರು. ಮಲೆನಾಡಿನಲ್ಲಿ ವಿಶೇಷವಾಗಿ ಹಸಿ ಸೌದೆಗೆ ಈಗ ಲೈಸೆನ್ಸನು ಕೊಡುತ್ತಿಲ್ಲ ಎಂಬುದಕ್ಕೆ ಕಾರಣಕೊಟ್ಟೆ. ಒಣಸೌದೆ ಬಿದ್ದಿದೆ. ಅದರಿಂದ ಸರ್ಕಾರದವರಿಗೆ ನಷ್ಟವಾಗುತ್ತದೆ, ಅದನ್ನು ಉಪ ಯೋಗಿಸಿಕೊಳ್ಳುವುದಕ್ಕೆ ಅವರಿಗೆ ಅವಕಾಶವಿದೆ ಎಂಬ ದೃಷ್ಟಿಯಿಂದ ಇಲಾಖೆಯವರು ಹಸಿಸೌದೆಗೆ ಲೈಸೆನ್ಸ್ ಕೊಡುತ್ತಾ ಇರಲಿಲ್ಲ. ಈಗ ಸೌದೆಗೆ ಅಭಾವ ಬಂದ ಮೇಲೆ ಅವರಿಗೂ ಸಹ ಸಿಕ್ಕುವಹಾಗೆ ಮಾಡುವುದಕ್ಕೆ ಪ್ರಯತ್ನನಡೆದಿದೆ. ಅದಕ್ಕೆ ಸರ್ಕಾರದವರು ಫಾರೆಸ್ಟ್ ಇಲಾಖೆಯವರಿಗೆ ಸೂಚನೆ ಕೊಟ್ಟಿದ್ದೇವೆ. ಎಲ್ಲೆಲ್ಲಿ ಸೌದೆಗೆ ಅಭಾವವಿದೆಯೋ ಅಲ್ಲೆಲ್ಲಾ ಹಸಿಸೌದೆ ಒದ ಗಿಸುವುದಕ್ಕೆ ಪ್ರಯತ್ನಮಾಡಬೇಕೆಂದು, ಮಲೆನಾಡು ಪ್ರದೇಶದಲ್ಲೂ ಸೌದೆಗೆ ಮರಗಳನ್ನು ಬೆಳೆಸಲು ಪ್ರಯತ್ನಮಾಡುತ್ತಾ ಇದ್ದೇವೆ. ಭದ್ರಾವತಿ ಕಬ್ಬಿಣದ ಕಾರ್ಖಾನೆಗೆ ಬಹಳಸೌದೆ ಬೇಕಾಗುತ್ತದೆ. ಆ ದೃಷ್ಟಿ ಯಿಂದ ಮಲೆನಾಡಿನಲ್ಲೂ ಸಹ ಸೌದೆಗೆ ಸ್ವಲ್ಪ ಅಭಾವ ಕಾಣುತ್ತಾ ಇದೆ. ಮೈದಾನಪ್ರದೇಶಕ್ಕೆ ಮೊದಲ

(ಶ್ರೀ ಎಚ್. ಎಸ್. ರುದ್ರಪ್ಪ.)

ನಿಂದಲೂ ಮಲೆನಾಡಿಗೆ ಎಷ್ಟುಬೇಕೋ ಅಷ್ಟನ್ನು ಇಟ್ಟುಕೊಂಡು ಒದಗಿಸುತ್ತಾ ಇದ್ದೆವು. ಈಗ ಮೈದಾನ ಪ್ರದೇಶಕ್ಕೆ ಬರುವುದನ್ನು ನಿಲ್ಲಿಸದೇ ಇರುವುದರಿಂದ ಮಲೆನಾಡಿಗೇ ಸಾಕಾಗುತ್ತಿಲ್ಲ. ಇದನ್ನು ಸಾಧ್ಯವಾದಮಟ್ಟಿಗೂ ಪರಿಹಾರಮಾಡುತ್ತೇವೆ ಎಂದು ಅಷ್ಟುಮಾತ್ರ ಹೇಳುತ್ತೇನೆ. ಮುಕ್ಕಣ್ಣಪ್ಪನವರು 'ಮಧುಗಿರಿಯಲ್ಲಿ 100 ಎಕರೆ ಪ್ರದೇಶದಲ್ಲಿ ಕಟ್ಟಿಗೆಯನ್ನು ಕಡಿಯುವುದಕ್ಕೆ ಅವಕಾಶಕೊಟ್ಟಿದ್ದೀರಿ, ಈಗ 500 ಎಕರೆ ಕಡಿದುಬಿಟ್ಟಿದ್ದಾರೆ' ಎಂದು ಹೇಳಿದರು. ಅವರು ಹೇಳುವುದು ನಿಜವಾದರೆ ಬಹಳ ಸಂತೋಷ ದಿಂದ ಹಾಗೆ ಮಾಡಿದವರಮೇಲೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. ಮೊನ್ನೆತಾನೆ ಅವರಿಗೆ ಪತ್ರ ಬರೆದು ಎಲ್ಲಿ ಆ ರೀತಿ ಆಗಿದೆ ತಿಳಿಸಿ, ಕಾರ್ಯಕ್ರಮ ತೆಗೆದುಕೊಳ್ಳಲು ಸಾಧ್ಯವಾಗುತ್ತದೆ ಎಂದು ಕೇಳಿದ್ದೇನೆ. ಸಲಹೆ ಏನುಕೊಡುತ್ತೀರೋ ಅದನ್ನು ಸಾಧ್ಯವಾದಮಟ್ಟಿಗೂ ಆಸಕ್ತಿವಹಿಸಿ ಜಾರಿಗೆ ಕೊಡುವುದಕ್ಕೆ ಸಿದ್ಧವಾಗಿದ್ದೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾನು ಹೇಳಿದ್ದು, ತಾವು 100 ಎಕರೆ ಕೊಟ್ಟಿದ್ದೀರಿ. ಅವರು 200 ಎಕರೆ ಎಕ್ಸ್‌ಪ್ಲಾಯಿಟ್‌ಮಾಡಿದ್ದಾರೆ ಎಂದು.

ಶ್ರೀ ಎಚ್. ಎಸ್. ರುದ್ರಪ್ಪ.—ಬಹಳ ಸಂತೋಷ. ನಿರ್ದಿಷ್ಟವಾಗಿಹೇಳಿ ಕಾರ್ಯಕ್ರಮ ತೆಗೆದುಕೊಳ್ಳದಿದ್ದರೆ ಅದು ಲೋಪವಾಗುತ್ತದೆ. ಆ ದೃಷ್ಟಿಯಿಂದ ತಮಗೆ ಪತ್ರ ಬರೆದೆನೇ ಹೊರತು ಇನ್ನಾವ ದೃಷ್ಟಿಯಿಂದಲೂ ಅಲ್ಲ. ಆದ್ದರಿಂದ ತಾವಾಗಲಿ, ಇನ್ನ್ಯಾರೇ ಆಗಲಿ ಎಲ್ಲಾದರೂ ಲೋಪದೋಷ ಇರುವುದನ್ನು ತಿಳಿಸಿದರೆ ಸರಿಯಾದ ತನಿಖೆನಡೆಸಿ ಅದನ್ನು ಸರಿಮಾಡುತ್ತೇವೆ. ಲೋಪವಾಗಿದ್ದರೆ ಸಂಬಂಧಪಟ್ಟ ಆಫೀಸರಿಗೆ ಶಿಕ್ಷೆಕೊಡುತ್ತೇವೆ.

ಸದಸ್ಯರು ಕೆಲವರು ಪಶುಪಾಲನೆ ವಿಷಯದಲ್ಲಿ ಒಂದೆರಡು ಮಾತುಹೇಳಿದ್ದಾರೆ. ಅದೇನೆಂದರೆ ಹಳ್ಳಿಗಳಲ್ಲಿ ಬೀಜದ ಹೋರಿಗಳನ್ನು ಒದಗಿಸಬೇಕೆಂದು ಹೇಳಿದ್ದಾರೆ. ಮೈಸೂರುದೇಶದಲ್ಲಿ ಸುಮಾರು 25-30 ವರ್ಷಗಳ ಕೆಳಗೆ ಜಾನುವಾರನ್ನು ಅಭಿವೃದ್ಧಿ ಮಾಡಬೇಕೆಂಬ ದೃಷ್ಟಿಯಿಂದ ಕೆಲವು ಪ್ರಯೋಗಗಳು ನಡೆದವು. ಆದರೆ ಅವು ಮಧ್ಯದಲ್ಲಿಯೇ ನಿಂತುಹೋದವು. ಈಗ ಸರ್ಕಾರದವರು ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ತಳಿಯನ್ನು ಅಭಿವೃದ್ಧಿ ಮಾಡುವುದರ ಜೊತೆಗೆ ಅವು ಉತ್ತಮವಾದ ರೀತಿಯಲ್ಲಿ ಬೆಳೆಯುವುದಲ್ಲದೆ ಒಳ್ಳೆಯಮಟ್ಟದಲ್ಲಿ ಬೆಳೆದು ಸಾರ್ವಜನಿಕರಿಗೆ ಉಪಯೋಗವಾಗುವ ರೀತಿಯಲ್ಲಿ ಮಾಡಿ ಹೆಚ್ಚಿಗೆ ಹಾಲನ್ನು ಪಡೆಯಬೇಕು, ಪಾಶ್ಚಾತ್ಯ ದೇಶಗಳಲ್ಲಿ ಯಾವರೀತಿ ಒಂದು ಹಸುವಾಗಲಿ, ಎಮ್ಮೆಯಾಗಲಿ, ಹೆಚ್ಚಿಗೆಹಾಲನ್ನು ಕೊಡುತ್ತದೆಯೋ ಆ ಮಟ್ಟಕ್ಕೆ ತರುವುದಕ್ಕೆ ಪ್ರಯತ್ನಮಾಡಬೇಕು ಎಂದು ಸರ್ಕಾರ ಯೋಚನೆಮಾಡಿದೆ. ಜಾನುವಾರುಗಳನ್ನು ಅಭಿವೃದ್ಧಿಮಾಡುವುದಕ್ಕೆ ಈಗ ಸರ್ಕಾರದವರು ಯಾವ ಯಾವರೀತಿಯ ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ಎಂದು ಒಂದೆರಡುಮಾತಿನಲ್ಲಿ ಹೇಳುವುದು ಸೂಕ್ತವೆಂದು ಕಾಣುತ್ತದೆ. ಈಗ ಸರ್ಕಾರದವರು Artificial Insemination Centre ಎಂದು open ಮಾಡಿರುವುದು ತಮಗೆಲ್ಲಗೊತ್ತು. ಇದರಿಂದ ಬಹಳ ಉತ್ತಮವಾದ ಪರಿಣಾಮವಾಗಿದೆ. ಈ ಪ್ರಯೋಗದಿಂದ ಬಹಳ ಲಾಭವಾಗಿದೆ ಎಂದು ಅಲ್ಲಿಯವರು ಹೇಳಿದ್ದಾರೆ. ನಾವೂಸಹ ಸ್ವತಃ ತನಿಖೆ ಮಾಡಿ ನೋಡಿದ್ದೇವೆ. ಇದು costly scheme. ನಾನು ಅನೇಕ ಕಡೆಗಳಲ್ಲಿ ಪರೀಕ್ಷೆಮಾಡಿ, ತನಿಖೆಮಾಡಿ ನೋಡಿದ್ದೇನೆ. ಇದಕ್ಕೆ ದುಡ್ಡು ವಿಶೇಷವಾಗಿ ಖರ್ಚಾಗುತ್ತದೆ. ಆದರೆ ಜನರ ತಾತ್ಸಾರ ಮನೋಭಾವದಿಂದಲೋ ಅಥವಾ ಅದರಲ್ಲಿ ಆಸಕ್ತಿಇಲ್ಲದೆ ಇರುವುದರಿಂದಲೋ ಹೆಚ್ಚಿಗೆ ಇದರ ಉಪಯೋಗವನ್ನು ಪಡೆಯುತ್ತಿಲ್ಲ. ಈ ಕೆಲಸಕ್ಕೆಹೆಚ್ಚಿಗೆ ಹಣ ಖರ್ಚಾದರೂ ಪರವಾಗಿಲ್ಲ, ಇದನ್ನು ವಿಸ್ತಾರಮಾಡಬೇಕು ಎಂಬ ಆಸೆ ಸರ್ಕಾರಕ್ಕಿದ್ದರೂ ಸಹ ಜನಗಳು ಇದರ ಉಪಯೋಗವನ್ನು ಪಡೆಯದೆ ಇದ್ದುದರಿಂದ ಸಾರ್ವಜನಿಕರ ದುಡ್ಡನ್ನು ಉಪಯೋಗಮಾಡುವುದಕ್ಕೆ ಬದಲಾಗಿ ದುರುಪಯೋಗ ಮಾಡಿದಂತಾಗುತ್ತದೆ ಎನ್ನುವ ಮನೋಭಾವದಿಂದ ಇದನ್ನು ಹೆಚ್ಚು ಮುಂದುವರಿಸುತ್ತಿಲ್ಲ. ಒಂದುವೇಳೆ ಎಲ್ಲಿ ಸಾರ್ವಜನಿಕರು ಆಸಕ್ತಿವಹಿಸಿ, ಮುಂದೆ ಬಂದು ಇದರಿಂದ ಪ್ರಯೋಜನವನ್ನು ಪಡೆಯುವುದಕ್ಕೆ ಪ್ರಯತ್ನಮಾಡುತ್ತಾರೆಯೋ ಅಲ್ಲಿ ಸ್ವಲ್ಪಹಣ ಹೆಚ್ಚಿಗೆ ಖರ್ಚಾದರೂ ಯೋಚನೆಮಾಡದೆ artificial insemination centre ಪ್ರಾರಂಭ ಮಾಡಬೇಕು ಎಂದು ಒಂದು ಯೋಜನೆಯನ್ನು ಹಾಕಿಕೊಂಡಿದ್ದೇವೆ. ಎರಡನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ಇದಕ್ಕೋಸ್ಕರ ಹೆಚ್ಚಿಗೆ ಹಣವನ್ನೊದಗಿಸಲಾಗಿದೆ. ಆದರೆ ಪ್ರತಿಯೊಂದು ಗ್ರಾಮದಲ್ಲಿಯೂ artificial insemination ಪ್ರಯೋಗವನ್ನು ನಡೆಸುವುದಕ್ಕಾಗುವುದಿಲ್ಲ. ಹತ್ತು ಹದಿನೈದು ವರ್ಷಗಳಲ್ಲಿ ಸುಮಾರು ಕಾಲುಭಾಗಪ್ರದೇಶದಲ್ಲಿ ಈ ಪ್ರಯೋಗವನ್ನು ನಡೆಸಬಹುದು. ಉಳಿದ ಮುಕ್ಕಾಲು ಭಾಗದ ಜನಗಳಿಗೆ ಸಹಾಯವದೊದಗಿಸತಕ್ಕದ್ದು ಒಳ್ಳೆಯದು ಎನ್ನುವ ದೃಷ್ಟಿಯಿಂದ ಹಿಂದಿನ ಸರ್ಕಾರದವರು ಏನು ಪ್ರಯೋಗವನ್ನುಮಾಡಿ ನಿಲ್ಲಿಸಿದ್ದರೋ ಅದನ್ನು ಮುಂದುವರಿಸಿ, ಪ್ರತಿವರ್ಷವೂ 500 ಹೋರಿಗಳನ್ನು ಮೈಸೂರುದೇಶಕ್ಕೆ ಒದಗಿಸಬೇಕೆಂದು ನಾವು ಆಲೋಚನೆ ಮಾಡುತ್ತಿದ್ದೇವೆ. ಆದರೆ ಹೋರಿಗಳು ಸಿಕ್ಕುವುದೂ ಬಹಳಕಷ್ಟವಿದೆ. ಸರ್ಕಾರದ ವಶದಲ್ಲಿರತಕ್ಕ ಜಾನುವಾರುಗಳಿಂದ ಕೆಲವು ಉತ್ತಮವಾದ ಹೋರಿಗಳನ್ನು ಪಡೆಯಬಹುದು. ಬಾಕಿ ಹೋರಿಗಳನ್ನು ಕೊಂಡುಕೊಳ್ಳಬೇಕಾಗುತ್ತದೆ. ಇದಕ್ಕೂ ವಿಶೇಷವಾದ ಹಣ ಖರ್ಚಾಗುತ್ತದೆ. ಆ ದೃಷ್ಟಿಯಿಂದ ಯೋಚನೆಮಾಡಿ ಸಾಧ್ಯವಾದಮಟ್ಟಿಗೂ ಹೋಬಳಿಗೆ ಒಂದರಂತೆ ಹೋರಿಗಳನ್ನು ಒದಗಿಸುವುದಕ್ಕೆ ಸರ್ಕಾರ ಕಾರ್ಯಕ್ರಮ ಹಾಕಿಕೊಂಡಿದೆ. ಇದಕ್ಕೆಲ್ಲ ತಾವು ಸಹಾಯಮಾಡಬೇಕು, ಜನಗಳಲ್ಲಿ ಪ್ರಚಾರಮಾಡಬೇಕು ಎಂದು ಇಷ್ಟುಮಾತ್ರ ಹೇಳುತ್ತೇನೆ.

ಮುಖ್ಯವಾದ ಸಮಸ್ಯೆ ಇನ್ನೊಂದು ಯಾವುದೆಂದರೆ, ಬಹುಮಂದಿ ಸದಸ್ಯರು ಪ್ರಸ್ತಾಪಮಾಡಿರುವ ಆಹಾರ ಸಮಸ್ಯೆ. ಇದರಲ್ಲಿ ಎರಡು ವಿಷಯಗಳಿವೆ. ಕೆಲವರು ಆರೋಪಣೆ ಮಾಡಿದ್ದಾರೆ, ಹೆಚ್ಚು ಆಹಾರ ಬೆಳೆಯುವುದಕ್ಕೆ ಹಾಕಿರುವ ಕಾರ್ಯಕ್ರಮ ಫಲಕಾರಿಯಾಗಿಲ್ಲವೆಂದು ಹೇಳಿದ್ದಾರೆ ಮತ್ತು ಧಾರಣೆ ಹೆಚ್ಚಾಗಿದೆ, ಅದನ್ನು ಕಡಮೆಮಾಡಬೇಕು ಎಂದು ಹೇಳಿದ್ದಾರೆ. ಧಾರಣೆವಾಸಿಗಳು ಜಾಸ್ತಿಯಾಗಿವೆ ಎಂದು ತಿಳಿದುಕೊಂಡು ಅದರ ಆಧಾರದಮೇಲೆ ಜನಗಳೆಲ್ಲ ಏನು ಹೇಳುತ್ತಾರೆಂದರೆ ಹೆಚ್ಚು ಆಹಾರ ಬೆಳೆಯುವ ಕಾರ್ಯಕ್ರಮ ಫಲಕಾರಿಯಾಗಿಲ್ಲವೆಂದು ಹೇಳುತ್ತಿದ್ದಾರೆ. ಅದು ನ್ಯಾಯವಾದುದಲ್ಲವೆಂದು ಮಾತ್ರ ಅರಿಕೆಮಾಡಿಕೊಳ್ಳುತ್ತೇನೆ. ಆಹಾರಸಮಸ್ಯೆ, ತಮಗೆ ಗೊತ್ತಿರುವ ಹಾಗೆ, ಬಹುದಿವಸದ್ದು. ಯುದ್ಧಕಾಲದಲ್ಲಿ ಬಹಳ ಕಠಿಣವಾದ ಸಮಸ್ಯೆಗಳನ್ನು ನಾವು ಎದುರಿಸ

ಬೇಕಾಯಿತು. ಇಂಡಿಯಾ ಸರ್ಕಾರದವರು ಅಂದರೆ ಬ್ರಿಟಿಷರಕಾಲದಿಂದ ಬಹುಶಃ ಈಗ್ಗೆ 50, 100 ವರ್ಷಗಳಿಂದಲೂ ಆಹಾರವನ್ನು ಆಮದು ಮಾಡುತ್ತಿದ್ದಾರೆ. 200 ಕೋಟಿ ರೂಪಾಯಿಗಳವರೆಗೆ ಆಹಾರ ಪದಾರ್ಥವನ್ನು ಆಮದು ಮಾಡುತ್ತಿದ್ದುದನ್ನು ತಾವೆಲ್ಲ ಓದಿದ್ದೀರಿ; ಕೇಳಿದ್ದೀರಿ. 1951ನೇ ಇಸವಿಯಲ್ಲಿ 216 ಕೋಟಿ ರೂಪಾಯಿಗಳ ಆಹಾರ ಪದಾರ್ಥವನ್ನು ಆಮದು ಮಾಡಿದ್ದಾರೆ. ಒಂದೇ ದಿವಸದಲ್ಲಿ ಇಷ್ಟು ಪ್ರಮಾಣದಲ್ಲಿ ಆಹಾರಪದಾರ್ಥವನ್ನು ದೇಶದಲ್ಲಿ ಬೆಳೆಸುವುದಕ್ಕಾಗುವುದಿಲ್ಲ. ನಮ್ಮ ದೇಶದಲ್ಲಿ ನೀರಾವರಿ ಕಾರ್ಯಗಳು ಬಹಳ ಕಡಮೆ. ಪಾಶ್ಚಾತ್ಯ ದೇಶಗಳಿಗೆ ಹೋಲಿಸಿದರೆ ನಮ್ಮಲ್ಲಿ ನೀರಾವರಿಕಾರ್ಯಗಳು ಬಹಳ ಕಡಮೆ. ದೇವರು ನಮಗೆ ಕೊಟ್ಟಿರತಕ್ಕ ನೀರು ನದಿಗಳಲ್ಲಿ ಹರಿಯುತಕ್ಕ ಮತ್ತು ಸಣ್ಣ ಸಣ್ಣ ಹಳ್ಳಿಗಳಲ್ಲಿ ಹರಿಯತಕ್ಕ ನೀರು ; ಇದನ್ನು ಉಪಯೋಗಿಸುವುದನ್ನು ನೋಡಿದರೆ, ನೂರರಲ್ಲಿ ಏಳುಭಾಗ ಮಾತ್ರ ಉಪಯೋಗಿಸುತ್ತಿದ್ದೇವೆ. ಮತ್ತು ನಾವು ಈಗ ಮಾಡುತ್ತಿರುವ ವ್ಯವಸಾಯದಲ್ಲಿ ಬಹುಭಾಗಕ್ಕೆ ಮಳೆಯ ನೀರನ್ನು ಅವಲಂಬಿಸಬೇಕಾಗುತ್ತದೆ. 1943ನೆಯ ಇಸವಿಯಲ್ಲಿ ಆಹಾರ ಪರಿಸ್ಥಿತಿ ಬಹಳ ಪ್ರಮಾದಕ್ಕೆ ಬಂದು, ಆಗಿನ ಸರ್ಕಾರ ಯೋಚನೆಮಾಡಿ, ಅಲ್ಲಿಂದ ಹೆಚ್ಚುಆಹಾರ ಬೆಳೆಯುತಕ್ಕ ಕಾರ್ಯಕ್ರಮವನ್ನು ಪ್ರಾರಂಭಮಾಡಿತು. 1943ನೆಯ ಇಸವಿಯಲ್ಲಿ ಯಾವ ಒಂದು ಯೋಜನೆ ಇತ್ತೋ ಅದರ ಪ್ರಕಾರ ಮಾಡಲಿಲ್ಲ ; ಹೆಚ್ಚು ಆಹಾರ ಬೆಳೆಯುವುದಕ್ಕೆ ಮಾತ್ರ ಪ್ರಯತ್ನಮಾಡಿತು. 1949ನೆ ಇಸವಿಯಲ್ಲಿ ಒಂದು ಯೋಜನೆಯನ್ನು ತಯಾರುಮಾಡಿ ಎಷ್ಟು ಕೆಲಸವನ್ನು ಮಾಡಬೇಕು, ಎಷ್ಟು ಆಹಾರವನ್ನು ಬೆಳೆಸಬೇಕು ಎಂಬ ಪ್ರಯತ್ನನಡೆಯಿತು. ಹಿಂದಿನ ಮೈಸೂರಿನಲ್ಲಿಯೂ ಸಹ 1949ನೆ ಇಸವಿಯಿಂದ 1952ನೆ ಇಸವಿಯ ವರೆಗೆ ಒಂದು ಪ್ರಯೋಗನಡೆದಿತ್ತು. ಬಹುಶಃ ಪ್ರಯೋಗದಿಂದ ಒಂದು ರೀತಿಯಾದ ಲೆಕ್ಕವನ್ನು ತಯಾರುಮಾಡಿದ್ದಾರೆ, ಕಂಡುಹಿಡಿದಿದ್ದಾರೆ. ಅದರಲ್ಲಿ ನೂರಕ್ಕೆ ಐದುಭಾಗ ಹೆಚ್ಚಿರಬಹುದು ಅಥವಾ ಕಡಮೆ ಇರಬಹುದು ; ಅಷ್ಟೇಹೊರತು ಅದು ತಪ್ಪು, ನ್ಯಾಯವಾದುದಲ್ಲ, ಸರಿಯಲ್ಲವೆನ್ನುವ ಸಂಶಯವಿರಬೇಕಾಗಿಲ್ಲ. ನಾನೇ ಅದನ್ನು ಪರೀಕ್ಷೆಮಾಡಿನೋಡಿದ್ದೇನೆ. ಅವರುಗಳು ಕೊಡತಕ್ಕ ಅಂಕಿಸಂಖ್ಯೆಗಳಲ್ಲಿ ಬಹುಭಾಗ. ನೂರಕ್ಕೆ ತೊಂಭತ್ತೊಂಬತ್ತುಭಾಗ ನಿಜವಾಗಿದೆ. ಈ ಕಾರಣಗಳಿಂದ ನನಗನ್ನಿಸುತ್ತದೆ, 1941 ರಿಂದ 1952ರವರೆಗೆ ಏನು ಅಂದಾಜು ಹಾಕಿಕೊಂಡಿದ್ದರೋ ಅದಕ್ಕಿಂತ ಹೆಚ್ಚುಬೆಳೆದಿದೆ. 1950ನೆ ಇಸವಿಯಲ್ಲಿ ಪುನಃ ಇಂಡಿಯಾ ಸರ್ಕಾರದ ಪ್ಲಾನಿಂಗ್ ಕಮಿಷನ್ ಅವರು ಪಂಚವಾರ್ಷಿಕಯೋಜನೆಯನ್ನು ಪ್ರಾರಂಭ ಮಾಡಿದರು. 1951 ರಿಂದ ಈ ಯೋಜನೆ ಪ್ರಾರಂಭವಾಯಿತು. ಅಲ್ಲಿಂದ 1956 ವರೆಗೆ ಐದುವರ್ಷಗಳಲ್ಲಿ ಅವರು ಖರ್ಚುಮಾಡಿರುವ ಲೆಕ್ಕ ಮತ್ತು ಏನು ಅಂದಾಜು ಹಾಕಿಕೊಂಡಿದ್ದರೋ ಅದು, ಇವೆರಡನ್ನೂ ನೋಡಿದರೆ ಅವರು ಹಾಕಿಕೊಂಡಿದ್ದ ಅಂದಾಜಿಗಿಂತಲೂ ಉತ್ತಮವಾಗಿ ಬೆಳೆದಿದ್ದಾರೆ. ಇಷ್ಟು ಹೆಚ್ಚಾಗಿ ಆಹಾರಧಾನ್ಯ ಬೆಳೆದಿದೆ ಎಂದು ಕಂಡುಬಂದರೂ ಏಕೆ ಅವುಗಳ ಬೆಲೆ ಮಾತ್ರ ಜಾಸ್ತಿಯಾಗಿದೆ ಎಂಬುದನ್ನು ಕೂಲಂಕಷವಾಗಿ ಯೋಚನೆಮಾಡೋಣ. ಯೋಜನೆಯನ್ನು ಇಂಡಿಯಾ ಸರ್ಕಾರದವರು ಹಾಕುತ್ತಾರೆ. ಆದರೆ ಪ್ರಾಂತಸರ್ಕಾರಗಳು ಅದರ ಪ್ರಕಾರ ಕಾರ್ಯವನ್ನು ನಡೆಸುತ್ತಾರೆ ಮತ್ತು ಆಹಾರ ಪದಾರ್ಥಗಳನ್ನು ಬೆಳೆಯುತ್ತಾರೆ. ಒಟ್ಟು ಇಂಡಿಯಾದೇಶದಲ್ಲಿ ನಮ್ಮ ಪ್ರಾಂತ ಸರ್ಕಾರಗಳ ಕಂಟ್ರೋಲ್ ಇಲ್ಲದೆ ಇರುವುದರಿಂದ ಒಟ್ಟು ಇಂಡಿಯಾದೇಶಕ್ಕೆ ಅನ್ವಯಿಸಿದರೆ ನಮ್ಮ ದೇಶದಲ್ಲಿ ಬೆಳೆದದ್ದು ಸಾಕಾಗುತ್ತದೆಯೇ ಎಂದು ಕಂಡುಹಿಡಿಯುವುದಕ್ಕೆ ಅವಕಾಶವಿಲ್ಲ. ಏಕೆಂದರೆ ನಮ್ಮ ದೇಶದಲ್ಲಿ ಈ ವರ್ಷ, ತಮಗೆಲ್ಲ ಗೊತ್ತಿರುವ ಹಾಗೆ, ಚೆನ್ನಾಗಿ ಭತ್ತ ಬೆಳೆದಿದೆ. ಈ ಬೆಳೆಯಲ್ಲಿ ನಾನು ಹಾಕಿರುವ ಕಡಮೆ ಅಂದಾಜಿನಲ್ಲಿ ಒಂದು ದಿವಸಕ್ಕೆ ನೂರು ಲಾರಿಗಳಷ್ಟು ದವಸ ಶಿವಮೊಗ್ಗ ಜಿಲ್ಲೆಯಿಂದ ಮಂಗಳೂರು, ಮತ್ತು ಸಿರಸಿ, ಸಿದ್ದಾಪುರಗಳ ಕಡೆ ಸಾಗಿಹೋಗಿದೆ. ನಾನು ಮಂಗಳೂರಿನ ಕಡೆ ಹೋಗಿದ್ದಾಗ ಅಲ್ಲಿಯವರು 'ನಿಮ್ಮಕಡೆಯಿಂದ ಪ್ರತಿದಿನವೂ ಎಷ್ಟೋಲಾರಿಗಳ ದವಸ ಬರುತ್ತಿದೆ'ಎಂದು ಹೇಳಿದರು. ಆ ಲಾರಿಗಳು ಯಾವಕಡೆ ಹೋಗುತ್ತವೆ ಎಂದು ಕೇಳಿದ್ದಕ್ಕೆ ಕೆಲವುಭಾಗ ಕೇರಳಕ್ಕೆ ಹೋಯಿತು ಮತ್ತೆ ಕೆಲವುಭಾಗ ಗೋವಾಕ್ಕೆ ಹೋಯಿತು ಎಂದು ತಿಳಿದು ಬಂತು. ಕೊಡಗು ಪ್ರದೇಶದಲ್ಲಿ ಹಿಂದೆ ಕಂಟ್ರೋಲ್ ಇದ್ದಾಗ ನಾವು ಅಕ್ಕಿಯನ್ನು ಕೊಳ್ಳುತ್ತಿದ್ದೆವು. ಅವರು 12 ಸಾವಿರ ಟನ್ ಭತ್ತ ಜಾಸ್ತಿಯಾಗಿ ಬೆಳೆದಿದ್ದಾರೆ. ಇವೊತ್ತು ನೋಡಿದರೆ ಅಲ್ಲಿ ಭತ್ತ ಇಲ್ಲ. ಅದೆಲ್ಲ ಎಲ್ಲಿ ಹೋಯಿತು ಎಂದು ನಾವು ಯೋಚನೆ ಮಾಡಬೇಕು. ಭತ್ತದ ಸಾಗಣಿಕೆಗೆ border control ಇಲ್ಲದೆ ಇರುವುದರಿಂದ ಭತ್ತವೆಲ್ಲ ಕೇರಳ ಮತ್ತು ಗೋವ ಈ ಪ್ರಾಂತಗಳಿಗೆ ಹೋಗಿದೆ. ಅದಕ್ಕೋಸ್ಕರ ಆಹಾರದ ಅಭಾವ ಕಾಣುತ್ತಿದೆ. ಇದರಿಂದ ಸರ್ಕಾರದವರು ಹಣವನ್ನು ಅನ್ಯಾಯವಾಗಿ ಖರ್ಚು ಮಾಡಿರುತ್ತಾರೆನ್ನುವ ಭಾವನೆ ಬರುತ್ತದೆ. ಆದುದರಿಂದ ಜವಾಬ್ದಾರಿ ಇರತಕ್ಕವರು ಯೋಚನೆ ಮಾಡಿ, ಸರ್ಕಾರದವರು ಮಾಡಿರತಕ್ಕ ಯೋಜನೆ ಫಲಕಾರಿಯಾಗಿಲ್ಲವೆಂದರೆ, ತಪ್ಪನ್ನು ಸರಿಪಡಿಸುವುದಕ್ಕೆ ಸಿದ್ಧರಾಗಿದ್ದೇವೆ. ಆದರೆ ನಮಗೆ ಆರೀತಿ ಕಂಡುಬಂದಿಲ್ಲ. ಒಬ್ಬ ಮಾನ್ಯಸದಸ್ಯರು ಹೇಳಿದ ಹಾಗೆ, ಕೆರೆ ಕಟ್ಟಿಸುವುದಕ್ಕೆ ಮತ್ತು ಕೆಲವು ಏರ್ಪಾಡುಗಳನ್ನು ಮಾಡುವುದರಲ್ಲಿ ತಡವಾಗಿರಬಹುದು. ಆದರೆ ಒಟ್ಟಿನಲ್ಲಿ ನಮ್ಮ ಅಂದಾಜಿಗಿಂತ ಜಾಸ್ತಿ ಬೆಳೆಯಾಗಿದೆ. ಇಷ್ಟು ಆಹಾರ ಧಾನ್ಯಗಳ ಬೆಲೆ ಜಾಸ್ತಿಯಾಗಿರುವುದಕ್ಕೆ ಕಾರಣ ವೇನೆಂದರೆ ಇಂಡಿಯಾ ಸರ್ಕಾರದವರು 200 ಕೋಟಿ ರೂಪಾಯಿಗಳ ಆಹಾರ ಪದಾರ್ಥಗಳ ಆಮದು ಮಾಡುವುದನ್ನು ಕಡಿಮೆ ಮಾಡುತ್ತ ಬಂದರು. 1952ನೆಯ ಇಸವಿಯಿಂದೀಚೆಗೆ ಈರೀತಿಮಾಡಿದರು. ನಮ್ಮ ದೇಶಕ್ಕೆ ಹೊರಗಿನಿಂದ ಅಹಾರ ಪದಾರ್ಥಗಳನ್ನು ಕೊಂಡು ಕೊಂಡರೆ ನಮ್ಮ ದೇಶದ ಹಣವನ್ನು ಹೆಚ್ಚಿಗೆ ಹೊರಕ್ಕೆ ಕಳುಹಿಸಿದ ಹಾಗಾಗುತ್ತದೆ, ಅದನ್ನು ಕಡಿಮೆಮಾಡಬೇಕು ಮತ್ತು ನಮ್ಮ ದೇಶದಲ್ಲಿ ಅಭಿವೃದ್ಧಿಮಾಡಿ ಹೆಚ್ಚಿಗೆ ಆಹಾರವನ್ನು ಬೆಳೆಯುವುದಕ್ಕೆ ಪ್ರಯತ್ನ ಮಾಡಬೇಕೆಂಬ ದೃಷ್ಟಿಯಿಂದ, ಹೀಗೆ ನಾಲ್ಕಾರು ದೃಷ್ಟಿಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಆಮದು ಮಾಡುವುದನ್ನು ಕಡಮೆ ಮಾಡುತ್ತ ಬಂದರು.

5 P.M.

1954-55 ಮತ್ತು 1955-56 ರಲ್ಲಿ ಹೊರಗಡೆಯಿಂದ ಧಾನ್ಯ ತರಿಸಲಾಯಿತು. 1955-56ನೇ ವರ್ಷದಲ್ಲಿ ಹೊರಗಡೆಯಿಂದ 7 ಲಕ್ಷ ಟನ್ ಆಹಾರ ಧಾನ್ಯವನ್ನು ತರಿಸಿದೆ. 1951ರಲ್ಲಿ 216 ಕೋಟಿ ರೂಪಾಯಿ ಬೆಲೆಯ ಆಹಾರ ಧಾನ್ಯ ತರಿಸಬೇಕಾಯಿತು. ಆಹಾರ ಧಾನ್ಯವನ್ನು ಹೊರಗಡೆಯಿಂದ ತರಿಸುವುದನ್ನು ಕಡಮೆ ಮಾಡಬೇಕೆಂಬ ನೀತಿಯನ್ನು ಇಟ್ಟುಕೊಂಡಂತೆ 1955

(ಶ್ರೀ ಎಚ್. ಎಸ್. ರುದ್ರಪ್ಪ)

ರಲ್ಲಿ 35 ಕೋಟಿ ರೂಪಾಯಿಗಳ ಮಟ್ಟಿಗೆ ತರಿಸಲಾಯಿತು. ಆ ವರ್ಷ ಜನವರಿ ತಿಂಗಳಿನಲ್ಲಿ ದೇಶದಲ್ಲೆಲ್ಲಾ ಆಹಾರ ಪದಾರ್ಥಗಳ ಬೆಲೆಯು ಕಡಮೆ ಆಯಿತೆಂದು ಕೂಗು ಎದ್ದಿತು. ಸರಪ್ಲಸ್ ಡಿಸ್ಟ್ರಿಕ್ಟುಗಳಲ್ಲಿ ಭತ್ತದ ಬೆಲೆ 14 ರೂಪಾಯಿಗಳಿಗೆ ಬಂತು. ಸರಪ್ಲಸ್ ಪ್ರದೇಶವಾದ ಆಂಧ್ರದಲ್ಲಿಯೂ ಬೆಲೆ ಕಡಮೆ ಆಯಿತು. ಧಾರಣೆ ಕಡಮೆಯಾಗುತ್ತದೆ ಎಂಬ ಕೂಗು ಎದ್ದದ್ದು ಇಂಡಿಯಾ ಸರ್ಕಾರದವರ ಗಮನಕ್ಕೆ ಬಂತು. ಧಾರಣೆಯ ಮೇಲೆ ಹತೋಟಿ ಇರಬೇಕೆಂದು ಸೂಚನೆ ಕೊಟ್ಟ ಪ್ರಕಾರ ಭಾರತ ಸರಕಾರದವರು ಆಹಾರ ಪದಾರ್ಥಗಳನ್ನು ಶೇಖರಿಸುವುದಕ್ಕೆ ಕೆಲವು ವ್ಯವಸ್ಥೆ ಮಾಡಿದರು. ಅಲ್ಲದೆ 1956 ರಲ್ಲಿ ಹೊರಗಡೆ ರಫ್ತು ಮಾಡುವುದಕ್ಕೆ ಅವಕಾಶ ಒದಗಿಸಿ ಕೊಡಲಾಯಿತು. ಇದರಿಂದ ಹೇರಳವಾಗಿ ರಫ್ತು ಆಯಿತು. ಆಹಾರ ಧಾನ್ಯಗಳ ಸಮೃದ್ಧಿ ಇತ್ತು. ಇವೊತ್ತಿನ ದಿವಸವಾದರೂ ಆಹಾರ ಧಾನ್ಯ ಹೆಚ್ಚಾಗಿ ಬೆಳೆದು ಇದ್ದರೂ ದೇಶದಲ್ಲಿ ಧಾರಣೆ ಯಾಕೆ ಜಾಸ್ತಿಯಾಗುತ್ತಾ ಇದೆ ಎಂಬುದನ್ನು ಯೋಚನೆ ಮಾಡಿ ನೋಡೋಣ. 1956-57 ರಲ್ಲಿ ಅತಿವೃಷ್ಟಿಯಿಂದ ನಿರೀಕ್ಷಿಸಿದಷ್ಟು ಬೆಳೆ ಬರಲಿಲ್ಲ. ಧಾರವಾಡ, ಬೆಳಗಾವಿ, ವಿಜಾಪುರ ಜಿಲ್ಲೆಯ ಪ್ರದೇಶಗಳಲ್ಲಿ ಅತಿವೃಷ್ಟಿಯಿಂದ ತೊಂದರೆಯಾಯಿತು. ಉಳಿದ ಎಲ್ಲ ಪ್ರದೇಶದಲ್ಲೂ ಸರಕಾರದವರು ಹಾಕಿಕೊಂಡ ಕಾರ್ಯಕ್ರಮಕ್ಕೆ ಅನುಸಾರವಾಗಿ ಆಹಾರಧಾನ್ಯಗಳ ಬೆಳೆ ಬಂದಿದೆ; ಕಡಮೆ ಏನೂ ಆಗಿಲ್ಲ. ಹೀಗೆ ಇದ್ದರೂ ಸಹ ಆಹಾರ ಧಾನ್ಯಗಳ ಧಾರಣೆಮಾತ್ರ ಜಾಸ್ತಿಯಾಗುವುದಕ್ಕೆ ಬೇರೆ ಪರಿಸ್ಥಿತಿಯು ಉಂಟಾದುದೇ ಕಾರಣ. ದೇಶದಲ್ಲಿ ಆಹಾರದ ಕೊರತೆ ಇಲ್ಲ. ದುಡ್ಡು ಕೊಟ್ಟರೆ ಆಹಾರ ಧಾನ್ಯಗಳು ಸಿಕ್ಕುವದಿಲ್ಲ ಎಂದು ಯಾರೂ ಹೇಳಿಲ್ಲ. ದುಡ್ಡು ಕೊಟ್ಟರೆ ಬೇಕಾದಷ್ಟು ಆಹಾರ ಧಾನ್ಯಗಳು ಸಿಕ್ಕುತ್ತವೆ. ಆಹಾರ ಧಾನ್ಯಗಳ ಸಂಗ್ರಹ ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ರೈತರು ಬೆಳೆಯನ್ನು ಚೆನ್ನಾಗಿ ಬೆಳೆದಿದ್ದಾರೆ. ರೈತರ ಹತ್ತಿರ ಧಾನ್ಯಸಂಗ್ರಹ ಸಾಕಷ್ಟಿದೆ. ಈ ಸಂದರ್ಭದಲ್ಲಿ ಧಾರಣೆಯು ಯಾಕೆ ಜಾಸ್ತಿಯಾಯಿತು ಎಂಬದನ್ನು ಯೋಚನೆಮಾಡಬೇಕಾಗಿದೆ. ಧಾರಣೆಯು ಕಡಿಮೆ ಯಾಗಿದ್ದರೆ ರೈತರು ಹೆಚ್ಚು ಬೆಳೆಯುವುದಕ್ಕೆ ಪ್ರಯತ್ನ ಮಾಡುವದಿಲ್ಲ. ಧಾರಣೆಯು ಜಾಸ್ತಿಯಾಗುವುದಕ್ಕೆ ಕಾರಣವೇನೆಂದರೆ Cost of production ಬಹಳ ಜಾಸ್ತಿಯಾಗಿದೆ. ಕೆಲಸ ಮಾಡುವ ಕೂಲಿಕಾರರಿಗೆ ಹೆಚ್ಚು ಕೂಲಿ ಕೊಡಬೇಕಾಗಿದೆ. ಒಕ್ಕಲತನಕ್ಕೆ ಬೇಕಾಗಿರತಕ್ಕಂಥ ಸಾಮಾನುಗಳು ಕಬ್ಬಿಣ ಮುಂತಾದ ಪದಾರ್ಥಗಳ ಬೆಲೆಯು ಹೆಚ್ಚಾಗಿದೆ. ಈ ರೀತಿಯಾಗಿ ರೈತನಿಗೆ ಹೆಚ್ಚು ಖರ್ಚು ಬರುವುದರಿಂದ ಧಾರಣೆವಾಸಿ ಜಾಸ್ತಿಯಾಗಿದೆ. ಕಡಿಮೆ ಬೆಲೆಗೆ ಆಹಾರ ಪದಾರ್ಥಗಳನ್ನು ಕೊಡಲು ರೈತನು ಇಷ್ಟ ಪಡುವುದಿಲ್ಲ.

Sri M. C. NARASIMHAN.—As this matter has been referred to a Committee by the Government of India, are you not pre-judging the issue ?

Sri H. S. RUDRAPPA.—It is not so. I am merely explaining the situation and trying to meet the points that have been raised by the hon. members. Incidentally, this may be taken note of by that Committee also. We are prepared to argue before it.

ಈ ಕಾರಣದಿಂದ ಧಾರಣೆವಾಸಿ ಜಾಸ್ತಿಯಾಗಿದೆ. ಹೆಚ್ಚು ಆಹಾರ ಉತ್ಪತ್ತಿಗಾಗಿ ಸರಕಾರದವರು ಹಾಕಿಕೊಂಡಿರತಕ್ಕಂಥ ಕಾರ್ಯಕ್ರಮವು ಚೆನ್ನಾಗಿ ನಡೆದಿಲ್ಲ ಎಂದು ಭಾವನೆ ಮಾಡಿಕೊಳ್ಳ ಕೂಡದು. ಭಾರತ ಸರಕಾರದವರು ಈ ವಿಷಯವನ್ನು ಆಲೋಚನೆಮಾಡಿ ಸ್ಪಷ್ಟವಾಗಿ ಹೇಳಿದ್ದಾರೆ. ಆಹಾರ ಪದಾರ್ಥಗಳ ಬೆಲೆಯನ್ನು ನಿಗದಿ ಮಾಡದ ವಿನಃ ರೈತರಲ್ಲಿ ಹೆಚ್ಚು ಬೆಳೆಯುವದಕ್ಕೆ ಆಸಕ್ತಿ ಉಂಟಾಗುವದಿಲ್ಲ. ಇದನ್ನು ಸಮಾಲೋಚನೆ ಮಾಡಿ ರೈತರಿಗೆ ನ್ಯಾಯವಾದ ಬೆಲೆಯನ್ನು ದೊರಕಿಸಿ ಕೊಡುವಂತೆ ಮಾಡುತ್ತಿದ್ದೇವೆಂದು ಕೇಂದ್ರ ಸರಕಾರದ ಆಹಾರ ಮಂತ್ರಿಗಳು ಹೇಳಿದ್ದಾರೆ. ಆಹಾರದ ಅಭಾವವಿಲ್ಲ. ರಾಜ್ಯ ಸರಕಾರ ಮತ್ತು ಭಾರತ ಸರಕಾರದವರ ಕಾರ್ಯಕ್ರಮದಂತೆ ದೇಶದಲ್ಲಿ ಹೆಚ್ಚು ಬೆಳೆ ಬೆಳೆದಿದೆಯೆಂದು ತಿಳಿಸಲಿಚ್ಛಿಸುತ್ತೇನೆ.

ಅನೇಕ ಡಿಪೋಗಳಲ್ಲಿ ಅಕ್ಕಿಯ ಸಂಗ್ರಹ ವಿಲ್ಲವೆಂದು ಮಾನ್ಯ ಸದಸ್ಯರು ಹೇಳಿದರು. ಹಿಂದಕ್ಕೆ ಈ ಅಕ್ಕಿಯ ಅಭಾವವಿತ್ತು. ಈಗ ಬೇಕಾದಷ್ಟು ಗೋಧಿಯನ್ನು ಕೊಡಲು ಕೇಂದ್ರ ಸರಕಾರದವರು ತಯಾರು ಇದ್ದಾರೆ. ಅಕ್ಕಿಯನ್ನೇ ಊಟ ಮಾಡುವವರಿಗೆ ಹೆಚ್ಚು ಅಕ್ಕಿಯನ್ನು ಕೊಡಬೇಕೆಂದು ಕೇಳಿಕೊಂಡಿದ್ದೇವೆ. ಬೆಕಾದಷ್ಟು ಗೋಧಿ ಇರುವಾಗ ಗೋಧಿಯನ್ನು ಅಕ್ಕಿಯ ಬದಲು ಉಪಯೋಗಿಸಬೇಕು. ಅಕ್ಕಿಯ ಉಪಯೋಗ ಮಾಡುವದನ್ನು ಕಡಿಮೆ ಮಾಡಬೇಕು. ಅಕ್ಕಿಯ ಆಮದು ಕಡಿಮೆಯಾಗಬೇಕಾಗಿದೆ. ಆಹಾರ ಧಾನ್ಯಗಳ ಮೇಲೆ ಸೇಲ್ಸ ಟ್ಯಾಕ್ಸ ಹಾಕುವದನ್ನು ಸರಕಾರದವರು ಬಿಟ್ಟು ಕೊಟ್ಟಿದ್ದಾರೆ. ಬೆಲೆಯನ್ನು 14 ರೂಪಾಯಿಗೆ ನಿಗದಿ ಮಾಡಿದ್ದಾರೆ. ಅಕ್ಕಿಗಿಂತಲೂ ಗೋಧಿಯ ಬೆಲೆ ಕಡಿಮೆ ಇದೆ. ಆದಕಾರಣ ಹೆಚ್ಚು ಗೋಧಿಯನ್ನು ಉಪಯೋಗಿಸುವುದಕ್ಕೆ ಪ್ರಯತ್ನ ಮಾಡಬೇಕು. ಅಕ್ಕಿಯು ಹೆಚ್ಚಾಗಿರುವ ಭಾಗದಿಂದ ತರಿಸುವ ಪ್ರಯತ್ನ ನಡೆದಿದೆ. ಹಾಗಾದರೆ ಧಾರಣೆ ಕಡಿಮೆಯಾಗಲು ಅನುಕೂಲವಾಗುವದು. ಇನ್ನು ಮುಂದೆ ಅಕ್ಕಿಯ ಧಾರಣೆ ಜಾಸ್ತಿಯಾಗುವ ಸೂಚನೆ ಕಾಣುವದಿಲ್ಲ. ಇನ್ನು 3-4 ತಿಂಗಳುಗಳಲ್ಲಿ ಅಕ್ಕಿಯ ಬೆಲೆಯು ಇಳಿಯುವದೆಂಬ ಭರವಸೆ ನಮಗೆ ಇದೆ. ಈಗಾಗಲೇ ನಮಗೆ ಕಂಡುಬಂದಿರುವದೇನೆಂದರೆ ನೂರಕ್ಕೆ ಒಂದು ಅಥವಾ 5 ಬೆಲೆ ಕಡಿಮೆಯಾಗಿದೆ. ಇನ್ನು ಮುಂದೆ ಜಾಸ್ತಿಯಾಗುವ ಸಂಭವ ಕಾಣುವದಿಲ್ಲ. ಜಾಸ್ತಿಯಾಗಬೇಕೆಂದು ರೈತರು ಇಷ್ಟ ಪಡುತ್ತಾರೆ. ಕೊಳ್ಳುವ ಜನರು ಬೆಲೆ ಕಡಿಮೆ ಯಾಗಬೇಕೆಂದು ಅಪೇಕ್ಷಿಸುತ್ತಾರೆ. ತೀರ ಬೆಲೆ ಕಡಿಮೆಯಾಗ ಬೇಕೆಂದು ಅಪೇಕ್ಷಿಸುವುದು ಅಂದರೆ ಹುಚ್ಚು ಬಿಡದೆ ಲಗ್ನವಾಗುವದಿಲ್ಲ ಲಗ್ನವಾಗದೆ ಹುಚ್ಚು ಬಿಡುವದಿಲ್ಲ ಎಂಬಂತೆ ಆಗುವುದು. ಆಹಾರ ಧಾನ್ಯಗಳ ಬೆಲೆ ತೀರಾ ಕೆಳಮಟ್ಟಕ್ಕೆ ಇಳಿದರೆ ರೈತರಿಗೆ ನಷ್ಟವುಂಟಾಗುವುದು. ಅವರು ಹೆಚ್ಚಿಗೆ ಬೆಳೆಯುವದಿಲ್ಲ ಅವರಿಗೆ ನಷ್ಟವುಂಟಾಗುವಂತೆ ನಾವು ಮಾಡುವದಿಲ್ಲ. ಆದುದರಿಂದ ರೈತನ ಆರ್ಥಿಕ ಸ್ಥಿತಿ ಕೆಟ್ಟುಹೋಗದಂತೆ ರೈತರಿಗೆ ನ್ಯಾಯವಾದ ಧಾರಣೆ ದೊರೆಯುವಂತೆ ಸೂಕ್ತ ಪ್ರಯತ್ನ ಮಾಡುತ್ತೇವೆಂದು ನಾನು ಅರಿಕೆ ಮಾಡಿಕೊಳ್ಳುತ್ತೇನೆ. ಯೋಗ್ಯವಾದ ರೀತಿಯಲ್ಲಿ ಕ್ರಮ ತೆಗೆದು ಕೊಳ್ಳುತ್ತೇವೆ. ನನಗೆ ಸಂಬಂಧ ಪಟ್ಟ ವಿಷಯಗಳ ಬಗ್ಗೆ ನಾನು ತಿಳಿಸಿದ್ದೇನೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಸಿ. ನರಸಿಂಹನ್ (ಕೋಲಾರ ಗೋಲ್ಡ್ ಫೀಲ್ಡ್ಸ್).—ಕೊಡಗು, ದಕ್ಷಿಣ ಕನ್ನಡ ಜಿಲ್ಲೆ ಪ್ರಾಂತದಿಂದ ಪಕ್ಕದ ಪ್ರಾಂತಗಳಿಗೆ ಅಕ್ಕಿ ರಫ್ತಾಗುತ್ತಿದೆಯೆಂದು ತಿಳಿದುಬಂದಿದೆ. ಇದನ್ನು ತಡೆಯಲು ಮೈಸೂರು ರಾಜ್ಯದ ಸೀಮೆಗಳನ್ನು 'ಸೀಲ್' ಮಾಡಬೇಕೆಂದು ಆಹಾರ ಮಂತ್ರಿಗಳ ಸಮ್ಮೇಳನದಲ್ಲಿ ಒತ್ತಾಯ ಪಡಿಸಿದ್ದಾರೆಯೆ ?

ಶ್ರೀ ಎಚ್. ಎಸ್. ರುದ್ರಪ್ಪ.—ದಕ್ಷಿಣ ಕನ್ನಡದಿಂದ ಎಂದು ಹೇಳಲಿಲ್ಲ, ಶಿವಮೊಗ್ಗ ಮತ್ತು ಕೊಡಗಿನಿಂದ ಹೋಗಿದೆ ಎಂದು ಹೇಳಿದೆ. ಆದುದರಿಂದ border close ಮಾಡುವ ಪ್ರಶ್ನೆಯೇ ಇಲ್ಲ. ಹಾಗೆ ಮಾಡಿದರೆ ಅದು ಕಂಟ್ರೋಲ್ ಆಗುತ್ತದೆಯಾದುದರಿಂದ ಆ ಯೋಚನೆ ಮಾಡಿಲ್ಲ, ಮಾಡುವುದೂ ಇಲ್ಲ.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ (ತಿಪಟೂರು).—ಗೋವಾಕ್ಕೆ ಅಕ್ಕಿ ಹೋಗುತ್ತದೆ ಎಂಬ ವರ್ತಮಾನವಿದೆಯಲ್ಲವೆ ?

ಶ್ರೀ ಎಚ್. ಎಸ್. ರುದ್ರಪ್ಪ.—ಇದೆ. ಎಷ್ಟೋ ಹತೋಟಿಯಿಟ್ಟರೂ ಸ್ವಲ್ಪ ಹೋಗುತ್ತದೆ. ಅಲ್ಲಿ ವಿಶೇಷ ಬೆಲೆ ಇದೆ; ಆದಕಾರಣ ಕಳ್ಳತನ ಮಾಡುವುದಕ್ಕೆ ಅವಕಾಶವಾಗಿದೆ. ಸೂಕ್ತ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಕರಾವಳಿಯಲ್ಲಿ ಹೆಚ್ಚು ಸಿಬ್ಬಂದಿಯನ್ನಿಟ್ಟರೆ ಲುಕ್ಸಾನಾಗುತ್ತದೆ, ಪ್ರಯೋಜನವಾಗುವುದಿಲ್ಲ. ಎಷ್ಟು ಬೇಕೋ ಅಷ್ಟು ಸಿಬ್ಬಂದಿಯನ್ನಿಟ್ಟಿದ್ದಾರೆ.

ಒಬ್ಬ ಸದಸ್ಯರು.—ಇದಕ್ಕೆ ದೊಡ್ಡ ದೊಡ್ಡ ರಾಜಕೀಯ ಧುರೀಣರು ಕಾರಣರೆಂಬ ಅಭಿಪ್ರಾಯ ಬರುತ್ತಿದೆ......

ಶ್ರೀ ಎಚ್. ಎಸ್. ರುದ್ರಪ್ಪ.—ಹಾಗೆ ಹೇಳುವುದು ಖಂಡಿತ ನ್ಯಾಯವಲ್ಲ, ಅದು ಸತ್ಯವಾದುದಲ್ಲವೆಂದು ಹೇಳುತ್ತೇನೆ.

*ಶ್ರೀ ಎಚ್. ಕೆ. ವೀರಣ್ಣಗೌಡ.—ಅಧ್ಯಕ್ಷರೆ, ತಾವು ಅಪ್ಪಣೆ ಕೊಡಿಸಿದ ಹಾಗೆ ನನ್ನ ಆಡಳಿತಕ್ಕೊಳಪಟ್ಟಿರುವ ಪಬ್ಲಿಕ್ ವರ್ಕ್ಸ್ ಮತ್ತು ವಿದ್ಯುಚ್ಛಕ್ತಿ, ಈ ಎರಡು ಇಲಾಖೆಗಳಿಗೆ ಸಂಬಂಧ ಪಟ್ಟಂತೆ ಮಾನ್ಯ ಸದಸ್ಯರು ಮಾಡಿರುವ ಕೆಲವು ವಿಮರ್ಶಾತ್ಮಕ ಟೀಕೆಗಳನ್ನು ಕುರಿತು ನಾನು ಮಾತನಾಡುವುದಕ್ಕೆ ಪ್ರಯತ್ನಪಡುತ್ತೇನೆ. ಇದಕ್ಕೆ ಪೂರ್ವಭಾವಿಯಾಗಿ ಒಂದೆರಡು ಅಂಶಗಳನ್ನೂ ಸಹ ಅರಿಕೆ ಮಾಡಿಕೊಳ್ಳುವುದು ನನ್ನ ಆಶಯವಾಗಿದೆ. ಸಾಮಾನ್ಯವಾಗಿ ನಾನು ವಹಿಸಿಕೊಂಡಿರುವ ಇಲಾಖೆಗಳಿಗೆ ಸಂಬಂಧಪಟ್ಟ ಹಾಗೆ ಮಾಡಿರತಕ್ಕ ವಿಮರ್ಶೆಯೇನೆಂದರೆ, ಅನೇಕ ಕಡೆ ಅನೇಕ ಕೆಲಸಗಳಾಗಬೇಕು, ಅವುಗಳನ್ನು ತೀವ್ರಗೊಳಿಸಬೇಕೆಂಬುದು. ಸರ್ಕಾರದವರು ಸಾಮಾನ್ಯವಾಗಿ ಈ ಅಭಿಪ್ರಾಯವನ್ನು ಒಪ್ಪಿಕೊಳ್ಳುತ್ತಾರೆ. ಹಳೆಯ ಮೈಸೂರಿನಲ್ಲಿಯೂ, ಹೊಸದಾಗಿ ಬಂದಿರತಕ್ಕ ಭಾಗಗಳಲ್ಲಿಯೂ, ಎಲ್ಲ ಕಡೆಗಳಲ್ಲಿಯೂ ಈ ಕಾರ್ಯಗಳು ಆಗಬೇಕು. ಸಂಚಾರಸೌಕರ್ಯವಾಗಬೇಕು. ಇರತಕ್ಕ ರಸ್ತೆಗಳು ಚೆನ್ನಾಗಿ ಆಗಬೇಕು. ಅನೇಕ ಸ್ಥಳಗಳಲ್ಲಿ ಸೇತುವೆಗಳಾಗಬೇಕು, ಅನೇಕ ಊರುಗಳಿಗೂ ಪಟ್ಟಣಗಳಿಗೂ ವಿದ್ಯುಚ್ಛಕ್ತಿಯನ್ನೊದಗಿಸಬೇಕು, ಕೈಗಾರಿಕೆಗಳಿಗೆ ವಿದ್ಯುಚ್ಛಕ್ತಿಯನ್ನೊದಗಿಸಬೇಕು. ಇದನ್ನೆಲ್ಲಾ ಸರ್ಕಾರದವರು ಒಪ್ಪಿಕೊಳ್ಳುತ್ತಾರೆ. ಕಾರ್ಯಕ್ರಮಗಳು ಮುಂದುವರಿಯಬೇಕೆಂದು ಎತ್ತಿ ತೋರಿಸತಕ್ಕ ಕೆಲವು ಟೀಕೆಗಳಿಗೆ ಸಮಜಾಯಿಷಿ ಕೊಡಲು ಪ್ರಯತ್ನಪಡುತ್ತೇನೆ.

ಮೊದಲನೆಯದಾಗಿ, ಸರ್ಕಾರದ ಸಾಮಾನ್ಯ ಆಡಳಿತ ನೀತಿಯನ್ನು ಕುರಿತು ಕೆಲವರು ಹೇಳಿರುವ ಮಾತುಗಳಿಗೆ ನಾನು ಸರ್ಕಾರದ ಪರವಾಗಿ ಕೆಲವು ವಿಷಯಗಳನ್ನು ಸಭೆಯ ಗಮನಕ್ಕೆ ತರಬೇಕೆಂದಿಚ್ಛಿಸುತ್ತೇನೆ. ಸಾಮಾನ್ಯವಾಗಿ ನಮ್ಮ ಎದುರು ಪಕ್ಷದ ಸದಸ್ಯರನೇಕರು ಕಾಂಗ್ರೆಸ್ ಸರ್ಕಾರದ ಆಡಳಿತವನ್ನು ಕಟುವಾಗಿ ಟೀಕಿಸಿದ್ದಾರೆ. ಕೆಲವು ಸಂದರ್ಭಗಳಲ್ಲಿ ವಿನಾಕಾರಣ ಟೀಕಿಸಿದ್ದಾರೆ. ಸರಿಯಾಗಿ ವಿಷಯಗಳನ್ನು ತಿಳಿದುಕೊಳ್ಳದೆ ಊಹೆಯ ಮೇಲೆ ಟೀಕಿಸಿದ್ದಾರೆಂದು ನನಗನಿಸುತ್ತದೆ. ಕಾಂಗ್ರೆಸ್ ಆಡಳಿತವನ್ನು ಟೀಕಿಸುವುದೇ ಪರಮೋದ್ದೇಶವೆಂದು ಭಾವಿಸಿ ಟೀಕಿಸಿದ್ದಾರೆ. ಕಟುವಾಗಿ ಮಾತನಾಡಿದ್ದಾರೆಂದು ಹೇಳಿದ್ದರೂ ಎಷ್ಟು ಮಟ್ಟಿಗೆ ಅಂಕಿ ಅಂಶಗಳನ್ನು ತಿಳಿದುಕೊಂಡು ಮಾತನಾಡಬಹುದಾಗಿತ್ತೋ ಅಷ್ಟು ಮಟ್ಟಿಗೆ ತಿಳಿದುಕೊಳ್ಳದೆ ಹಾಗೆ ಮಾತನಾಡಿದ್ದಾರೆ. ಒಂದುವೇಳೆ ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಪಟ್ಟಿದ್ದರೆ ಆ ರೀತಿ ಮಾಡುತ್ತಿರಲಿಲ್ಲವೆಂದು ಅಭಿಪ್ರಾಯ ಉಳ್ಳವನಾಗಿದ್ದೇನೆ. ಉದಾಹರಣೆಗೆ ಒಂದೆರಡು ವಿಷಯಗಳನ್ನು ಹೇಳುತ್ತೇನೆ. ಮಂತ್ರಿಗಳಿಗೆ ಮೂವತ್ತು ಸಾವಿರ ರೂಪಾಯಿಗಳ ಕಾರುಗಳೇಕೆ ಎಂದು ಕೇಳಿದರು. ಅನೇಕ ಮಂತ್ರಿಗಳು ಹಳೆಯ ಕಾರುಗಳನ್ನುಪಯೋಗಿಸುತ್ತಿದ್ದಾರೆ. ಈ ಸರ್ಕಾರ ಆಡಳಿತ ವಹಿಸಿಕೊಳ್ಳುವುದಕ್ಕೆ ಮುಂಚೆ ಕೆಲವು ಕಾರುಗಳಿಗೆ ಆರ್ಡರ್ ಕೊಟ್ಟಿದ್ದರು. ಅದೂ ಮೂವತ್ತು ಸಾವಿರವಲ್ಲ 18–20 ಸಾವಿರ ರೂಪಾಯಿಗಳೊಳಗೇ ಇರುತ್ತದೆ. ಈಗ ಇನ್ನೂ ಚಿಕ್ಕ ಕಾರುಗಳನ್ನು ಕೊಳ್ಳಬಹುದು. ಎಂಟು-ಒಂಬತ್ತು ಸಾವಿರಕ್ಕೆ ಕಾರುಗಳು ಸಿಕ್ಕುತ್ತವೆ. ಆದರೆ ಅವುಗಳಲ್ಲಿ ಬೆಂಗಳೂರು ನಗರದಲ್ಲಿ ತಿರುಗಾಡಬಹುದು ಅಷ್ಟೆ. ಆದರೆ ಈ ಹೊತ್ತು ನಮ್ಮ ರಾಜ್ಯ ದೊಡ್ಡದಾಗಿದೆ. ರಾಜ್ಯದ ಮುಖ್ಯಪಟ್ಟಣದಿಂದ 600 ಮೈಲಿಗಳ ದೂರ ಹೋದರೂ ನಮ್ಮ ರಾಜ್ಯದ ದೂರ ಪ್ರದೇಶಗಳಿಗೆ ಹೋಗುವುದಕ್ಕಾಗುವುದಿಲ್ಲ. ಅಂಥ ಕಡೆಗಳಿಗೆ ಹೋಗಬೇಕಾದರೆ ಒಂಬತ್ತು ಸಾವಿರ ರೂಪಾಯಿನ ಕಾರಿನಲ್ಲಿ ಪ್ರಯಾಣ ಮಾಡುವುದು ಸಾಧ್ಯವಲ್ಲ. ಒಬ್ಬ ಮಂತ್ರಿ ಒಂದೇಸಾರಿ ಹೀಗೆ 600 ಮೈಲಿ ದೂರವಿರುವ ಬಿಜಾಪುರ, ಬೆಳಗಾವ್ ಕೊನೆಗೆ ಹೋಗಿ ಬಂದರೆ ಇಂಥ ಕಾರು ಮುಕ್ತಾಯವಾಗುತ್ತದೆ. ರಸ್ತೆಗಳ ಪರಿಸ್ಥಿತಿಯಲ್ಲಿ ಎಷ್ಟು ಮೈಲಿದೂರ ಸುರಕ್ಷಿತವಾಗಿ ಹೋಗಿ ಬರಬಹುದು ಎಂಬುದನ್ನು ಗಮನಿಸಿದರೆ ಇಂಥ ಕಾರುಗಳಿಂದ ಸರಿಯಾದ ಪ್ರಯಾಣ ಸಾಧ್ಯವಾಗುವುದಿಲ್ಲ. ಇದು ಉಳಿತಾಯ ಮಾಡುವ ಸಲಹೆಯಲ್ಲ. ಮೂವತ್ತು ಸಾವಿರ ರೂಪಾಯಿ ಕಾರುಗಳನ್ನುಪಯೋಗಿಸಿದ್ದಾರೆಂದು ಹೇಳುವುದು ಸತ್ಯಕ್ಕೆ ದೂರವಾದ ಮಾತು.

ಎರಡನೆಯದಾಗಿ, ಮಂತ್ರಿಗಳ ನಿವಾಸಕ್ಕೊದಗಿಸುವ ಸಲಕರಣೆ, ಇವರ ಓಡಾಟ, ದರ್ಬಾರು ಇವನ್ನೆಲ್ಲಾ ನೋಡಿದರೆ, ಇವರಿಗೆ ಅಂಗಿ ಒಂದು ವಿನಾ ಬಾಕಿ ಎಲ್ಲವನ್ನೂ ಸರ್ಕಾರದಿಂದ ಕೊಟ್ಟಿದ್ದಾರೆಂದು ಹೇಳಿದರು. ಇದು ಏನೂ ತಿಳಿಯದೇಯಿರುವ ಜನರು ಮಾಡುವ ಟೀಕೆಯಲ್ಲದೆ ನಿಜಾಂಶವನ್ನು ತಿಳಿದು ಆಡುವ ಮಾತಲ್ಲ. ಮಂತ್ರಿಗಳಿಗೆ ಎಷ್ಟು ವೇತನವಿರಬೇಕು, ಏನು ಸಲಕರಣೆಗಳನ್ನು ಕೊಡಬೇಕೆಂಬ ಬಗ್ಗೆ ಕಾನೂನು ಮಾಡಿದ್ದಾರೆ. ಮಂತ್ರಿಗಳಿಗೆ furnished house ಎಂದರೆ ಮನೆ ಮತ್ತು ಕುರ್ಚಿ, ಮೇಜು ಮುಂತಾದ ಅವಶ್ಯಕವಾದ ಸಾಮಾನುಗಳನ್ನು ಕೊಟ್ಟಿದ್ದಾರೆಯೇ ವಿನಾ ಬಾಕಿಯದನ್ನು ಕೊಟ್ಟಿಲ್ಲ. ಸ್ವಂತ ಮನೆಗಳಲ್ಲಿದ್ದರೆ ಇದನ್ನೂ ಕೊಡುವುದಿಲ್ಲ. ಹೀಗೆ ಕಾನೂನು ಬದ್ಧವಾಗಿ ಮಂತ್ರಿಗಳಿಗೆ ಏನು ಸೌಲಭ್ಯ ಕೊಡಬೇಕೆಂದು ವಿಧಾಯಕವಾಗಿದೆಯೋ ಅದನ್ನು ಕೊಟ್ಟರೆ,

(ಶ್ರೀ ಎಚ್. ಕೆ. ವೀರಣ್ಣಗೌಡ.)

ಅದನ್ನು ವೈಯಕ್ತಿಕವಾಗಿ ಕೆಲವು ಸದಸ್ಯರು ಟೀಕೆ ಮಾಡಿರುವುದರಿಂದ, ಅಸೂಯಾಪರತೆಯಿಂದ ಮಾತ ನಾಡುತ್ತಿದ್ದಾರೋ ಏನೋ ಅಂದುಕೊಳ್ಳ ಬಹುದೇ ವಿನಾ ಅಂಕಿ ಅಂಶಗಳ ಮೇಲೆ ಮಾತನಾಡಿಲ್ಲವೆಂದು ಹೇಳಬಹುದು. ಮಂತ್ರಿಗಳು ಸ್ವೇಚ್ಛೆಯಾಗಿ ಸರ್ಕಾರದ ಹಣದಿಂದ ಸುಖ ಸೌಲಭ್ಯಗಳನ್ನು ಕಲ್ಪಿಸಿ ಕೊಂಡಿದ್ದಾರೆಂದು ಹೇಳುವುದು ಸರಿಯಲ್ಲವೆಂದು ಹೇಳಬೇಕಾಗಿದೆ. ''ಕಾಂಗ್ರೆಸ್ ಮಂತ್ರಿಗಳು ವೇದಾಂತ ಹೇಳುತ್ತಾರೆ, ಕಾರ್ಯತಃ ಅದಕ್ಕೆ ವಿರುದ್ಧವಾಗಿ ನಡೆದುಕೊಳ್ಳುತ್ತಾರೆ, ಚುನಾವಣೆಯ ಸಂದರ್ಭದಲ್ಲಿ ಸರ್ಕಾರಿ ಕಾರುಗಳನ್ನುಪಯೋಗಿಸಿದರು'' ಎಂದು ಹೇಳಿದರು. ಇದು ನೂರಕ್ಕೆ ನೂರರಷ್ಟು ತಪ್ಪು ಮಾತು. ಯಾವ ಮಂತ್ರಿಯೇ ಆಗಲಿ ಸರ್ಕಾರಿ ಕಾರನ್ನು ಚುನಾವಣೆಯ ಸಂಬಂಧದಲ್ಲಿ ಉಪಯೋಗಿಸಿದ್ದಾರೆಂದು ಗೊತ್ತಾದರೆ ಇದರ ಮೇಲೆ ಚುನಾವಣೆ ತಕರಾರು ಅರ್ಜಿ ಹಾಕಬಹುದಾಗಿದೆ. ಇಂಥ ಅರ್ಜಿಕೊಟ್ಟು ಅಂಥ ಅಪಾದನೆ ಸ್ಥಿರಪಟ್ಟರೆ ಚುನಾವಣೆ ರದ್ದಾಗುತ್ತದೆ, ಅತನು ತನ್ನ ಸ್ಥಾನವನ್ನು ಕಳೆದುಕೊಳ್ಳಬೇಕಾಗುತ್ತದೆ. ಹೀಗಿರುವಾಗ ಇಂಥ ಅಪಾದನೆ ಮಾಡುವುದು ಸರಿಯಲ್ಲ.

ಇನ್ನೊಂದು ವಿಷಯ ಹೇಳಿದರು; ಚುನಾವಣೆಯಲ್ಲಿ ಅನೀತಿಮಾರ್ಗವನ್ನನುಸರಿಸಿದರು ಎಂದು ಕೆಲವು ಸ್ನೇಹಿತರು ಅಪಾದನೆ ಮಾಡಿದರು. ಎಲ್ಲಿಯೋ ಒಂದು ಕ್ಷೇತ್ರದಲ್ಲಿ ಮದ್ಯಪಾನವನ್ನು ಕಾಂಗ್ರೆಸ್ ಉಮೇದುವಾರರು ಸೀಮೆಎಣ್ಣೆ ಡಬ್ಬಗಳಲ್ಲಿ ತುಂಬಿ ಒದಗಿಸುತ್ತಿದ್ದರು ಎಂದು ಹೇಳಿದರು. ಆ ವಿಚಾರದಲ್ಲಿ ನನ್ನಲ್ಲಿ ಪೂರ್ಣ ಮಾಹಿತಿ ಇದೆ. ಒಂದು ಪ್ರಾಣಿ ಮೊಸರನ್ನವನ್ನು ತಿಂದು ಇನ್ನೊಂದು ಪ್ರಾಣಿಯ ಮುಖಕ್ಕೆ ಒರಸಿತು ಎಂಬ ಗಾದೆ ಜ್ಞಾಪಕಕ್ಕೆ ಬರುತ್ತದೆ. ಕಾಂಗ್ರೆಸ್ಸೇತರರು ಮದ್ಯಪಾನವನ್ನು ಏರ್ಪಾಡುಮಾಡಿ, ಕಾಂಗ್ರೆಸ್ ಉಮೇದುವಾರರ ಮನೆಯ ಸುತ್ತಮುತ್ತ ಅದರ ಡಬ್ಬಗಳನ್ನು ಬಿಸಾಡಿ ಓಡಿ ಹೋಗಬೇಕೆಂದು ಪ್ರಯತ್ನಿಸಿ ಕಾಂಗ್ರೆಸ್ ಉಮೇದುವಾರರ ಮೇಲೆ ದೂರು ಹಾಕಬೇಕೆಂದು ಪ್ರಯತ್ನ ಪಟ್ಟಿದ್ದರು. ಅದು ಅನೇಕರಿಗೆ ಗೊತ್ತಿದೆ. ಹೀಗಿರುವಾಗ ಅವರು ಈ ರೀತಿ ಹೇಳುವುದು ಸರಿಯಲ್ಲ.

ಶ್ರೀ ವೈ. ವೀರಪ್ಪ (ಹೊಳೆನರಸೀಪುರ).—ಅಧ್ಯಕ್ಷರೇ ಮಂತ್ರಿಗಳು ಈಗ್ಗೆ ಆಗುವುದಿಲ್ಲವೆಂದು ಹೇಳುತ್ತಿದ್ದಾರೆ. ಅವರು ಹೇಳತಕ್ಕ ಮಾತುಗಳು ನಿಜಾಂಶಕ್ಕೆ ದೂರವಾಗಿರುವುದರಿಂದ ಬಹುಶಃ ತಾವು ಹೇಳಿದಹಾಗೆ ಅವರಿಗೆ ಸಂಬಂಧಪಟ್ಟ ಇಲಾಖೆಗಳಿಗೆ ಅವರು ಕನ್‌ಫ್ಯೆನ್ ಮಾಡುವುದು ಉಚಿತ ಎಂದು ಕಾಣುತ್ತದೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಸರ್ಕಾರಕ್ಕೆ ಬಂದ ಟೀಕೆಗಳಿಗೆ ಉತ್ತರ ಕೊಡುವುದಕ್ಕೆ ನನಗೆ ಅಧಿಕಾರವಿದೆ; ಎಷ್ಟು ಮಾತನಾಡಬೇಕೆಂದು ಹೇಳುವುದಕ್ಕೆ ತಾವಲ್ಲ.

ಅಧ್ಯಕ್ಷರು.—ಜಾಯಿಂಟ್ ರೆಸ್ಪಾನ್ಸಿಬಿಲಿಟಿ ಇರುವುದರಿಂದ ಮಂತ್ರಿಗಳು ಎಲ್ಲರ ಪರವಾಗಿಯೂ ಮಾತನಾಡುವುದಕ್ಕೆ ಅವಕಾಶವಿದೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಜನಗಳನ್ನು ತಪ್ಪುದಾರಿಗೆ ಎಳೆಯುವುದೂ ಸರ್ಕಾರದಮೇಲೆ ಇಲ್ಲದ ಸಲ್ಲದ ಆರೋಪಣೆಗಳನ್ನು ಮಾಡುವುದೂ ಮಾನ್ಯ ಸದಸ್ಯರಿಗೆ ತಕ್ಕದಲ್ಲ ಎಂದು ಹೇಳಿ ನಾನು ನನ್ನ ಮಾತನ್ನು ಮುಂದುವರಿಸುತ್ತೇನೆ. ಕೆಲವು ಮಾನ್ಯ ಸದಸ್ಯರು ನನ್ನ ಇಲಾಖೆಗಳಿಗೆ ಸಂಬಂಧಪಟ್ಟಂತೆ ಕೆಲವು ಟೀಕೆಗಳನ್ನು ಮಾಡಿದ್ದಾರೆ. ಸಾಮಾನ್ಯವಾಗಿ ಅಗತ್ಯವೆಂದು ಮನಗಂಡಿರುವ ಟೀಕೆಗಳಿಗೆ ಉತ್ತರ ಕೊಡತಕ್ಕದ್ದು ಅಗತ್ಯ. ಮಾನ್ಯ ಸದಸ್ಯರು ಮಾಡಿರುವ 18-20 ವರ್ಗದ ಟೀಕೆಗಳಿಗೆ ಸರ್ಕಾರದ ಪರವಾಗಿ ಉತ್ತರ ಕೊಡಲು ಪ್ರಯತ್ನಮಾಡುತ್ತೇನೆ. ಶ್ರೀ ನರಸಿಂಹ ರೆಡ್ಡಿಯವರು ಪಬ್ಲಿಕ್‌ವರ್ಕ್ಸ್ ಇಲಾಖೆಯಲ್ಲಿ ಶೇಕಡ 40 ರಷ್ಟು ದುಡ್ಡು ವ್ಯರ್ಥವಾಗಿ ವೆಚ್ಚವಾಗುತ್ತಿದೆ ಎಂದು ಹೇಳಿದರು. ಇದು ಯಾವ ಅಂಕಿ ಅಂಶಗಳ ಆಧಾರದ ಮೇಲೂ ಮಾಡಿದ ಟೀಕೆಯಲ್ಲ ಎಂದು ಅನಿಸುತ್ತದೆ. ಯಾಕೆಂದರೆ ಕೆಲಸಮಾಡುವುದರಲ್ಲಿ ನಷ್ಟ ಸಂಭವಿಸುತ್ತದೆ. ಕಂಟ್ರಾಕ್ಟರುಗಳಿಗೆ ಹೆಚ್ಚಾಗಿ ಕೊಡುತ್ತಾರೆ ಎಂದು ಊಹೆ ಮಾಡಬಹುದು. ಆದರೆ ಸಾಮಾನ್ಯವಾಗಿ ಯಾವರೀತಿ ಕೆಲಸ ನಡೆದಿದೆ ಎಂದು ವಿಮರ್ಶೆ ಮಾಡಿನೋಡಿದರೆ ಶೇಕಡ 40 ಭಾಗ ಅನ್ಯಾಕ್ರಾಂತವಾಗಿ ಹಣ ಖರ್ಚಾಗುತ್ತದೆ ಎನ್ನುವುದಕ್ಕೆ ಆಧಾರವಿಲ್ಲ ಎಂದು ಈ ಸಭೆಯಲ್ಲಿ ನಾನು ಹೇಳುವುದಕ್ಕೆ ಅಪೇಕ್ಷೆಪಡುತ್ತೇನೆ. ಕಂಟ್ರಾಕ್ಟು ಕೊಡುವ ಸಂದರ್ಭದಲ್ಲಿ ಟೆಂಡರ್ಸ್ ಕರೆದು ಯಾರದು ಕಡಮೆಯಾಗಿರುತ್ತದೋ ಅಂಥ ಕಂಟ್ರಾಕ್ಟರಿಗೆ ಕೆಲಸ ಕೊಡುತ್ತೇವೆ. ಪಬ್ಲಿಕ್ ವರ್ಕ್ಸ್ ಇಲಾಖೆಯ ಮುಖಾಂತರ ನಡೆಸಿದರೆ ಪ್ರತಿಯೊಂದು ಜಿಲ್ಲೆಗೂ ಪ್ರತಿವರ್ಷವೂ ಗೊತ್ತುಮಾಡಿರುವ ಷೆಡ್ಯೂಲ್ ರೇಟಿಗೆ ಮೀರದಹಾಗೆ ನೋಡಬೇಕು, ಶೇಕಡ ಸ್ವಲ್ಪ ಭಾಗಕ್ಕಿಂತ ಹೆಚ್ಚು ಭಾಗ ಕೊಡದು. ಅದರ ಮೇಲೆ ಆಡಿಟ್ ಬೇರೆ ಮಾಡುತ್ತಾರೆ. ಖರ್ಚು ಅನಾವಶ್ಯಕವಾಗಿ ಆಗದೆ ಇರುವುದಕ್ಕೆ ಎಷ್ಟು ಬೇಕೋ ಅಷ್ಟು ಕಾನೂನಿನಲ್ಲಿ ಇರುವುದರಿಂದ ಸಾಮಾನ್ಯವಾಗಿ ಶೇಕಡ 40 ರಷ್ಟು ವೃಥಾ ಖರ್ಚಾಗುತ್ತದೆ ಎಂದು ಹೇಳಿದರೆ, ಈ ಇಲಾಖೆಯಲ್ಲಿ ಹೇಳುವವರು ಕೇಳುವವರು ಯಾರೂ ಇಲ್ಲವೋ ಎಂಬ ತಪ್ಪು ಭಾವನೆ ಬರುವುದಕ್ಕೆ ಅವಕಾಶವಾಗುತ್ತದೆ. ಸರ್ಕಾರದ ಹಣ ಇಷ್ಟೇ ಖರ್ಚಾಗಬೇಕು ಎನ್ನುವುದನ್ನು ಗೊತ್ತುಮಾಡಿರುವುದರಿಂದ ಈ ಇಲಾಖೆಯ ಆಡಳಿತವನ್ನು ನಿರ್ವಹಿಸುವುದರಲ್ಲಿ ಏನೂ ತೊಂದರೆಯಾಗಲಾರದು ಎಂದು ಶ್ರೀ ನರಸಿಂಹರೆಡ್ಡಿಯವರಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ಶ್ರೀ ನರಸಿಂಹಯ್ಯನವರು ಚಿಕ್ಕಬಳ್ಳಾಪುರದಲ್ಲಿರುವ ಎಲೆಕ್ಟ್ರಿಕ್ ಆಫೀಸನ್ನು ತುಮಕೂರಿಗೆ ವರ್ಗ ಮಾಡಬೇಕೆನ್ನುವ ವಿಚಾರ ಹೇಳಿದರು. ಈ ಅಂಶ ಸರ್ಕಾರದ ಗಮನದಲ್ಲಿದೆ. ಕೂಡಲೇ ಸಂಬಂಧಪಟ್ಟ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳುತ್ತೇನೆ. ಸರ್ಕಾರಕ್ಕೆ ಅನೇಕ ಎಸ್ಟಿಮೇಟುಗಳು ಅಂದಾಜುಗಳು ಬರುತ್ತಿವೆ, ಆದರೆ ಸರ್ಕಾರದ ಮಂಜೂರಾತಿಯನ್ನು ಕೊಡುವುದರಲ್ಲಿ ನಿಧಾನವಾಗುತ್ತಿರುವುದರಿಂದ ವರ್ಷೇ ವರ್ಷೇ ಅಂದಾಜನ್ನೂ ಹೆಚ್ಚಿಸಿಕೊಂಡುಹೋಗಿ ನಾಲ್ಕಾರು ಸಾವಿರ ಹೆಚ್ಚಿಗೆ ಖರ್ಚಾಗುತ್ತದೆ ಎಂದು ಮಾನ್ಯ ಸದಸ್ಯರು ಕೆಲವರು ಹೇಳಿದರು. ಕೆಲವು ಸಂದರ್ಭದಲ್ಲಿ ಹೀಗೆ ಆಗಿರುವುದು ನಿಜ. ಇದಕ್ಕೆ ಕಾರಣವಿದೆ. ಎಸ್ಟಿಮೇಟ್ ಸ್ಯಾಂಕ್ಷನ್ ಆಗಿ ಹತ್ತಾರುವರ್ಷಗಳಾಗಿದ್ದರೂ ಇವೊತ್ತೂ ನಾವು ಜಾರಿಗೆ ತೆಗೆದುಕೊಳ್ಳುವುದಕ್ಕೆ ಆಗಿಲ್ಲ. ಆಗಿನ ಕಾಲದಲ್ಲಿ ಹಣದ ಮುಗ್ಗಟ್ಟು ತೋರಿಬಂದಿದೆ. ಎಲ್ಲಾ ಯೋಜನೆಗಳನ್ನೂ, ಹಣ ಸಾಲದ ದೆಸೆಯಿಂದ ಇಂಡಿಯಾ ಸರ್ಕಾರದಿಂದ ಸಾಲ ತೆಗೆದುಕೊಂಡು ರೀ-ಎಸ್ಟಿಮೇಟ್ ಮಾಡಿ ಕೆಲಸ ಮಾಡಬೇಕಾಗಿದೆ. ಈ ರೀತಿ ಮಾಡುವುದರಿಂದ ಖರ್ಚು ಜಾಸ್ತಿ ಆಗುತ್ತದೆ. ಸ್ಥಳೀಯ ಅಧಿಕಾರಿಗಳು ಅಂದಾಜು ಮಾಡಿ ಮೇಲಕ್ಕೆ ಕಳುಹಿಸಿದಾಗ ಎಗ್ಸಿಕ್ಯೂಟಿವ್ ಇಂಜಿನಿಯರ್, ಚೀಫ್ ಇಂಜಿನಿಯರ್ ವಿಮರ್ಶೆಮಾಡಿ ಅದನ್ನು ಯಾತಕ್ಕೆ ಸೇರಿಸಲಿಲ್ಲ, ಇದನ್ನು ಯಾತಕ್ಕೆ

ಸೇರಿಸಲಿಲ್ಲ ಎಂದು ಹಿಂದಕ್ಕೆ ಕಳುಹಿಸಿರುವುದು ಉಂಟು. ಹೀಗೆ ನಾಲ್ಕಾರು ದಿವಸ ತಡವಾಗಿ ಹಣದ ಅಭಾವದಿಂದ ಹಿಂದಿನ ಸರ್ಕಾರದಲ್ಲಿ ಮಂಜೂರು ಆಗದೆ ಇರುವುದು ಪುನಃ ಅಂದಾಜು ಆಗಿ ಕೆಲವುಗಳ ಎಸ್ಟಿಮೇಟ್ ಹೆಚ್ಚಾಗಿರುತ್ತದೆ. ಸಾಮಾನ್ಯವಾಗಿ ಹೀಗೆ ಆಗುವುದಿಲ್ಲ. ಈಚೆಗೆ ಎಸ್ಟಿಮೇಟ್ ಕೆಲಸವನ್ನು ಆಮೂಲಾಗ್ರವಾಗಿ ಪರಿಶೀಲಿಸಿ ಕಳುಹಿಸಬೇಕೆಂದು ಸರ್ಕಾರದವರು ಕಡ್ಡಾಯವಾಗಿ ಅಧಿಕಾರಿಗಳಿಗೆ ತಿಳಿಸಿದ್ದಾರೆ. ಉದಾಹರಣೆಗೆ ಹೇಳುವುದಾದರೆ ಒಂದು ಸೇತುವೆ ಕಟ್ಟಬೇಕಾದರೆ ನಾಲ್ಕು ಆರು ಅಡಿ ತಳಹದಿ ಸಾಕು. ಅಲ್ಲಿ ಮರಳು ಸಿಕ್ಕಿದರೆ 10–15 ಅಡಿ ತೋಡಿದರೂ ನೆಲವೇ ಸಿಕ್ಕುವುದಿಲ್ಲ. ಹೀಗಾಗಿ ಅಂದಾಜು ಜಾಸ್ತಿಯಾಗುತ್ತದೆ. ಯಾರಾದರೂ ಅಂದಾಜು ಕಳುಹಿಸಿದರೆ ಮುಂಚೆ ಎಲ್ಲಾ ಅಂಶಗಳನ್ನೂ ಪರೀಕ್ಷೆಮಾಡಿ ಬೋರ್ ಹಾಕಿ ವಿಮರ್ಶೆಮಾಡಿದನಂತರ ಎಸ್ಟಿಮೇಟ್ ಮಾಡಬೇಕು ಎಂದು ಸರ್ಕಾರದವರು ಕಡ್ಡಾಯವಾಗಿ ಹೇಳಿದ್ದಾರೆ. ಈಚೆಗೆ ಎಸ್ಟಿಮೇಟ್‌ಗಳಲ್ಲಿ ಆರೀತಿ ವ್ಯತ್ಯಾಸವಾಗುವುದಿಲ್ಲ, ಮತ್ತು ನಿಧಾನವೂ ಆಗುವುದಿಲ್ಲ ಎಂದು ಭರವಸೆಯನ್ನು ನಾನು ಸದಸ್ಯರಿಗೆ ಕೊಡುತ್ತೇನೆ.

ಇನ್ನು ಅನೇಕ ದೊಡ್ಡ ಪ್ರಾಜೆಕ್ಟುಗಳಲ್ಲಿ ಹಣ ದುರ್ವ್ಯಯವಾಗುತ್ತಿದೆ ಎಂದು ಸದಸ್ಯರು ಆರೋಪಣೆ ಮಾಡಿದ್ದಾರೆ. ಅದು ಸಹ ದುರ್ವ್ಯಯ ಆಗುವುದಕ್ಕೆ ಅವಕಾಶವಿಲ್ಲ. ಅದಕ್ಕೆ ತಕ್ಕ ಕಾನೂನು ಇದೆ. ವ್ಯವಸ್ಥೆ ಇದೆ. ಆ ಪ್ರಕಾರ ಕೆಲಸವಾಗುತ್ತದೆ. ಹೀಗೆ ಸಾಮಾನ್ಯವಾಗಿ ಹೇಳಿ ಜನಗಳನ್ನು ಗಾಬರಿಪಡಿಸುವುದಕ್ಕೆ ಅವಕಾಶವಾಗುತ್ತದೆಯೇ ಹೊರತು ಅದು ಸತ್ಯಾಂಶಗಳಿಗೆ ದೂರವಾಗಿದೆ. ಒಂದುವೇಳೆ ಏನಾದರೂ ಇದ್ದರೆ ಮಾನ್ಯ ಸದಸ್ಯರು ಅಂಕಿ ಅಂಶಗಳ ಸಮೇತ ಸರ್ಕಾರಕ್ಕೆ ತಿಳಿಸಿದರೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರದವರು ಹಿಂದೆ ಬೀಳುವುದಿಲ್ಲ ಎಂದು ನಾನು ಭರವಸೆಕೊಡುತ್ತೇನೆ.

ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಲಂಚದ ಹಾವಳಿ ಹೆಚ್ಚಾಗಿದೆಯೆಂದು ಶ್ರೀ ನರಸಿಂಹಯ್ಯನವರು ಹೇಳಿದರು. ಅದು ಇಲ್ಲ ಎಂದು ಹೇಳುವುದಕ್ಕೆ ಧೈರ್ಯವಿಲ್ಲ.

ಶ್ರೀ ಕೆ. ಎಲ್. ನರಸಿಂಹಯ್ಯ (ಹೆಬ್ಬೂರು).—ನಾನು ಹೇಳಲಿಲ್ಲ.

ಶ್ರೀ ಎಚ್. ಕೆ. ವೀರಣ್ಣಗೌಡ.—ಕರಪ್ಷನ್ ಈ ಇಲಾಖೆಯಲ್ಲಿ ಇದೆಯೆಂದು ಅನೇಕ ಜನ ಹೇಳಿದ್ದಾರೆ. ಕರಪ್ಷನ್ ಇಲ್ಲ ಎಂದು ನಾನು ಹೇಳುವುದಿಲ್ಲ. ಯಾವುದಾದರೂ ವಿಚಾರ ನಮ್ಮ ಗಮನಕ್ಕೆ ಬಂದಾಗಲೆಲ್ಲಾ ತನಿಖೆ ಕಾರ್ಯಕ್ರಮ ಕೈಗೊಂಡಿದ್ದೇವೆ. ಮಹಾಜನರು ಈ ವಿಚಾರದಲ್ಲಿ ನಮ್ಮೊಡನೆ ಸಹಕರಿಸಬೇಕು. ಅನೇಕ ಸಂದರ್ಭದಲ್ಲಿ ನಮಗೆ ಮೂಗರ್ಜಿಗಳು ಬರುತ್ತವೆ. ವಿಚಾರಣೆ ಮಾಡುವಾಗ ನಮಗೆ ಗೊತ್ತಿಲ್ಲ, ನಮ್ಮ ಊರಿಗೆ ದೀಪ ಕೊಡಬೇಕೆಂದು ಹೇಳಿ ರುಜು ಹಾಕಿಸಿಕೊಂಡರು, ಈ ಊರಿನ ವಿಷಯವೇನೂ ನಮಗೆ ಗೊತ್ತಿಲ್ಲ ಎಂದು ಹೇಳುತ್ತಾರೆ ಹಾಗೆ ಕೆಲವುಸಲ ಅಧಿಕಾರಿಗಳಮೇಲೆ ಯಾವುದಾದರೂ ಕಾರಣದಿಂದ ಹೊಟ್ಟೆಕಿಚ್ಚಿಗೆ ಇಲ್ಲದ ಸಲ್ಲದ ಅರ್ಜಿಗಳು ಬರುತ್ತವೆ. ಮೂಗರ್ಜಿ ಅಥವಾ ಇನ್ನು ಯಾವುದೇ ಅರ್ಜಿ ಬರಲಿ ಅದನ್ನು ತನಿಖೆ ಮಾಡಿ ಅನುಮಾನ ಬಂದರೆ ಆಂಟಿ ಕರಪ್ಷನ್ ಡಿಪಾರ್ಟಮೆಂಟಿನವರಿಗೆ ಕಳುಹಿಸಿ ಆಮೂಲಾಗ್ರವಾಗಿ ತನಿಖೆ ಮಾಡುವುದಕ್ಕೆ ಸರ್ಕಾರ ಎಂದೆಂದಿಗೂ ಹಿಂದೆ ಬೀಳುವುದಿಲ್ಲವೆಂದು ಮಾತ್ರ ನಾನು ಈ ಸಭೆಯಲ್ಲಿ ಅರಿಕೆಮಾಡಿಕೊಳ್ಳುತ್ತೇನೆ.

ಮಲೆನಾಡಿಗೆ ಹೆಚ್ಚಿಗೆ ಸಂಚಾರ ಸೌಕರ್ಯಗಳನ್ನು ಒದಗಿಸಬೇಕೆಂದು ಶ್ರೀಮತಿ ರತ್ನಮ್ಮನವರು ಒತ್ತಿ ಒತ್ತಿ ಹೇಳಿದ್ದಾರೆ. ಏನೇನು ಸಂಚಾರ ಸೌಕರ್ಯಗಳು ಬೇಕು ಎಂಬುದನ್ನು ಸದಸ್ಯರು ಸಲಹೆಮಾಡಿದ್ದಾರೆ. ಅವೆಲ್ಲವನ್ನೂ ಮಾಡುವುದಕ್ಕೆ ಹಣದ ಆವಶ್ಯಕತೆ ಇದೆ. ಮೊದಲನೆಯ ಮತ್ತು ಎರಡನೆಯ ಪಂಚವಾರ್ಷಿಕಯೋಜನೆಯಲ್ಲಿ ಸೇರದೆ ಇದ್ದುದನ್ನು ಮೂರನೆಯ ಪಂಚವಾರ್ಷಿಕಯೋಜನೆಯಲ್ಲಿ ಪುನಃ ಸೇರಿಸಬೇಕೆಂದು ಕೇಂದ್ರ ಸರ್ಕಾರಕ್ಕೆ ಬರೆದಿದ್ದೇವೆ. ಅಲ್ಲದೆ, ಸಂಸ್ಥಾನದ ಸರ್ಕಾರದವರು ಕೈಗೊಳ್ಳಬೇಕಾದ ಕಾರ್ಯಕ್ರಮವನ್ನೂ ಹಣಕಾಸಿನ ಪರಿಸ್ಥಿತಿಗನುಗುಣವಾಗಿ ತೆಗೆದುಕೊಳ್ಳಲು ಏರ್ಪಾಡು ಮಾಡಿದ್ದಾರೆ. ಇನ್ನು ಮೈನರ್ ಕೆರೆಗಳ ದುರಸ್ತಿ ವಿಚಾರದಲ್ಲಿ ಸರ್ಕಾರದವರು ಹೆಚ್ಚು ಗಮನ ಕೊಡಬೇಕು, ಈಗ ಅದಕ್ಕೆ ಹೆಚ್ಚು ಗಮನ ಕೊಡುತ್ತಿಲ್ಲ ಎಂದು ಶ್ರೀ ಲಿಂಗೇಗೌಡರು ಕೆರೆಗಳ ವಿಚಾರದಲ್ಲಿ ನಾನು ಸಭೆಯಮುಂದೆ ಅರಿಕೆ ಮಾಡಿಕೊಳ್ಳುವುದೇನೆಂದರೆ, ಅನೇಕ ಕೆರೆಗಳು ರೆವಿನ್ಯೂ ಇಲಾಖೆಯ ಆಡಳಿತಕ್ಕೆ ಒಳಪಟ್ಟಿವೆ. ಈ ರಿಪೇರಿ ಕಾರ್ಯ ಪ್ರತಿವರ್ಷವೂ ಅಚ್ಚುಕಟ್ಟುದಾರರೇ ಮಾಡಬೇಕು ಎಂದು ಕಾನೂನು ಇದೆ. ಹಾಗೆ ಅವರು ಮಾಡದಿದ್ದರೆ ಅದಕ್ಕೆ ಬೇಕಾದ ಮೊಬಲಗನ್ನು ಒದಗಿಸಿಕೊಟ್ಟರೆ ಆಗ ಮಾತ್ರ ಸರ್ಕಾರದವರು ಮಾಡುತ್ತಾರೆ. 500 ಎಕರೆಗೆ ಹೆಚ್ಚಾಗಿ ಅಚ್ಚುಕಟ್ಟು ಇರತಕ್ಕ ಕೆರೆಗಳನ್ನು ಸರ್ಕಾರದ ಆಡಳಿತಕ್ಕೆ ತೆಗೆದುಕೊಂಡು ರಿಪೇರಿ ಮಾಡಬೇಕೆಂಬ ಅಂಶ ಸರ್ಕಾರದ ಗಮನದಲ್ಲಿದೆ. ಅದಕ್ಕೆ ಬೇಕಾದ ಅಂಕಿಗಳ ವರದಿಯನ್ನು ಕಳುಹಿಸಬೇಕೆಂದು ಚೀಫ್ ಇಂಜಿನಿಯರಿಗೆ ಹೇಳಿದ್ದೇವೆ. ಅದಕ್ಕಿಂತಲೂ ಸಣ್ಣವಾಗಿರುವ ಕೆರೆಗಳ ವಿಚಾರವನ್ನು ರೆವಿನ್ಯೂ ಡಿಪಾರ್ಟ್‌ಮೆಂಟಿನವರು ನೋಡಿಕೊಳ್ಳುತ್ತಾರೆ. ಅದರ ರಿಪೇರಿ ಖರ್ಚು ಅಚ್ಚುಕಟ್ಟುದಾರರ ಮೇಲೆ ಬೀಳುತ್ತದೆ. ಒಂದು ಎಕರೆಗೆ ಒಂದೆರಡು ರೂಪಾಯಿಗಳ ಕಂಟ್ರಿಬ್ಯೂಷನ್ ಕೊಟ್ಟು ರೆವಿನ್ಯೂ ಇಲಾಖೆಗೆ ವಹಿಸಿದರೆ ಅಂಥ ಕೆರೆಗಳ ಕಾಮಗಾರಿ ತೆಗೆದುಕೊಳ್ಳುವುದರಲ್ಲಿ ಏನೇನು ಸಂದೇಹವಿಲ್ಲ.

5-30 P.M.

ಇನ್ನು ಡಾ॥ ನಾಗೂರ್‌ರವರು ಮಾತನಾಡಿದರು. ಅವರು ಕೆಲವು ವಿಷಯಗಳನ್ನು ಹೇಳಿದಾಗ ಏಕೆ ಹಾಗೆ ಹೇಳುತ್ತಾರೆ ಅನ್ನಿಸಿತು, ಕಾರಣ ಅರ್ಧಂಬರ್ಧ ತಿಳಿದುಕೊಂಡು ಅನಾವಶ್ಯಕವಾದ ಮಾತುಗಳನ್ನಾಡಿದರು. ಅವರು ಬಿಜಾಪುರದ ಕೇವಲ ಕ್ಷಾಮ ಪ್ರಾಂತದಿಂದ ಬಂದಿದ್ದಾರೆಂದು ಕಾಣುತ್ತದೆ. ಸರ್ಕಾರದ ಆದಾಯ ವೆಚ್ಚ ನೋಡಿದರೆ ಒಂಬತ್ತು ಕೋಟಿ ಚಿಲ್ಲರೆ ಖೋತ ಇದೆ, ಅದರಲ್ಲಿ ನಾಲ್ಕು ಕೋಟಿ ರೂಪಾಯಿಗಳು ಹಳೆಯ ಮೈಸೂರಿಗೆ ಸೇರಿದ್ದು, ಐದು ಕೋಟಿ ರೂಪಾಯಿಗಳು ಹೊಸ ಮೈಸೂರ ಪ್ರದೇಶಕ್ಕೆ ಸೇರಿದ್ದು. ಹಳೆಯ ಮೈಸೂರು ಮತ್ತು ಹೊಸ ಮೈಸೂರು ಈ ಪ್ರದೇಶಗಳ ಆಯವ್ಯಯ ನೋಡಿದರೆ, ಕೊಡಗಿನಲ್ಲಿ ಖರ್ಚು ಕಡಮೆ, ಆದಾಯ ಹೆಚ್ಚು, ಹೀಗಿರುವಾಗ ಹೊಸದಾಗಿ ಬಂದವರು ಹಳೆಯ ಮೈಸೂರಿನ ನಷ್ಟವನ್ನೇಕೆ ಹೊತ್ತುಕೊಳ್ಳಬೇಕೆಂದು ಕೇಳುತ್ತಾರೆ. ಸರಿಯಾಗಿ ವಿಚಾರ ತಿಳಿಯದೆ ಟೀಕೆಮಾಡಿದರೆಂದು ಕಾಣುತ್ತದೆ. ಕೃಷ್ಣರಾಜಸಾಗರ, ವಾಣಿವಿಲಾಸ ಸಾಗರ ಎಂದು ಎರಡು ಹೆಸರು ಹೇಳಿದರು. ಬಡ್ಜೆಟ್ ಹೆಡ್ಡಿನಲ್ಲಿ ಕೃಷ್ಣರಾಜಸಾಗರದ ಖರ್ಚು, ಉತ್ಪತ್ತಿ, ಬಣ್ಣ ಬಣ್ಣದ ದೀಪ ಹಾಕುವುದಕ್ಕಾಗಿರುವ

(ಶ್ರೀ ಎಚ್. ಕೆ. ವೀರಣ್ಣಗೌಡ.)

ಖರ್ಚು, ಅದರಿಂದ ಉತ್ಪತ್ತಿ ಇವೆಲ್ಲಕ್ಕೂ ಲೆಕ್ಕವಿದೆ. ಒಬ್ಬ ಮನುಷ್ಯ ಕೃಷ್ಣರಾಜಸಾಗರ ಕೆರೆಯ ಏರಿಯ ಮೇಲೆ ಹೋಗಬೇಕಾದರೆ ಮೂರಾಣೆ ಕೊಡಬೇಕು, ಹಾಗೆ ಕೊಟ್ಟು ಅಲ್ಲಿನ ಸೌಂದರ್ಯವನ್ನು ನೋಡಬೇಕು, ಕಾರಿನಲ್ಲಿ ಹೋದರೆ ಒಂದೂವರೆ ರೂಪಾಯಿ ಕೊಡಬೇಕು, ಹೆಜ್ಜೆಯಿಟ್ಟರೆ ಅಲ್ಲಿ ಸುಂಕವಿದೆ. ಅಲ್ಲಿನ ಸೌಂದರ್ಯವನ್ನು ಸವಿಯಬೇಕಾದರೆ, ನೋಡಿ ಆನಂದ ಪಡಬೇಕಾದರೆ ಹಣ ಕೊಡಬೇಕು. ಹೀಗೆ ಅಲ್ಲಿ ಬರುವ ಉತ್ಪತ್ತಿಯಿಂದ, ಚಂದಾಯ ಮತ್ತು ಕಾಂಟ್ರಿಬ್ಯೂಷನ್ನಿಂದ, ಅಲ್ಲಿ ಬೇಕಾದ ಸೌಕರ್ಯ, ಅಲಂಕಾರ ಏರ್ಪಡಿಸಲಾಗಿದೆ. ಆದ್ದರಿಂದ ಅದರಿಂದ ನಷ್ಟವಾಗಿದೆ, ಅದನ್ನು ಹೊಸದಾಗಿ ನಮ್ಮ ದೇಶಕ್ಕೆ ಬಂದಿರುವ ಉತ್ತರ ಕರ್ಣಾಟಕದವರು ಅಥವಾ ಬಿಜಾಪುರದವರು ತುಂಬಬೇಕೆಂದು ಹೇಳುವುದು ಸಾಧುವಲ್ಲ, ಅದು ಸತ್ಯಕ್ಕೆ ದೂರವಾದ ಮಾತು. ಬಡ್ಜೆಟ್ಟಿನಲ್ಲಿ ಎಷ್ಟೋ ಪ್ರಾಜೆಕ್ಟುಗಳು ಸೇರಿವೆ, ತುಂಗಭದ್ರ ಪ್ರಾಜೆಕ್ಟ್ ಸೇರಿದೆ, ಕೋಟ್ಯಾಂತರ ರೂಪಾಯಿ ಕೆಲಸ ನಡೆದಿದೆ, ಅದರ ಮೇಂಟನೆನ್ಸ್‌ಗೇ ಎಂಟು ಲಕ್ಷ ಚಿಲ್ಲರೆ ರೂಪಾಯಿಗಳಾಗುತ್ತವೆ, ಅದರ ಉತ್ಪತ್ತಿ ತಿಳಿಯದು, ಉತ್ಪತ್ತಿ ಬರುವುದು, ಬಾರದಿರುವುದು ಎಲ್ಲಾ ಸೇರಿಸಿ ಅಂಕಿಅಂಶವಿದೆ. ಅದನ್ನು ವಿಂಗಡಿಸುವುದಕ್ಕೆ ಅವರಿಗೆ ತಿಳಿಯದೆ ಅಥವಾ ಇಷ್ಟವಿಲ್ಲದೆ ಟೀಕೆಮಾಡಿದ್ದಾರೆಂದು ಭಾವಿಸುತ್ತೇನೆ. ಐವತ್ತಮೂರು ಲಕ್ಷ ಮೂವತ್ತಐದು ಸಾವಿರ ಆದಾಯ, 56 ಲಕ್ಷ 76 ಸಾವಿರ ಖರ್ಚು ಇದೆ, ಸ್ವಲ್ಪ ಹೆಚ್ಚುಕಡಮೆ ಮೂರುವರೆ ಲಕ್ಷ ರೂಪಾಯಿಗಳ ನಷ್ಟವಿದೆ. ಇಷ್ಟೇಕಿದೆ ಎಂದು ಕೇಳಬಹುದು. ಹಳೆಯ ಮೈಸೂರು ಕಾರ್ಯಗಳಿಗೆ ಹಳೆಯ ಮೈಸೂರಿನ ಆದಾಯದಿಂದ ಹಣ ಖರ್ಚಾಗಿದೆ. ಖೋತಾ ಆಗಿರುವುದರಲ್ಲಿ ಐದು ಕೋಟಿ ರೂಪಾಯಿ ಮೈಸೂರಿಗೆ ಬಂದಿರುವ ಬೇರೆ ಭಾಗಗಳಿಗೆ ಸೇರಿವೆ, ನಾಲ್ಕು ಕೋಟಿ ರೂಪಾಯಿ ಹಳೆಯ ಮೈಸೂರಿಗೆ ಸೇರಿದೆ. ಹಾಗಿರುವಾಗ ಒಂದು ಭಾಗದ ಜನರೇ ಇನ್ನೊಂದು ಭಾಗದ ಜನರಮೇಲೆ ನಷ್ಟವನ್ನು ಬೇಕೆಂದು ಹೇರುವ ಪ್ರಸಂಗವಿಲ್ಲ. ಈಗ ನಾವೇಕೆ ಕೊಡಬೇಕೆಂದು ಪ್ರಶ್ನೆ ಮಾಡುವುದು ಅನುಚಿತ. ಮೈಸೂರು ಹೀಗೆ ದೊಡ್ಡದಾಗಬಾರದು ಇರುವಹಾಗೆಯೇ ಉಳಿಯಬೇಕು, ಹೊಸಪ್ರಾಂತ ಅದಕ್ಕೆ ಸೇರಿಸಬಾರದು ಎಂದು ಹಿಂದೆ ಹೋರಾಟ ಮಾಡಿದವರಲ್ಲಿ ನಾನೂ ಒಬ್ಬ. ಆದರೆ ನಮಗಿಂತ ಹೆಚ್ಚು ತಿಳಿದವರು ಹೆಚ್ಚಿನ ಅಧಿಕಾರವುಳ್ಳವರು ಮತ್ತು ನಾಯಕರು ಒಂದು ತೀರ್ಮಾನಮಾಡಿದಾಗ ಅದಕ್ಕೆ ತಲೆಬಾಗಿ ನಡೆಯಬೇಕೇ ವಿನಾ, ನಾವೇಕೆ ಕೊಡಬೇಕು, ದುಂದು ಮಾಡಿರುವುದನ್ನು ನಾವೇಕೆ ಹೊರಬೇಕು ಎಂದು ಭೇದಭಾವನೆಯನ್ನುಂಟುಮಾಡುವ ಮಾತುಗಳನ್ನಾಡುವುದು ಸಮಂಜಸವಲ್ಲ, ಏಕೀಭವಿಸಿ ಕೆಲಸಮಾಡಬೇಕು. ಆ ರೀತಿ ಮಾತನಾಡಬಾರದು ಎಂಬುದು ನನ್ನ ಅಭಿಪ್ರಾಯವೆಂದು ಅರಿಕೆಮಾಡಿಕೊಳ್ಳುತ್ತೇನೆ.

ಇನ್ನು ವಿದ್ಯುಚ್ಛಕ್ತಿ ಬಳಕೆಯ ದರದಲ್ಲೇಕೆ ವ್ಯತ್ಯಾಸ ಮಾಡಿ ನಾಲ್ಕಾಣೆ ಒಂದುಕಡೆ ಎಂಟಾಣೆ ಒಂದುಕಡೆ ಹಾಕಬೇಕು ಎಂದು ಪ್ರಶ್ನೆ ಮಾಡಿದರು. ಆದರೆ ವಿಚಾರ ಸರಿಯಾಗಿ ತಿಳಿದುಕೊಂಡು ಮಾತನಾಡಬೇಕು, ದಬಾವಣೆಯಿಂದ ಮಾತನಾಡಿದರೆ ಸರಿಹೋಗುವುದಿಲ್ಲ ಎಂದು ಸೂಚಿಸಬೇಕಾಗಿದೆ. ಸಂಸ್ಥಾನದಲ್ಲಿ ಹಿಂದೆ 1902 ನೆಯ ಇಸವಿಯಲ್ಲಿ ವಿದ್ಯುಚ್ಛಕ್ತಿ ಸರಬರಾಯನ್ನು ಇಲಾಖೆಯವರು ಏರ್ಪಾಡುಮಾಡಿದರು, ಅದಾದುದು 55 ವರ್ಷಗಳ ಕೆಳಗೆ. ಒಂದೂವರೆ ಆಣೆ ದರದಂತೆ ಸಣ್ಣ ಕೈಗಾರಿಕೆಗಳಿಗೆ, ವ್ಯವಸಾಯಗಾರರಿಗೆ ಮತ್ತು ಅಡಿಗೆ ಕೆಲಸಗಳಿಗೆ ಒದಗಿಸಿದರು, ಕೆಲವು ಉಪಯೋಗಗಳಿಗೆ ಒಂಬತ್ತು ಕಾಸು, ಒಂದಾಣೆ, ಒಂದೂವರೆ ಆಣೆ ಪ್ರಕಾರ ಒದಗಿಸಿದರು. ಬೀದಿ ದೀಪ ಮತ್ತು ಮನೆ ದೀಪಗಳಿಗೆ ನಾಲ್ಕಾಣೆ ದರವಿದೆ. ಬೇರೆ ಪ್ರಾಂತಗಳವರು, ಮದ್ರಾಸು, ಬೊಂಬಾಯಿ, ಹೈದರಾಬಾದು ಪ್ರಾಂತಗಳವರು ವಿದ್ಯುಚ್ಛಕ್ತಿ ಉತ್ಪತ್ತಿ ಮಾಡಿ ಮೈಸೂರಿಗೆ ಒದಗಿಸಿರುವುದಿಲ್ಲ. ಅಲ್ಲಿ ಯಾವುದೋ ಕಂಪನಿಯವರು ಬಂದು ಕೆಲಸಮಾಡಿ ಒದಗಿಸಿರುವರು. ಯಾವಾಗಲೂ ಕಂಪನಿಯವರು ಲಾಭ ಸಂಪಾದನೆಯ ದೃಷ್ಟಿಯಿಂದ ಕೆಲಸ ಮಾಡತಕ್ಕವರು. ಅದರ ಪ್ರಕಾರ ಅವರು ಕೆಲಸಮಾಡಿದ್ದಾರೆ. ಈಗ ಯಾವುದೋ ಒಂದು ದರವಿದೆ. ಈ ಐದಾರು ತಿಂಗಳಿಂದೇಕೆ ಸರಿಪಡಿಸಲಿಲ್ಲವೆಂದು ಕೇಳಬಹುದು. ಹಿಂದೆ ರಾಜ್ಯಪಾಲರ ಭಾಷಣದಮೇಲೆ ಚರ್ಚೆಯಾದಾಗಲೇ ಅದಕ್ಕೆ ಉತ್ತರ ಹೇಳಿದ್ದೇನೆ. ದರದಲ್ಲಿ ವ್ಯತ್ಯಾಸವಿದೆ. ಅದನ್ನು ಸರಿಪಡಿಸಬೇಕೆಂಬ ಉದ್ದೇಶ ಸರ್ಕಾರಕ್ಕಿದೆ. ಆದರೆ ಸರಿಪಡಿಸುವುದಕ್ಕೆ ಒಂದು ಅಡ್ಡಿಯಿದೆ. ಇಂಡಿಯಾ ಸರ್ಕಾರದ ಅಜ್ಞೆಯಂತೆ ವಿದ್ಯುಚ್ಛಕ್ತಿಗೆ ಸಂಬಂಧಪಟ್ಟ ವಿಷಯಗಳೆಲ್ಲವನ್ನೂ ವಿದ್ಯುಚ್ಛಕ್ತಿಗೆ ಸಂಬಂಧಪಟ್ಟ ಬೋರ್ಡಿಗೆ ವಹಿಸಬೇಕು. ಆ ಬೋರ್ಡು ಈ ತಿಂಗಳ ಮೊದಲನೆಯ ತಾರೀಖಿನಿಂದ ನೇಮಕವಾಗಬೇಕಾಗಿತ್ತು. ಅದನ್ನು ಸರ್ಕಾರದವರು ಸ್ಥಾಪನೆಮಾಡಬೇಕೆಂದು ತೀರ್ಮಾನಮಾಡಿದ್ದಾರೆ. ಏಕೆ ನಿಧಾನವಾಗಿದೆಯೆಂದರೆ ಈ ದಿವಸ ಸಂಸ್ಥಾನದಲ್ಲಿರುವ ಎಲ್ಲ ನೌಕರರ ಸ್ಥಾನಮಾನ, ಪೆನ್ಷನ್ ಮುಂತಾದ ಕೆಲವು ವಿಚಾರಗಳನ್ನು ಇಂಡಿಯಾ ಸರ್ಕಾರದವರು ತೀರ್ಮಾನಮಾಡಬೇಕಾಗಿತ್ತು. ಅದಕ್ಕಾಗಿ ಎರಡು ತಿಂಗಳ ನಿಧಾನವಾಗಿ ಅಕ್ಟೋಬರ್ ಒಂದನೆಯ ತಾರೀಖಿನಿಂದ ಬೋರ್ಡು ಜಾರಿಗೆ ಬರುವುದೆಂದು ಹೇಳಿದ್ದಾರೆ. ಈ ಎಲೆಕ್ಟ್ರಿಸಿಟಿ ಬೋರ್ಡು ಒಂದು ಲಿಮಿಟೆಡ್ ಕನ್ಸರ್ನ್ ಇದ್ದಹಾಗೆ; ಆ ಬೋರ್ಡಿನವರು ಸ್ವತಂತ್ರರು. ಆದರೆ ಆ ಬೋರ್ಡಿಗೆ ದರ ಇಳಿಸುವ ವಿಚಾರವನ್ನು ವಹಿಸುವುದು ಸರಿಯಾಗಿ ತೋರುವುದಿಲ್ಲ. ಈ ದಿವಸ ಎಂಟಾಣೆಯಿರುವ ದರವನ್ನು ನಾಲ್ಕಾಣೆಗೆ ಇಳಿಸುವ ಕೆಲಸವನ್ನು ಆ ಬೋರ್ಡಿಗೆ ವಹಿಸಿದರೆ ಅದಕ್ಕೆ ತೊಂದರೆಯಾಗುತ್ತದೆ. ಆದ್ದರಿಂದ ಈ ಅಂಶವನ್ನು ಹೊಸದಾಗಿ ಆಡಳಿತ ವಹಿಸುವವರು ಯೋಚನೆಮಾಡಿ ಎಲ್ಲಿ ದರ ಇಳಿಸಬೇಕು, ಎಲ್ಲಿ ಹೆಚ್ಚಿಸಬೇಕು ಎಂಬುದನ್ನು ವಿಮರ್ಶೆಮಾಡುತ್ತಾರೆ. ಇನ್ನೊಂದು ವಿಷಯ ಅರಿಕೆ ಮಾಡಬೇಕಾಗಿದೆ. ಬೋರ್ಡಿನವರಿಗೆ ನಷ್ಟವನ್ನುಂಟುಮಾಡಕೂಡದು. ಎಲೆಕ್ಟ್ರಿಸಿಟಿ ಬೋರ್ಡು ಮೈಸೂರು ಸರ್ಕಾರದ ಕಾನೂನುಪ್ರಕಾರ ಆಗುವುದಿಲ್ಲ, ಅದು ಕೇಂದ್ರದ ಕಾನೂನುಪ್ರಕಾರ ಆಗುವುದು. ಆ ಕಾನೂನಿನ ಷರತ್ತಿನ ಪ್ರಕಾರ, no loss basis ಮೇಲೆ ಅದಾಗಬೇಕು ಎಂದಿದೆ. ಆದ್ದರಿಂದ ಆ ಬೋರ್ಡಿನವರು ಲೆಕ್ಕಾಚಾರಮಾಡಿ ನಷ್ಟವಾಗದಿರುವ ಹಾಗೆ ವ್ಯವಸಾಯಕ್ಕೊದಗಿಸಬೇಕಾದರೆ ದರವಿಷ್ಟು, ಸಣ್ಣ ಕೈಗಾರಿಕೆಗಳಿಗೆ ಇಷ್ಟು, ಬೀದಿ ದೀಪಗಳಿಗಿಷ್ಟು, ಅಡಿಗೆ ಉಪಯೋಗಕ್ಕಿಷ್ಟು ಎಂದು ದರವನ್ನು ಗೊತ್ತುಮಾಡುತ್ತಾರೆ. ಹಾಗೆ ಆ ವಿಚಾರವನ್ನು ಅವರ ತೀರ್ಮಾನಕ್ಕೆ ಬಿಡುವುದು ಸೂಕ್ತವೆಂದು ಸರ್ಕಾರ ಭಾವಿಸಿದೆ. ಯೂನಿಫಾರಂ ರೇಟ್ ಸ್ಟ್ರಕ್ಚರ್ ಮಾಡುವುದಕ್ಕೆ ಅವರು ಪ್ರಯತ್ನ ಮಾಡಲಿರುವರು.

Sri M. C. NARASIMHAN.—Is that the only reason for the postponement

of the formation of the Electricity Board?

Sri H. K. VEERANNA GOWDH.—I explained the reason.

Sri M. C. NARASIMHAN.—Is that the only reason; is there any other reason?

Sri H. K. VEERANNA GOWDH.—That is the major reason and one of a few reasons also.

ಆದ್ದರಿಂದ ಈ ವಿಚಾರದಲ್ಲಿ ಪಕ್ಷಪಾತ ಮನೋಭಾವದಿಂದ ಈ ಸರ್ಕಾರದವರು ವರ್ತಿಸಿದ್ದಾರೆ, ಹೊಸದಾಗಿ ಸೇರಿದ ಭಾಗಗಳನ್ನು ಉದಾಸೀನ ಮಾಡಿದ್ದಾರೆ ಎಂದು ಅರ್ಥ ಬರುವ ಹಾಗೆ ಡಾ|| ನಾಗೂರ್ ರವರು ಟೀಕೆ ಮಾಡಿರುವುದು ಸರಿಯಲ್ಲ ಎಂದು ಮಾತ್ರ ಅವರಿಗೆ ಹೇಳುವುದಕ್ಕೆ ಪ್ರಯತ್ನಪಡುತ್ತಿದ್ದೇನೆ.

ಇನ್ನೂ ಅನೇಕ ಸ್ನೇಹಿತರು ಕೆಲವು ವಿಚಾರ ಪ್ರಸ್ತಾಪ ಮಾಡಿದರು. ಗೊರೂರು ಅಣೆಕಟ್ಟಿನ ವಿಚಾರ ಶ್ರೀ ನರಸಿಂಹೇಗೌಡರು ಪ್ರಸ್ತಾಪ ಮಾಡಿದರು. ಅದು ಲಾಭದಾಯಕವಲ್ಲವೆಂದು ವಿಮರ್ಶೆ ಮಾಡಿದಾಗ ತಿಳಿಯ ಬಂತು. ಇಂಡಿಯಾ ಸರ್ಕಾರದವರು ಅದಕ್ಕೆ ಒಪ್ಪುವುದಿಲ್ಲ. ಆದರೂ ಈಗಿರುವ ಪ್ರಾಜೆಕ್ಟುಗಳಿಗೆ ಒದಗಿಸಿರುವ ಹಣದಲ್ಲಿ ಉಳಿತಾಯವಾದರೆ ಅದನ್ನು ಗೊರೂರು ಅಣೆಕಟ್ಟಿಗೆ ಉಪಯೋಗಿಸುವುದಕ್ಕೆ ಅನುಮತಿ ಕೇಳಿದ ಮೇಲೆ ಕೇಂದ್ರ ಸರ್ಕಾರದವರು ಆ ವಿಚಾರ ಯೋಚನೆ ಮಾಡುವುದಾಗಿ ತಿಳಿಸಿದ್ದಾರೆ. ಇದಕ್ಕೆ ಪುನಃ ಅಂದಾಜು ಮಾಡಿ ವಿಮರ್ಶೆ ಮಾಡುವುದಕ್ಕೆ ಪ್ರಯತ್ನ ಮಾಡಲಾಗುತ್ತದೆ. ಇಷ್ಟು ಇವೊತ್ತು ಮಾತನಾಡಿದಂಥ ಸದಸ್ಯರ ಅಭಿಪ್ರಾಯಗಳಿಗೆ ನಾನು ಸ್ಥೂಲವಾಗಿ ಉತ್ತರಗಳನ್ನು ತಿಳಿಸಿದ್ದೇನೆ.

ಇನ್ನು ಹಿಂದಿನ ತಿಂಗಳು 18ನೇ ತಾರೀಖಿನಿಂದ 20ನೇ ತಾರೀಖಿನವರೆಗೆ ನಡೆದಂಥ ಆಯವ್ಯಯದ ಚರ್ಚೆಯಲ್ಲಿ ಕೆಲವು ಅಂಶಗಳನ್ನು ಸದಸ್ಯರು ಸೂಚಿಸಿದ್ದಾರೆ. ಮೊದಲನೆಯದಾಗಿ ವೆಸ್ಟ್ ಕೋಸ್ಟ್ ರೋಡ್ ಏನಿದೆ ಅದು ದೆಹಲಿಯಿಂದ ಕನ್ಯಾಕುಮಾರಿಯವರೆಗೆ ನ್ಯಾಷನಲ್ ಹೈವೆ ಆಗಿದೆ. ಇದರಲ್ಲಿ ಮೈಸೂರು ಸಂಸ್ಥಾನದ ಭಾಗವನ್ನು ಸೇರಿಸುವಾಗ ಅಲೈನ್‌ಮೆಂಟ್ ಒಳಭಾಗಕ್ಕೆ ಹೋಗಬೇಕೆಂದು ಹೇಳಿದ್ದೇವೆ, ಇಲ್ಲದಿದ್ದರೆ ತೀರ ಪ್ರದೇಶಗಳಿಗೆ ತೊಂದರೆಯಾಗುತ್ತದೆಂದು ಆಕ್ಷೇಪಣೆ ಮಾಡಿದ್ದೇವೆ. ಹೋದ ವರ್ಷ ಇಂಡಿಯಾ ಸರ್ಕಾರದವರು ಇದನ್ನು ಅಂತ್ಯವಾಗಿ ನಿರ್ಧಾರ ಮಾಡಬೇಕೆಂದಿದ್ದರು. ಈ ವರ್ಷ ಅದು ಕೊನೆಮುಟ್ಟುವುದರಲ್ಲಿ ಏನೂ ಸಂದೇಹವಿಲ್ಲ. ಇದನ್ನು ಕೇಂದ್ರ ಸರ್ಕಾರದವರು ತೀರ್ಮಾನಿಸಬೇಕು. ಇಂತಹ ದೊಡ್ಡ ಯೋಜನೆಗೆ ಕೈ ಹಾಕಿದರೆ ಸುಮಾರು ಮೂರು ಕೋಟಿ ರೂಪಾಯಿಗಳಿಗಿಂತ ಹೆಚ್ಚಿಗೆ ಹಣ ಖರ್ಚಾಗುತ್ತದೆ, ಸೇತುವೆಗಳನ್ನು ಮತ್ತು ರಸ್ತೆಗಳನ್ನು ಕಡಮೆ ಮಾಡೋಣವೆಂದರೆ ಜನರಿಗೆ ಅನುಕೂಲ ಅಷ್ಟಾಗಿ ಆಗುವುದಿಲ್ಲ. ಇನ್ನೂ ಒಂದೆರಡುಸಾರಿ ವಿಮರ್ಶೆಮಾಡಿ ತೀರಪ್ರದೇಶಗಳಲ್ಲಿಯೇ ರಸ್ತೆ ಹೋಗಬೇಕೆಂದು ನಿರ್ಧಾರಮಾಡಬೇಕಾಗಿದೆ. ಇದನ್ನು ಕೊನೆಗಾಣಿಸುವುದರಲ್ಲಿ ಏನೂ ಸಂದೇಹವಿಲ್ಲ. ಇನ್ನು ಸೌತ್ ಕೆನರಾದ ಕುಂದಲ ಬ್ರಿಡ್ಜನ್ನು ನಿರ್ಮಾಣ ಮಾಡುವುದನ್ನು ದ್ವಿತೀಯ ಪಂಚವಾರ್ಷಿಕಯೋಜನೆಯಲ್ಲಿ ಸೇರಿಸಬೇಕೆಂದು ಸದಸ್ಯರು ಹೇಳಿದ್ದಾರೆ. ಅದು ಮತ್ತೆ ಅಂದಾಜು ಆಗಬೇಕಾಗಿದೆ. ಅದನ್ನು ಇನ್ನೂ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲಿಲ್ಲ. ಮದ್ರಾಸ್ ಸರ್ಕಾರದವರು ಬೇರೆ ಅಂದಾಜು ಮಾಡಿಸಿದ್ದಾರೆ. ಅದೂ ಈಗ ವ್ಯತ್ಯಾಸವಾಗಿದೆ. ಈಗಿನ ರೇಟ್ ಪ್ರಕಾರ ಅಂದಾಜು ಮಾಡಿದ್ದೇವೆ. ಹೊಸದಾಗಿ ಪ್ಲಾನುಗಳನ್ನೂ ಸಹ ತಯಾರು ಮಾಡಿದ್ದೇವೆ. ಇನ್ನೂ ಆ ಬಗ್ಗೆ ವಿಮರ್ಶೆ ಮಾಡಬೇಕಾಗಿದೆ. ಸಾಧ್ಯವಾದರೆ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಈ ಯೋಜನೆಯನ್ನು ಸೇರಿಸಬೇಕೆಂದಿದ್ದೇವೆ. ಒಂದು ವೇಳೆ ಸಾಧ್ಯವಾಗದ ಪಕ್ಷದಲ್ಲಿ ಈ ಯೋಜನೆಯನ್ನು ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿ ಅಳವಡಿಸಲಾಗುತ್ತದೆ.

ಇನ್ನು ರೂರಲ್ ವಾಟರ್ ಸಪ್ಲೈ ವಿಚಾರದಲ್ಲಿ ಸರ್ಕಾರ ಸಾಕಷ್ಟು ವ್ಯವಸ್ಥೆ ಮಾಡಬೇಕು ಎಂಬ ಸಲಹೆ ಅನೇಕ ಮಾನ್ಯ ಸದಸ್ಯರಿಂದ ಬಂದಿದೆ. ಅದಕ್ಕೆ ಈ ಸಭೆಯ ಮುಂದೆ ಕೆಲವು ಅಂಕಿ ಅಂಶಗಳ ಮೂಲಕ ಹೇಳುವುದಾದರೆ, ಹಳೆಯ ಮೈಸೂರಿಗೆ ಸಂಬಂಧಪಟ್ಟ ಹಾಗೆ ಅಂದರೆ ಕೋಲಾರ, ತುಮಕೂರು, ಶಿವಮೊಗ್ಗ ಮತ್ತು ಹಾಸನ ಜಿಲ್ಲೆಗಳ 75 ಗ್ರಾಮಗಳ ಬಗ್ಗೆ ನ್ಯಾಷನಲ್ ವಾಟರ್‌ಸಪ್ಲೈ ಸ್ಕೀಮಿಗಾಗಿ ಸುಮಾರು 30 ಲಕ್ಷ ಚಿಲ್ಲರೆ ರೂಪಾಯಿಗಳ ಒಂದು ಅಂದಾಜನ್ನು ಮಾಡಿದ್ದಾರೆ. ಅದನ್ನು ಕೇಂದ್ರ ಸರ್ಕಾರದವರು ಒಪ್ಪಿದ್ದಾರೆ. ಎರಡನೆಯದಾಗಿ ಮೈಸೂರು, ಮಂಡ್ಯ, ಬೆಂಗಳೂರು, ಚಿತ್ರದುರ್ಗ, ಬಳ್ಳಾರಿ, ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳಿಗೆ ಸೇರಿದ 103 ಗ್ರಾಮಗಳ ಬಗ್ಗೆ ರಾಷ್ಟ್ರೀಯ ಗ್ರಾಮಾಂತರ ನೀರಿನ ಪೂರೈಕೆಗೆ 47·35 ಲಕ್ಷ ರೂಪಾಯಿಗಳ ವೆಚ್ಚ ಹಿಡಿಯುವ ಎರಡನೆಯ ಅಂದಾಜು ಪಟ್ಟಿಯನ್ನು ಭಾರತ ಸರ್ಕಾರದವರ ಒಪ್ಪಿಗೆಗೆ ಕಳುಹಿಸಿದ್ದೇವೆ. ಅದನ್ನು ಇನ್ನೂ ಕೇಂದ್ರ ಸರ್ಕಾರದವರು ಒಪ್ಪಲಿಲ್ಲ. ಆ ಯೋಜನೆಯನ್ನು ಜಾಗ್ರತೆ ಮಂಜೂರು ಮಾಡಬೇಕೆಂದು ಕೇಂದ್ರ ಸರ್ಕಾರದವರಲ್ಲಿ ಒತ್ತಾಯ ಮಾಡುತ್ತಿದ್ದೇವೆ. ಈಚೆಗೆ ಇಂಟಿಗ್ರೇಷನ್ ಆದಮೇಲೆ ಇನ್ನೂ 96 ಗ್ರಾಮಗಳಲ್ಲಿ ನ್ಯಾಷನಲ್ ವಾಟರ್ ಸಪ್ಲೈ ಸ್ಕೀಮನ್ನು ಕೈಗೊಳ್ಳಬೇಕೆಂದು ಒಂದು ಅಂದಾಜನ್ನು ಕಳುಹಿಸಿದ್ದೇವೆ. ಅದೂ ಕೇಂದ್ರ ಸರ್ಕಾರದವರ ಮುಂದೆಯೇ ಇದೆ. ಈ ವರ್ಷ 25 ಲಕ್ಷ ರೂಪಾಯಿಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ರಾಷ್ಟ್ರೀಯ ನೀರು ಸರಬರಾಯಿ ಯೋಜನೆಗೋಸ್ಕರ ಒದಗಿಸಿಕೊಡಲಾಗಿದೆ. ಇಂಡಿಯಾ ಸರ್ಕಾರದವರು ಇತರ ಗ್ರಾಮಾಂತರ ಪ್ರದೇಶಗಳಲ್ಲಿಯೂ ನ್ಯಾಷನಲ್ ವಾಟರ್ ಸಪ್ಲೈ ಸ್ಕೀಮನ್ನು ಜಾರಿಗೆ ತರಲು ಒಪ್ಪಿಗೆ ಕೊಟ್ಟರೆ, ಇನ್ನೂ ಸ್ವಲ್ಪ ಹಣ ಒದಗಿಸುವುದರಲ್ಲಿ ಏನೂ ಬಾಧಕವಿಲ್ಲ. ಗ್ರಾಮಾಂತರ ನೀರಿನ ಪೂರೈಕೆಯ ಯೋಜನೆಗಳಿಗೆ ವಿಶೇಷ ಮಹತ್ವ ಕೊಡಲಾಗಿದೆ. ರಾಜ್ಯದ ಪ್ರತಿಯೊಂದು ಗ್ರಾಮದಲ್ಲಿ ಕುಡಿಯುವ ನೀರಿನ ಭಾವಿಗಳನ್ನು ಒದಗಿಸಲು ಸರ್ಕಾರದವರು ವಿಶ್ವಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಹಿಂದೆ ಮೈಸೂರಿನ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅನೇಕ ನೀರಾವರಿ ಕಾಮಗಾರಿಗಳು ಆದವು. ಅವುಗಳ ಪೈಕಿ ಹಲಾಡಿ ರಿಸರ್‌ವಾಯರ್ ಕಾಮಗಾರಿ ನಿಂತು ಹೋಗಿದೆ. ಇದು ಸುಮಾರು ಎರಡು ಕೋಟಿ ರೂಪಾಯಿಗಳ ಸ್ಕೀಮು. ಈ ಯೋಜನೆಯು ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಮೊದಲು ಸೇರಿತ್ತು. ಆಮೇಲೆ ಕೈಬಿಟ್ಟಿದ್ದಾರೆ. ಅದನ್ನು ಪುನಃ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸುವುದಕ್ಕೆ ಈಗ ನಾವು ಒತ್ತಾಯಪಡಿಸಬೇಕು. ಈ ಯೋಜನೆಯಿಂದ ಬರುವ ಉತ್ಪತ್ತಿ ಶೇಕಡ ·6 ಮಾತ್ರ;

(SRI H. K. VEERANNA GOWDH.)

ಶೇಕಡ ಒಂದರಷ್ಟು ಇಲ್ಲ. ಆದ್ದರಿಂದ ಅದನ್ನು ಕೈ ಬಿಡಬೇಕೆಂದು ಹೇಳಿದ್ದಾರೆ. ಆದರೂ ಕೂಡ ಈಗ ಎಲ್ಲಿ ಅಣೆಕಟ್ಟು ಕಟ್ಟಬೇಕು, ಯಾವ ರೀತಿ ಇದರ ಖರ್ಚನ್ನು ಕಡಮೆ ಮಾಡಬೇಕು, ಇವುಗಳನ್ನು ವಿಮರ್ಶೆ ಮಾಡಿ ಇನ್ನೊಂದು ಅಂದಾಜನ್ನು ಹೊಸದಾಗಿ ತಯಾರಿಸಲು ಈಗ ಪ್ರಯತ್ನ ನಡೆಯುತ್ತಿದೆ.

ಇನ್ನು ಬಳ್ಳಾರಿ ಜಿಲ್ಲೆಯಲ್ಲಿ ರಸ್ತೆ ಸೌಕರ್ಯಗಳು ಸಾಕಷ್ಟಿಲ್ಲವೆಂದು ಕೆಲವು ಮಾನ್ಯ ಸದಸ್ಯರು ಟೀಕಿಸಿದರು. ನಾನು ಬಳ್ಳಾರಿ ಜಿಲ್ಲೆಯಲ್ಲಿ ಹಳೆಯ ಮೈಸೂರಾಗಿದ್ದಾಗಲೂ, ಹೊಸ ಮೈಸೂರು ಆದ ಮೇಲೂ ಅನೇಕ ಕಡೆಗಳಲ್ಲಿ ಸಂಚಾರ ಮಾಡಿದ್ದೇನೆ. ಅನೇಕ ಸ್ಥಳಗಳಿಂದ ನಮ್ಮ ಪ್ರಾಂತದ ಇಂತಹ ಕಡೆಗಳಲ್ಲಿ ಮುಖ್ಯವಾಗಿ ರಸ್ತೆಗಳು ಮತ್ತು ಸೇತುವೆಗಳು ಆಗಬೇಕು ಎಂದು ಕಾಗದಗಳನ್ನು ಮಾನ್ಯ ಸದಸ್ಯರಲ್ಲಿ ಅನೇಕರು ಬರೆದು ಬರೆದು ಕಳುಹಿಸಿದ್ದಾರೆ. ಅದಕ್ಕಾಗಿ ಎಷ್ಟೋ ಗ್ರಾಮಗಳಿಗೆ ನಾನು ಹೋದಾಗ ಅಲ್ಲಿನ ಜನರು ರಸ್ತೆ ಮತ್ತು ಸೇತುವೆಗಳ ಸೌಕರ್ಯಗಳನ್ನು ಪಡೆಯಲು ಒತ್ತಾಯಮಾಡಿ ಅರ್ಜಿಗಳನ್ನು ಕೊಟ್ಟರು. ಆ ಎಲ್ಲಾ ಅರ್ಜಿಗಳನ್ನೂ ಮತ್ತು ಅಲ್ಲಿನ ಜನರ ಎಲ್ಲಾ ಸಲಹೆಗಳನ್ನೂ ಕ್ರೋಢೀಕರಿಸಿ ಮೊದಲು ಡಿಸ್ಟ್ರಿಕ್ಟು ಹೆಡ್ ಕ್ವಾರ್ಟರುಗಳಿಗೂ, ಆಮೇಲೆ ತಾಲ್ಲೂಕ್ ಹೆಡ್ ಕ್ವಾರ್ಟರುಗಳಿಗೂ, ರಸ್ತೆ ಸೌಕರ್ಯಗಳನ್ನು ಏರ್ಪಡಿಸುವ ವಿಚಾರದಲ್ಲಿಯೂ, ಮತ್ತು ಎಲ್ಲೆಲ್ಲಿ ಸೇತುವೆಗಳನ್ನು ನಿರ್ಮಾಣ ಮಾಡಬೇಕೆಂಬ ವಿಚಾರದಲ್ಲಿಯೂ ಈಗಾಗಲೇ ಒಂದು ಕಾಂಪ್ರಹೆನ್ಸಿವ್ ಸ್ಕೀಮನ್ನು ತಯಾರು ಮಾಡಿದ್ದೇವೆ. ಆ ಸ್ಕೀಮು ಪ್ರಕಾರ ಈಗ ಸೇತುವೆಗಳು ಎಲ್ಲೆಲ್ಲಿವೆ, ಎಲ್ಲೆಲ್ಲಿಲ್ಲ, ಎಷ್ಟು ಇವೆ ಎಂದು ಸಂಬಂಧಪಟ್ಟ ಅಧಿಕಾರಿಗಳಲ್ಲಿ ವಿಚಾರಿಸಿದಾಗ, ಆ ವಿವರಗಳ ಪಟ್ಟಿ ಸಿದ್ಧವಾಗಿದೆ ಎಂದು ಇವೊತ್ತು ಮಧ್ಯಾಹ್ನ ನನಗೆ ವಿಷಯ ತಿಳಿದು ಬಂತು. ಅದಕ್ಕಾಗಿ ಅದಕ್ಕೆ ತಗಲುವ ಖರ್ಚನ್ನು ಲೆಖ್ಖ ಹಾಕಿದ ಮೇಲೆ ಕೇಂದ್ರ ಸರ್ಕಾರದವರನ್ನು ಒತ್ತಾಯಪಡಿಸಿದ್ದೇವೆ. ಈ ಯೋಜನೆ ಒಂದು ವರ್ಷದಲ್ಲಿ ಆಗುವ ಹಾಗೆ ಇಲ್ಲ. ಪ್ಲಾನ್ ಪ್ರಕಾರ ಈ ಕೆಲಸವನ್ನು ಕೈಗೊಳ್ಳಬೇಕು. ಭಾರತ ಸರ್ಕಾರದವರೂ ಕೂಡ ಈ ಬಗ್ಗೆ ಈಗಾಗಲೇ ಕಾರ್ಯತತ್ಪರರಾಗಿದ್ದಾರೆ. ಈಗ ಯಾವ ಸೇತುವೆಯನ್ನು ಮೊದಲು ಕಟ್ಟಬೇಕು, ಯಾವ ರೋಡಿಗೆ ಜಲ್ಲಿ, ಸಿಮೆಂಟ್ ಹಾಕಿಸಬೇಕು, ಯಾವ ರಸ್ತೆಗೆ ಟಾರ್ ಹಾಕಬೇಕು— ಮುಂತಾದ ಕಾಮಗಾರಿಗಳನ್ನು ಕೈಗೊಳ್ಳುವ ದಾರಿಯಲ್ಲಿ ಸರ್ಕಾರ ನಡೆಯುತ್ತಿದೆ ಎಂದು ನಾನು ಹೇಳುತ್ತೇನೆ.

ಇನ್ನು ಬಿಜಾಪುರದ ಕ್ಷಾಮ ಪ್ರದೇಶಗಳಿಗೆ ಎಲ್ಲೆಲ್ಲಿ ನೀರಾವರಿ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕು ಎಂಬುದಾಗಿ ಹೇಳುತ್ತಾ, ಅಂತಹ ಕಡೆ ಒಂದು ಹೊಸ ಡಿವಿಜನನ್ನು ಮಾಡಬೇಕು ಎಂದು ಒಂದು ಸಲಹೆಯನ್ನು ಒಬ್ಬ ಮಾನ್ಯ ಸದಸ್ಯರು ಮಾಡಿದ್ದಾರೆ. ಈ ನೀರಾವರಿ ವಿಚಾರದಲ್ಲಿ ಉತ್ತರ ಭಾಗಕ್ಕೆ ಒಬ್ಬ ಚೀಫ್ ಇಂಜಿನಿಯರ್ ದಕ್ಷಿಣ ಭಾಗಕ್ಕೆ ಒಬ್ಬ ಚೀಫ್ ಇಂಜಿನಿಯರನ್ನು ನೇಮಿಸಿ ಅದರ ಜೊತೆಗೆ ತಕ್ಕ ಸಿಬ್ಬಂದಿಯನ್ನು ನೇಮಿಸಿ ಒಂದು ಹೊಸ ಡಿವಿಜನನ್ನು ಏರ್ಪಾಡು ಮಾಡಿದೆ. ಅಪ್ಪರ್ ಕೃಷ್ಣಾ ಮತ್ತು ಭೀಮಾ ನದಿಗಳಿಂದ ನೀರಾವರಿ ಕಾಮಗಾರಿಗಳಿಗೆ ಅನುಕೂಲವಾಗುವ ಹಾಗೆ ಏರ್ಪಾಡು ಮಾಡಿದೆ. ಬಿಜಾಪುರದಲ್ಲಿ ಈಗಾಗಲೇ ಒಂದು ಹೊಸ ಡಿವಿಜನ್ ನೇಮಕ ಮಾಡಿರುವುದರಿಂದ ಇನ್ನೊಂದು ಹೊಸ ಡಿವಿಜನ್ ನೇಮಕ ಮಾಡುವ ಅಗತ್ಯವಿಲ್ಲ. ಇನ್ನು ನಮ್ಮ ಬೆಂಗಳೂರಿನ ನೀರಿನ ಸಂಬಂಧವಾಗಿ ಶ್ರೀಮಾನ್ ವಿ. ಪಿ. ದೀನದಯಾಳು ನಾಯ್ಡುರವರು ಹೇಳಿದ್ದಾರೆ. ಕಾವೇರಿ ನದಿಯಿಂದ ನೀರು ಸರಬರಾಯಿ ಆಗುವುದಕ್ಕೆ ಸುಮಾರು ಒಂದೂವರೆ ಕೋಟಿ ರೂಪಾಯಿಗಳ ಸ್ಕೀಂ ಇದೆ. ಅದನ್ನು ವಿಮರ್ಶೆ ಮಾಡಬೇಕಾಗಿದೆ. ಆದರೆ ತಿಪ್ಪಗೊಂಡನ ಹಳ್ಳಿಯ ಮೂರನೆ ಹಂತದಲ್ಲಿರುವ ರಿಜರ್‌ವಾಯರ್‌ನಿಂದ ಹೆಚ್ಚು ನೀರು ಸರಬರಾಯಿ ಮಾಡಲು ಈಗಾಗಲೇ ಅಂದಾಜು ತಯಾರಾಗಿದೆ. ಅದು ಇಂಡಿಯಾ ಸರ್ಕಾರದ ಮುಂದಿದೆ. ಆದರೆ ಅದು ಕಾರ್ಯಗತವಾಗುವುದಕ್ಕೆ ನಮಗೆ ಪೈಪುಗಳು ಬೇಕು. ಇವೊತ್ತಿನ ದೃಷ್ಟಿಯಿಂದ ಹೇಳುವುದಾದರೆ, ಈಗ ಸರಾಸರಿ ತಲೆ ಒಂದಕ್ಕೆ 24 ಗ್ಯಾಲನ್‌ಗಳಷ್ಟು ನೀರನ್ನು ಕೊಡಲು ಸಾಧ್ಯವಿದೆ. ಆದರೆ ಈಗ 10—11 ಗ್ಯಾಲನ್‌ಗಳಷ್ಟು ನೀರನ್ನು ತಲೆ ಒಂದಕ್ಕೆ ಕೊಡುತ್ತಿದ್ದೇವೆ. ಈ ತಿಂಗಳು ಮೂರನೆ ವಾರದಿಂದ ಸರಾಸರಿ ತಲಾ ಒಂದಕ್ಕೆ ಹದಿನಾರು ಗ್ಯಾಲನ್‌ಗಳಷ್ಟು ನೀರು ಸರಬರಾಯಿ ಮಾಡಲು ಸರ್ಕಾರದವರು ಏರ್ಪಾಡುಮಾಡಿದ್ದಾರೆ. ಶ್ರೀಮಾನ್ ದೀನದಯಾಳು ನಾಯ್ಡುರವರು ಹೇಳಿದ ಸ್ಕೀಮನ್ನು ಮೂರನೆಯ ಹಂತದಲ್ಲಿ ಅಳವಡಿಸಬಹುದೆಂದು ತೋರುತ್ತದೆ. ಏಕೆಂದರೆ ಆ ಸ್ಕೀಮಿಗೆ ವಿಶೇಷವಾಗಿ ಪೈಪುಗಳು ಬರಬೇಕಾಗಿದೆ. ಅವು ದೊರೆಯಲು ಇನ್ನೂ ಮೂರು ನಾಲ್ಕು ವರ್ಷಗಳು ಬೇಕಾಗುತ್ತದೆ. ಪೈಪುಗಳು ದೊರೆತರೆ ಆಗ ಸರಾಸರಿ ತಲಾ ಒಂದಕ್ಕೆ 24 ಗ್ಯಾಲನ್‌ಗಳಷ್ಟು ನೀರು ಸರಬರಾಯಿಯನ್ನು ಮಾಡಬಹುದು. ಇದೂ ಸಾಲದು. ಪರದೇಶಗಳಲ್ಲಿ ತಲಾ ಒಂದಕ್ಕೆ 40-50-60 ಗ್ಯಾಲನ್‌ಗಳಷ್ಟು ನೀರು ಸರಬರಾಯಿ ಮಾಡುತ್ತಿದ್ದಾರೆಂದು ಅನೇಕ ತಜ್ಞರು ಹೇಳುತ್ತಿದ್ದಾರೆ. ಆದ್ದರಿಂದ ನಮ್ಮ ಪಟ್ಟಣದಲ್ಲಿ ಪರದೇಶಗಳ ಮಟ್ಟದಲ್ಲಿ ಈಗಾಗಲೇ ಕಾವೇರಿ ನದಿಯಿಂದ ರಾಮನಗರ, ಮದ್ದೂರು, ಕನ್‌ಕನ್‌ಹಳ್ಳಿ ತಾಲ್ಲೂಕ್‌ಗಳಿಗೆ ಹೆಚ್ಚು ನೀರು ಸರಬರಾಯಿಗಾಗಿ ಸುಮಾರು ಎಂಟು ಹತ್ತು ಕೋಟಿ ರೂಪಾಯಿಗಳ ಅಂದಾಜು ಮಾಡಲಾಗಿದೆ. ಅದರ ಅಗತ್ಯವಿದೆಯೋ ಇಲ್ಲವೋ ಎಂದು ಸರ್ಕಾರದ ಪರಿಶೀಲನೆಯಲ್ಲಿದೆ. ಈಚೆಗೆ ಬೆಂಗಳೂರು ದಿನೇ ದಿನೇ ದೊಡ್ಡದಾಗುತ್ತಿದೆ. ಜನರಿಗೆ ನೀರಿನ ಸೌಕರ್ಯ ಅಗತ್ಯ. ತಿಪ್ಪಗೊಂಡನಹಳ್ಳಿಯ ರಿಜರ್‌ವಾಯರಿನ ಮೂರನೆಯ ಹಂತ ಪೂರೈಸುವುದರೊಳಗೆ, ಕಾವೇರಿ ನದಿಯಿಂದ ಒಂದು ಸರ್ವೆಯನ್ನು ಮಾಡುವುದಕ್ಕೆ ಸರ್ಕಾರದವರು ಏರ್ಪಾಡು ಮಾಡಿದ್ದಾರೆಂದು ಹೇಳುವುದಕ್ಕೆ ನಾನು ಅಪೇಕ್ಷೆಪಡುತ್ತೇನೆ.

ಮತ್ತೊಂದು ವಿಷಯವನ್ನು ಹೇಳಿದರು. ಇಲಾಖೆಯಿಂದ ಅನೇಕ ಅಧಿಕಾರಿಗಳು ಪರದೇಶಗಳಿಗೆ ಹೋಗಿ ಡಿಗ್ರಿಗಳನ್ನು ತೆಗೆದುಕೊಂಡು ವಾಪಸು ಬಂದಾಗ ಅವರುಗಳಿಗೆ ಸರಿಯಾಗಿ ಉತ್ತೇಜನ ಸಿಕ್ಕುತ್ತಿಲ್ಲವೆಂದು ಹೇಳಿದರು. ಹೊರಗಿನಿಂದ ಪಾಸುಮಾಡಿ ಬಂದಾಕ್ಷಣ ಅವರಿಗೆ ಕೊಡಬೇಕೆಂದೇನೂ ನಿಯಮವಿಲ್ಲ. ಅವರ ಸರ್ವಿಸ್ಸು ಮತ್ತು ಮೆರಿಟ್ಟುಗಳನ್ನು ನೋಡಿ ಅದರ ಮೇಲೆ ನಿರ್ಧರಿಸಬೇಕು, ಹಾಗಿಲ್ಲದೆ ಅವರಿಗಿಂತ ಉತ್ತಮವಾದ ಅನುಭವಿಗಳೂ ದಕ್ಷರೂ ಇಲಾಖೆಯಲ್ಲಿದ್ದರೆ ಅವರ ಮೇಲೆ ಈಗ ಇಂಗ್ಲೆಂಡಿನಿಂದಲೋ ಅಮೆರಿಕದಿಂದಲೋ ಪಾಸುಮಾಡಿಬಂದವರೆಂದು ಮೇಲಕ್ಕೇರಿಸಿ ನೇಮಿಸುವುದು ಸರಿಯಾದುದಲ್ಲ. ಈ ರೀತಿಯಾಗಿ ಪಬ್ಲಿಕ್ ಸರ್ವಿಸ್ಸಿನವರ ಅಭಿಪ್ರಾಯವೂ ಕೂಡ ಇದೆ. ಸರಕಾರದ ನೀತಿಯೂ ಇದೇ ಆಗಿದೆ. ಆದುದರಿಂದ ಇದರಲ್ಲಿ ಸರ್ಕಾರದ ನೀತಿಯ ದುರುಪಯೋಗ

ವೇನೂ ಆಗಿಲ್ಲ ಮತ್ತು ಹಾಗೆ ಆಗುವುದಿಲ್ಲವೆಂಬ ಭರವಸೆಯನ್ನು ಸರ್ಕಾರದ ಪರವಾಗಿ ನಾನು ಇಲ್ಲಿ ಅರಿಕೆ ಮಾಡುತ್ತಿದ್ದೇನೆ.

[MR. SPEAKER in the Chair.]

ಇನ್ನೊಂದು ಆಕ್ಷೇಪಣೆಯನ್ನು ಹೇಳಿದರು. ಅದು ಈ ಇಲಾಖೆಯಲ್ಲಿ ಸಿಬ್ಬಂದಿಗಾಗಿ ಹೆಚ್ಚಿನ ವೆಚ್ಚವಾಗುತ್ತಿದೆ, ಏಕೆಂದರೆ ದೊಡ್ಡ ದೊಡ್ಡ ಪ್ರಾಜೆಕ್ಟುಗಳಾಗುತ್ತಿವೆ, ಮತ್ತು ಇದಕ್ಕಾಗಿ ಆಗುತ್ತಿದೆ ಎಂದು ಹೇಳಿದರು. ಆದರೆ ಸರಿಯಾಗಿ ನೋಡಿದಲ್ಲಿ ಇದು ಸರಿಯಾಗಿಲ್ಲ ಎಂದು ಹೇಳಬೇಕಾಗಿದೆ. ಏಕೆಂದರೆ ಶೇಕಡ 18ರಷ್ಟು ಹಿಂದೆ ಈ ಇಲಾಖೆಯ ಸಿಬ್ಬಂದಿಗೋಸ್ಕರ ಖರ್ಚಾಗುತ್ತಿತ್ತು, ಹಾಗೆ ಆಗುತ್ತಿದ್ದುದು ಈಗ ವರ್ಷ ವರ್ಷಕ್ಕೂ ಕಡಮೆಯಾಗುತ್ತಿದೆ. ಈಗ ಶೇಕಡ 4.9 ರೂಪಾಯಿಗಳಷ್ಟು ಎಂದರೆ ಶೇಕಡ ಐದು ರೂಪಾಯಿಗಳಷ್ಟು ಸಿಬ್ಬಂದಿಗಾಗಿ ಖರ್ಚಾಗುತ್ತಿದೆ. ಹೀಗಿದ್ದೂ ದೊಡ್ಡದೊಡ್ಡ ಪ್ರಾಜೆಕ್ಟುಗಳಾಗಲಿ ಅಥವಾ ಹೊಸ ಹೊಸ ಕೆಲಸಗಳಾಗಲಿ ಬಂದರೂ ಕೂಡ ಇರುವ ಸಿಬ್ಬಂದಿಯೊಳಗೆಯೇ ಮಾಡಬೇಕೆಂದು ಏರ್ಪಾಡು ಮಾಡಿದೆ. ಪ್ರತಿಯೊಬ್ಬ ಕೆಲಸಗಾರನೂ ಹೆಚ್ಚಿಗೆ ಕೆಲಸ ಮಾಡುವಂತೆ, ವರ್ಕ್‌ಲೋಡನ್ನು ಹೆಚ್ಚಿಸಿದೆ. ಸಿಬ್ಬಂದಿಯನ್ನೇನೂ ಹೊಸದಾಗಿ ಕೊಟ್ಟಿಲ್ಲ. ಆದಕಾರಣ ಸಿಬ್ಬಂದಿಗಾಗಿ ಶೇಕಡ ಐದು ರೂಪಾಯಿಗಳಿಗಿಂತ ಖರ್ಚು ಹೆಚ್ಚಾಗಿಲ್ಲ ಎಂದು ಭರವಸೆಯಿಂದ ಈ ಸಭೆಯಲ್ಲಿ ಹೇಳುತ್ತಿದ್ದೇನೆ.

ಈ ಭದ್ರಾ ರಿಸರ್ವಾಯರ್ ಯೋಜನೆ 1960ನೆಯ ಇಸವಿಯ ವೇಳೆಗೂ ಮುಗಿಯುವುದಿಲ್ಲವೆಂದೂ ಮತ್ತು ಇದಕ್ಕಾಗಿ ಹತ್ತು-ಹದಿನೈದು ಲಕ್ಷ ರೂಪಾಯಿಗಳು ಖರ್ಚಾಗಿದ್ದರೂ ಕೂಡ ಇನ್ನೂ ಕೆಲಸ ಸರಿಯಾಗಿ ನಡೆಯುತ್ತಿಲ್ಲ ಎಂದೂ ಒಂದು ಟೀಕೆ ಬಂದಿದೆ. ಇದು ಅನೇಕ ಕಾರಣಗಳಿಂದಾಗಿ ನಿಧಾನವಾಯಿತು ಮತ್ತು ಹೆಚ್ಚಿಗೆ ಕೆಲಸವೇನೋ ಆಗಲಿಲ್ಲ. ಇದಕ್ಕೆ ಕಾರಣ ಕೆಲವು ತಜ್ಞರು ಮೊದಲು ಲೆಫ್ಟ್ ಬ್ಯಾಂಕ್‌ನಲ್ಲಿ ಆಗಬೇಕೋ ರೈಟ್ ಬ್ಯಾಂಕ್‌ನಲ್ಲಾಗಬೇಕೋ ಮಣ್ಣಿನಲ್ಲಾಗಬೇಕೋ ಅಥವಾ ಬರೀ ಸಿಮೆಂಟು ಕಾಂಕ್ರೀಟಿನಲ್ಲಾಗಬೇಕೋ ಎನ್ನುವ ವಿಚಾರದಲ್ಲಿ ಸರಿಯಾದ ತೀರ್ಮಾನವನ್ನು ಕೈಕೊಳ್ಳಲಾಗಲಿಲ್ಲ. ಅದೂ ಅಲ್ಲದೆ ಈಚೆಗೆ ಇಂಡಿಯಾ ಸರ್ಕಾರದಿಂದ ನೇಮಿತವಾಗಿದ್ದ ಶ್ರೀ ಗಾಡ್ಗಿಲ್ ಸಮಿತಿಯವರೂ ಕೂಡ ಈ ಪ್ರದೇಶಕ್ಕೆ ಬಂದು ಪರಿಶೀಲನೆ ನಡೆಸಿ ನಮ್ಮ ಮೈಸೂರು ಸರ್ಕಾರಕ್ಕೆ ಸಲಹೆ ಮಾಡಿದ್ದಾರೆ. ಮತ್ತು ಒಬ್ಬ ನಿವೃತ್ತ ಚೀಫ್ ಇಂಜಿನಿಯರವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಿದೆ. ಅವರು ಕೂಡ ಸೇರಿ ಹೋದ ವಾರ ಒಂದು ತೀರ್ಮಾನ ಮಾಡಿದ್ದಾರೆ. ಅದರ ಪ್ರಕಾರ ಇನ್ನು ಮುಂದೆ ಸರಿಯಾಗಿ ಕೆಲಸ ನಡೆಯುವುದಕ್ಕೆ ಸುಮಾರು ಎರಡೂವರೆ ಕೋಟಿಯಿಂದ ಮೂರು ಕೋಟಿ ರೂಪಾಯಿಗಳವರೆಗೆ ಹಣವನ್ನು ಒದಗಿಸಬೇಕೆಂದು ನಿರ್ಧರಿಸಲಾಗಿದೆ. ಆದರೆ ಇದರ ಉಳಿಕೆ ಖರ್ಚನ್ನು ಇನ್ನು ಮೂರುನಾಲ್ಕು ವರ್ಷಗಳ ನಂತರ ಸರಿಯಾಗಿ ಪೂರೈಸಲು ತಕ್ಕಷ್ಟು ಹಣವನ್ನು ಒದಗಿಸಲು ಪ್ರಯತ್ನ ಮಾಡುತ್ತಿದ್ದೇವೆ. ಆದ್ದರಿಂದ ಅನಾವಶ್ಯಕವಾಗಿ ಈ ಕೆಲಸವನ್ನು ಪೂರೈಸಲು ನಿಧಾನವಾಗಿದೆ ಎಂದು ಹೇಳುವುದರಿಂದೇನೂ ಪ್ರಯೋಜನವಿಲ್ಲ. ಇದಕ್ಕೆ ಸುಮಾರು ಮೊದಲ ಮೂರು ವರ್ಷಗಳಲ್ಲಿ ಒಂಭತ್ತು ಕೋಟಿ ರೂಪಾಯಿಗಳ ಖರ್ಚಾಗುತ್ತದೆ. ಮತ್ತು ಒಟ್ಟು 24 ಕೋಟಿ ರೂಪಾಯಿಗಳ ಎಸ್ಟಿಮೇಟ್ಸು ಆಗಿವೆ. ಉಳಿದ 15 ಕೋಟಿ ರೂಪಾಯಿಗಳನ್ನು ಕ್ರಮೇಣ ಒದಗಿಸಲು ಏರ್ಪಾಡು ಮಾಡಲಾಗುತ್ತದೆ ; ಈ ವರ್ಷ ಎರಡೂವರೆಯಿಂದ ಮೂರು ಕೋಟಿಯವರೆಗೆ ಒದಗಿಸಲು ಅಂದಾಜು ಮಾಡಿದೆ. ಐದು ವರ್ಷಗಳಾದ ನಂತರ ಇದರಿಂದ ಬರುವ ಉತ್ಪತ್ತಿಯನ್ನು ನೋಡಿಕೊಂಡು ಮುಂದಿನ ಅಂದಾಜನ್ನು ತಯಾರಿಸಲು ಏರ್ಪಾಡು ಮಾಡಬೇಕಾಗಿದೆ. ಮತ್ತು ಈ ಕೆಲಸ ಇನ್ನು ಮುಂದೆ ಸರಿಯಾಗಿ ನಡೆಯಲು ತಕ್ಕ ಏರ್ಪಾಡುಗಳನ್ನು ಮಾಡಲಾಗಿದೆ. ಅದಷ್ಟು ಜಾಗ್ರತೆ ಈ ಕೆಲಸವನ್ನು ಮುಗಿಸಬೇಕೆಂಬುದೇ ಸರ್ಕಾರದವರ ಆಶಯವಾಗಿದೆ.

ಇನ್ನು ನಮ್ಮ ಸ್ನೇಹಿತರಾದ ಶ್ರೀ ದುಗ್ಗಪ್ಪನವರು ಕೆಲವು ಮಾತುಗಳನ್ನು ಹೇಳಿದರು. ಈ ವಿಧಾನ ಸೌಧದ ಕಟ್ಟಡವನ್ನು ಸರಿಯಾಗಿ ನೋಡಿಕೊಳ್ಳುತ್ತಿಲ್ಲ ಮತ್ತು ಇದರ ಸುತ್ತಮುತ್ತಲಿನ ಪ್ರದೇಶವನ್ನು ಕ್ಲೀನಾಗಿಟ್ಟಿಲ್ಲ ಮತ್ತು ಇಷ್ಟೊಂದು ಚೆನ್ನಾಗಿ ಕಟ್ಟಿರುವ ಈ ಕಟ್ಟಡವನ್ನು ಸರಿಯಾಗಿ ನೋಡುತ್ತಿಲ್ಲ ಎಂದು ಟೀಕೆ ಮಾಡಿದರು. ಈ ಕಟ್ಟಡವನ್ನು ಕಟ್ಟಿಸಿರುವ ವಿಚಾರದಲ್ಲಿ ನಾನು ಹೆಚ್ಚು ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ಇದರ ವಿಷಯವಾಗಿ ಹಿಂದೆ ಈ ಮಾನ್ಯ ಸಭೆಯಲ್ಲಿ ಸದಸ್ಯರಾಗಿದ್ದ ಶ್ರೀ ಗೋಪಾಲಗೌಡರು ವಿರೋಧ ಪಕ್ಷದಲ್ಲಿದ್ದರು. ಅವರು ಅದ್ಭುತವಾದ ಕೆಲಸಗಳಿಗೆಲ್ಲ ಜನ ಚಪ್ಪಾಳೆ ಕುಟ್ಟುತ್ತಾರೆ ಎಂದು ಹೇಳಿದ್ದರು. ಹಿಂದೆ ಯಾರೋ ಒಬ್ಬರು ಒಂದು ಗಾದೆ ಹೇಳುತ್ತಿದ್ದರು. "ವಿನಾಯಕ ಮಾಡು ಎಂದರೆ ವಿನಾಯಕನ ಅಪ್ಪನ್ನ ಮಾಡುತ್ತೇನೆ" ಎನ್ನುವಂತೆ, ಈ ಲೆಜಿಸ್ಲೇಚರ್ ಮತ್ತು ಗವರ್ನಮೆಂಟು ಹೌಸುಗಳನ್ನೂ ಜೊತೆಯಲ್ಲಿಯೇ ಕಟ್ಟುತ್ತೇನೆಂದು ಈ ದೊಡ್ಡ ಕಟ್ಟಡವನ್ನೇನೋ ಕಟ್ಟಿದ್ದಾರೆ. ಆದರೆ ಇಲ್ಲಿ ಇದರ ಕೆಲಸವೇ ಇನ್ನೂ ಪೂರ್ಣವಾಗಿ ಮುಗಿದಿಲ್ಲ. ಕೆಲಸ ಮಾಡುವಾಗ ಸಿಮೆಂಟು ಬರಬೇಕಾಗುತ್ತದೆ, ಮಣ್ಣು ಬರಬೇಕಾಗುತ್ತದೆ. ಹೀಗೆ ಸಾಮಾನು ಸರಂಜಾಮುಗಳು ಬರಬೇಕಾಗುತ್ತದೆ. ಇನ್ನೂ ಮೈನ್‌ಡೋಮ್ ಕೆಲಸ ಪೂರೈಸಬೇಕಾಗಿದೆ. ಮತ್ತು ಈ ಬಿಲ್ಡಿಂಗಿನಲ್ಲಿ ಕೆಲವು ಕಡೆ ಕಾಂಕ್ರೀಟ್ ಆಗಬೇಕು. ಮತ್ತು ಇನ್ನು ಕೆಲವು ಕಡೆ ಗಾರೆ ಕೆಲಸವಾಗಬೇಕು. ಹೀಗಿದೆ, ಇಲ್ಲಿಯ ಸ್ಥಿತಿ.

ಹಳೆಯ ಮೈಸೂರಿನ ಶಾಸನ ಸಭೆಯಲ್ಲಿ ಈ ಕಟ್ಟಡವನ್ನು ಕಟ್ಟಲು ಮೊದಲು 35 ಲಕ್ಷ ರೂಪಾಯಿ ಮಂಜೂರಾಗಿದ್ದು ಅನಂತರ ಒಂದು ಕೋಟಿಯಿಂದ ಒಂದುವರೆ ಕೋಟಿ ವರೆಗೆ ಇದರ ಖರ್ಚು ಬಂದಿದೆ. ಸಾಮಾನ್ಯವಾದ ಕಟ್ಟಡಕ್ಕಿಂತ ಇದರ ಖರ್ಚು ಹೆಚ್ಚಾಗಿದೆ ಎಂಬ ದೃಷ್ಟಿಯಿಂದ ಈಗ ಇನ್ನೂ ಹೆಚ್ಚಿಗೆ ಖರ್ಚಾಗದಂತೆ, ಕೆಲಸವಾದ ಹಾಗೆಲ್ಲ ಅದಕ್ಕೆ ತಕ್ಕ ಅಂದಾಜುಗಳನ್ನು ಮಂಜೂರು ಮಾಡುತ್ತಿರುವುದರಿಂದ ಕೆಲಸ ನಡೆಯಲು ಸ್ವಲ್ಪ ನಿಧಾನವಾಗಿದೆ. ಮತ್ತು ಅಂದಾಜುಗಳು ಜಾಸ್ತಿಯಾಗದಂತೆ ಕ್ರಮ ತೆಗೆದುಕೊಳ್ಳಲಾಗಿದೆ. ಅಲ್ಲದೆ ಈ ಹಿಂದೆ ಇದರ ಸಂಬಂಧವಾಗಿ ನೇಮಕವಾದ ಕಮಿಟಿಯವರು ಇದರ ಬಗ್ಗೆ ವಿಶೇಷವಾಗಿ ಆಕ್ಷೇಪಣೆಗಳನ್ನೆತ್ತಿದ್ದಾರೆ. ಈ ವರದಿಯ ಕಾಪಿಯನ್ನು ಈಗಾಗಲೇ ಎಲ್ಲ ಸದಸ್ಯರಿಗೂ ಒದಗಿಸಲಾಗಿದೆ. ಅಲ್ಲದೆ, ಇದರ ಸಂಬಂಧವಾಗಿ ಕೆಲಸಮಾಡುವ ವಿಷಯದಲ್ಲಿ ಬೇರೆ ಬೇರೆಯಾದ ಪ್ಲಾನುಗಳನ್ನು, ಅಂದಾಜುಗಳನ್ನು ಮೊದಲು ಒಂದುವರೆ ಲಕ್ಷ ರೂಪಾಯಿ ಆಮೇಲೆ ಐದು ಲಕ್ಷ ರೂಪಾಯಿ, ಎಂಟು ಲಕ್ಷ ರೂಪಾಯಿ ಈ ರೀತಿಯಾಗಿ ಬೇರೆ ಬೇರೆಯಾಗಿ ಮಾಡಿ ನಿಧಾನವಾಗಿ ಮಂಜೂರು ಮಾಡುವುದರಿಂದ ಕೆಲಸಗಳನ್ನು ಮುಗಿ

(ಶ್ರೀ ಎಚ್. ಕೆ. ವೀರಣ್ಣಗೌಡ.)

ಸುವುದು ನಿಧಾನವಾಗಿದೆ. ಅಲ್ಲದೆ ಇದರ ಸುತ್ತಮುತ್ತ ಇರುವ ರಸ್ತೆಗಳನ್ನು ಸರಿಪಡಿಸುವ ವಿಚಾರದಲ್ಲಿ ಕಾರ್ಪೊರೇಷನ್ನಿಗೂ ಸರಕಾರಕ್ಕೂ correspondence ನಡೆಯುತ್ತಿತ್ತು. ಮೊದಲು ಈ ರಸ್ತೆಯನ್ನು ಇಲಾಖೆಯವರೇ ಮಾಡಿಸಬೇಕೋ ಇಲ್ಲವೇ ಕಾರ್ಪೊರೇಷನ್ನಿನವರು ಮಾಡಿಸಬೇಕೋ ಎಂಬುದನ್ನು ನಿರ್ಧರಿಸುವುದರಲ್ಲಿ ಸ್ವಲ್ಪ ಕಾಲ ವಿಳಂಬವಾಯಿತು. ಇನ್ನು ಇವುಗಳೆಲ್ಲ ಆದಮೇಲೆ ಇದನ್ನೆಲ್ಲ ಸರಿಯಾಗಿಡಲು ಲಕ್ಷ್ಯ ಕೊಡಬೇಕಾಗಿದೆ. ಅಲ್ಲದೆ ಈ ಕೆಲಸಗಳೆಲ್ಲ ಆಗ ಬೇಕಾದರೆ ಅನೇಕ ಸಾಮಾನುಗಳು ಬರಬೇಕಾಗುತ್ತದೆ. ಅನೇಕ ಲಾರಿಗಳು ಬರಬೇಕಾಗುತ್ತದೆ. ಈ ಕಟ್ಟಡವನ್ನು ಸರಿಯಾಗಿ ಕ್ಲೀನಾಗಿಟ್ಟಿಲ್ಲವೆಂದು ಹೇಳಿದರು. ಇನ್ನೂ ಕೆಲಸವೇ ಪೂರ್ತಿಯಾಗಿ ಮುಗಿದಿಲ್ಲವಾದುದರಿಂದ ಇದರ ಕಡೆ ಈಗ ಲಕ್ಷ್ಯ ಕೊಡುವುದಕ್ಕೆ ಅವಕಾಶವಿಲ್ಲವಾಗಿದೆ. ಆಕಾರಣದಿಂದ ಯಾರೋ ಮಹನೀಯರು ಇಷ್ಟು ಚೆನ್ನಾಗಿ ಕಟ್ಟಿರುವ ಈ ಕಟ್ಟಡವನ್ನು ಸರಿಯಾಗಿ ಇಟ್ಟು ಕೊಳ್ಳುವುದಕ್ಕೆ ಆಗಲಿಲ್ಲ ಎಂಬ ಅನುಮಾನವನ್ನು ನಮ್ಮ ಶ್ರೀ ದುಗ್ಗಪ್ಪನವರು ಇಟ್ಟುಕೊಳ್ಳಬೇಕಾದ ಅವಶ್ಯಕತೆ ಇಲ್ಲವೆಂದು ನಾನು ಹೇಳುತ್ತೇನೆ.

ಇನ್ನು ಕೆಲವು ಸದಸ್ಯರು ಕೆಲವು ಕಡೆ ರಸ್ತೆಗಳಾಗಿಲ್ಲ ಮತ್ತು ಕೆಲವುಕಡೆ ಕೆರೆ ರಿಪೇರಿಗಳಾಗಿಲ್ಲ ಎಂದು ಬೇರೆ ಹೇಳಿದರು. ಅವುಗಳೆಲ್ಲವನ್ನೂ ಪರಿಶೀಲಿಸುತ್ತಿದ್ದೇವೆ. ನಾನು ಮೊದಲೇ ಅರಿಕೆ ಮಾಡಿಕೊಂಡಂತೆ, ಈ ಕೆಲಸಗಳಲ್ಲಿ ಯಾವುದನ್ನು ಮೊದಲು ಮಾಡಬೇಕು ಯಾವುದನ್ನು ನಂತರ ಮಾಡಬೇಕು ಎಂಬುದನ್ನು ಸರಕಾರದವರು ಪ್ರೈಯಾರಿಟಿ ಬೇಸಿಸ್ ಮೇಲೆ. ತೆಗೆದು ಕೊಳ್ಳುತ್ತಾರೆ. ಅದಕ್ಕಾಗಿ ಹಣ ಬೇಕು, ಸರ್ಕಾರದವರು ನಮ್ಮ ಇಲಾಖೆಗೆ ಎಷ್ಟು ಹಣವನ್ನು ಕೊಡುತ್ತಾರೆಯೋ ಅವುಗಳೆಲ್ಲವನ್ನು ಪೂರ್ಣವಾಗಿ ಉಪಯೋಗಿಸಿಕೊಂಡು ಈ ಕೆಲಸಗಳನ್ನು ಮಾಡಿಸಬೇಕಾಗಿದೆ. ಈ ರೀತಿಯಾಗಿ ಲೆಕ್ಕಚಾರ ಮಾಡಿ ಎಷ್ಟೆಷ್ಟು ಹಣವನ್ನು ಒದಗಿಸುತ್ತಾರೆಯೋ ಅದಕ್ಕೆ ತಕ್ಕ ಹಾಗೆ ಜಾಗ್ರತೆಯಿಂದ ಕೆಲಸಗಳನ್ನು ಮಾಡಿ ಮುಗಿಸಲು ಪ್ರಯತ್ನಿಸುತ್ತೇವೆ. ಎರಡು ದಿನಗಳಲ್ಲಿ ಆಗುವ ಕೆಲಸವನ್ನು ಬೇಕಾದರೆ 24 ಗಂಟೆಯೊಳಗೆ ಬೇಕಾದರೂ ಮಾಡಿ ಮುಗಿಸುವುದಕ್ಕೆ ಪ್ರಯತ್ನಿಸುತ್ತೇವೆ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ವೈ. ಪಾಟೀಲ್ (ಸಿಂದಿಗಿ).—ಒಂದು ವಿಷಯವನ್ನು ಇಲ್ಲಿ ಕೇಳಬೇಕಾಗಿದೆ. ತಮ್ಮ ಭಾಷಣದಲ್ಲಿ ವಿಷಯಹೇಳುವಾಗ, ನನ್ನ ಭಾಷಣದಲ್ಲಿ ಒಂದು ಡಿವಿಜನ್ ಮಾಡಬೇಕೆಂದು ಹೇಳಿದೆನೆಂದು ಹೇಳಿದಿರಿ. ಅದು Irrigation ಬಗ್ಗೆ ಹೇಳಿದೆ. ಈಗಾಗಲೇ Irrigation Division ಒಂದಿದೆ. ಆದರೆ ಈ ಬಿಜಾಪುರದ ಸುತ್ತಮುತ್ತಲ ಪ್ರದೇಶದಲ್ಲಿ ದುಷ್ಕಾಲದಿಂದ ಅನೇಕ ಕೆಲಸಗಳು ಆಗಬೇಕಾದುದು ಅಗತ್ಯವಾಗಿದೆ. ಆದರಂತೆ ಆಗುತ್ತಿಲ್ಲ. ಅಲ್ಲಿ ಈಗಾಗಲೇ ಒಂದು ಡಿವಿಜನ್ನಿದೆ, ಆದರೆ ಇದರಿಂದೇನೂ ಅಷ್ಟು ಕೆಲಸವಾಗುತ್ತಿಲ್ಲ. ಈ ಕಡೆ ಹೆಚ್ಚಿನ ಗಮನ ಕೊಟ್ಟು ಈ ನೀರಾವರಿ ಕೆಲಸಗಳನ್ನು ಮಾಡಿಸಿ ಜನಗಳಿಗೆ ಅನುಕೂಲವಾಗುವಂತೆ ಮಾಡಬೇಕಾದುದು ಅಗತ್ಯ.

ಶ್ರೀ ಹೆಚ್. ಕೆ. ವೀರಣ್ಣಗೌಡ.—ಅವರು ಹೇಳಿದಂತೆ Irrigation Division ಇದೆ, ಇಲ್ಲಿ ಕ್ಷಾಮ ನಿವಾರಣೆ ಕೆಲಸವಾಗಬೇಕೆಂದು ಹೇಳಿದ್ದಾರೆ, ಒಂದು ಸ್ಪೆಷಲ್ ಡಿವಿಜನ್ನನ್ನು ತೆರೆಯಬೇಕೆಂದು Chief Engineer ಅವರು ಶಿಫಾರಸುಮಾಡಿ, ಅದಕ್ಕೆ ಶಿಬ್ಬಂದಿ ಅಗತ್ಯವಿದೆ ಎಂದು ತಿಳಿಸಿದರೆ ಸರಕಾರ ಆ ಡಿವಿಜನನ್ನು ನೇಮಿಸುವುದರಲ್ಲಿ ಏನೂ ಸಂದೇಹವಿಲ್ಲ. ಅಷ್ಟು ಭರವಸೆ ಕೊಡಬಲ್ಲೆ.

6 P.M.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಮಾನ್ಯ ಮಂತ್ರಿಗಳು ಮಾತನಾಡುವಾಗ ಹೇಳಿದರು, ಶೇಂದಿ, ಷರಾಬು ಮುಂತಾದುವನ್ನು ವಿರೋಧ ಪಕ್ಷದವರು ಹಂಚುತ್ತಿರುವುದನ್ನು ನೋಡಿದ್ದೇವೆ ಎಂದು. ಹಾಗೆ ಅವರು ನೋಡಿದ್ದಮೇಲೆ ಪೋಲೀಸಿನವರಿಗೂ ಗೊತ್ತಾಗಿರಲೇ ಬೇಕು. ಹಾಗಾದರೆ ಆ ಸಂಬಂಧದಲ್ಲಿ ಕೇಸುಗಳೇನಾದರೂ ದಾಖಲಾಗಿವೆಯೇ ಅವೇನಾದರೂ ರುಜುವಾತಾಗಿವೆಯೇ ಎಂಬುದನ್ನು ತಿಳಿಸಬೇಕು. ಹಾಗಿಲ್ಲದೆ, ವಿರೋಧ ಪಕ್ಷದಮೇಲೆ ಆಪೇಪಣೆ ಮಾಡಬೇಕೆಂಬ ಉದ್ದೇಶದಿಂದೇನಾದರೂ ಈ ರೀತಿ ಹೇಳಿದರೆ ಎಂದು ನಾನು ಕೇಳಬಯಸುತ್ತೇನೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಅದು ಜಿಜ್ಞಾಸೆಯ ವಿಷಯ. ಆ ಬಗ್ಗೆ ತನಿಖೆ ನಡೆಯುತ್ತಿದೆ.

Sri V. P. DEENADAYALU NAIDU (Cubbonpet).—One clarification. My point was whether any effort has been made to incorporate the Cauvery scheme from which water will ultimately have to be brought to Bangalore. Has that been incorporated in the Second Five-Year Plan? What is the initiative taken by the Government ?

ಶ್ರೀ ಎಚ್. ಕೆ. ವೀರಣ್ಣಗೌಡ.—ಇದಕ್ಕಾಗಿಯೇ ಒಂದು ಸಬ್‌ಡಿವಿಜನ್ ಏರ್ಪಾಡಾಗಿ ಸರ್ವೆ ಕೆಲಸ ಮಾಡಿಸುತ್ತಿದೆ. ಇಷ್ಟೇ ಹೊರತು ಈ ಬಗ್ಗೆ ಇನ್ನೇನೂ ಹಣ ಒದಗಿಸಿಲ್ಲ. ಈಗ ಸರ್ವೆ ಕೆಲಸ ಮುಗಿಸಿ ಮೊದಲನೆಯ ಹಂತದಲ್ಲಿ ಏನೇನು ಕೆಲಸವಾಗಬೇಕೋ ಅದನ್ನು ಮಾಡಿ ಮುಗಿಸಿದರೆ, ಆ ಮೇಲೆ ಬೆಂಗಳೂರಿನ ಪರಿಸ್ಥಿತಿ ನೋಡಿಕೊಂಡು ಮುಂದಿನ ಕಾರ್ಯಕ್ರಮವನ್ನು ಕೈಕೊಳ್ಳಬಹುದು. ಆದ್ದರಿಂದ ಈರೀತಿ ಸರ್ವೆಕೆಲಸ ನಡೆಸುತ್ತಿದ್ದೇವೆ.

*ಶ್ರೀ ಸಿ. ಎಂ. ಪೂಣಚ್ಚ (ಗೃಹ, ಮತ್ತು ಕೈಗಾರಿಕಾ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಮೊಟ್ಟ ಮೊದಲು ನಾನು ಈ ಬಡ್ಜೆಟ್ಟನ್ನು ಕುರಿತು ನನ್ನ ಕೆಲವು ಅಭಿಪ್ರಾಯಗಳನ್ನು ಉತ್ತರ ರೂಪವಾಗಿ ಹೇಳುವುದಕ್ಕೆ ಮುಂಚಿತವಾಗಿ, ನನ್ನ ಮಿತ್ರರಾದ ಶ್ರೀಮಾನ್ ಮರಿಯಪ್ಪನವರನ್ನು ನಾನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಬಡ್ಜೆಟ್ ತಯಾರಿಕೆಯ ವಿಷಯದಲ್ಲಿ ನನಗಿರುವ ಚಿಕ್ಕ ಅನುಭವದಲ್ಲಿ, ಕೊಡಗಿನಂಥ ಚಿಕ್ಕ ಸಂಸ್ಥಾನಕ್ಕೆ ಒಂದು ಬಡ್ಜೆಟ್ ತಯಾರಿಸುವುದರಲ್ಲಿ ಎಷ್ಟು ಕಷ್ಟವಿದೆಯೆಂಬುದು, ಎಷ್ಟು ಪರಿಶ್ರಮ ಪಡಬೇಕೆಂಬುದು ನನಗೆ ಗೊತ್ತು; ಎಲ್ಲವನ್ನೂ ಸಮನ್ವಯಗೊಳಿಸಿ, ದೇಶದ ಪ್ರಗತಿಗನುಕೂಲವಾದ ರೀತಿಯಲ್ಲಿ ಎಲ್ಲರಿಗೂ ಸಮಾಧಾನಕರವಾದ ರೀತಿಯಲ್ಲಿ ಮಾಡಬೇಕಾದರೆ ಅಷ್ಟು ಸುಲಭವಲ್ಲವೆಂಬುದರ ಅರಿವು ನನಗಿದೆ. ಅದೂ ಆದಾಯ ಹೆಚ್ಚು ಖರ್ಚು ಕಡಮೆಯಿದ್ದಂತಹ ಒಂದು ಚಿಕ್ಕ ಸಂಸ್ಥಾನದಲ್ಲಿ. ಹೀಗಿರುವಾಗ ಇಲ್ಲಿ ಶ್ರೀಮಾನ್ ಮರಿಯಪ್ಪನವರು ವಿಶಾಲ ಸಂಸ್ಥಾನವಾದ . . . .

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ (ಚಿಕ್ಕನಾಯಕನ ಹಳ್ಳಿ).—ಹಾಗಾದರೆ ಅಮೆರಿಕಾ ದೇಶದ ಬಡ್ಜೆಟ್ ಮಾಡುವುದು ಎಷ್ಟು ಕಷ್ಟ ?

ಶ್ರೀ ಸಿ. ಎಂ. ಪೂಣಚ್ಚ.—ಬೇಕಾದರೆ ಅದನ್ನೂ ಹೇಳುತ್ತೇನೆ. ಅಂತು, ಈ ವಿಶಾಲ ಮೈಸೂರಿನ ಬಡ್ಜೆಟ್ಟನ್ನು ತಯಾರು ಮಾಡುವುದರಲ್ಲಿ ಇವರು ಎಷ್ಟು ಶ್ರಮ ತೆಗೆದುಕೊಂಡರು, ಎಷ್ಟು ಕಷ್ಟ ವಹಿಸಬೇಕಾಯಿತು ಇದನ್ನು ಪ್ರತಿಯೊಬ್ಬರಿಗೂ ಸಮಾಧಾನಕರವಾದ ರೀತಿಯಲ್ಲಿ ಮಾಡುವುದಕ್ಕೆ ಎಂಬುದು ನನಗೆ ಗೊತ್ತು. ಅವರು ಹೆಚ್ಚಿನ ಪ್ರತಿಭೆಯನ್ನು ತೋರ್ಪಡಿಸಿ, ಹೆಚ್ಚಿನ ವಿದ್ವತ್ತನ್ನು ಉಪಯೋಗಿಸಿ ಈ ಬಡ್ಜೆಟ್ಟನ್ನು ತಯಾರು ಮಾಡಿರುವುದಕ್ಕಾಗಿ ನಾನು ಬಹಳ ಸಂತೋಷಪಡುತ್ತೇನೆ. ಬಡ್ಜೆಟ್ಟನ್ನು ತಯಾರು ಮಾಡಿದಮೇಲೆ ಅದನ್ನು ಟೀಕೆ ಮಾಡುವುದು ಅಷ್ಟೊಂದು ಕಷ್ಟವಾದ ಕೆಲಸವಲ್ಲ. ಅದರಲ್ಲೂ ಇದು ಖೋತಾ ಬಡ್ಜೆಟ್ ಆಗಿರುವಾಗ . . . .

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಟೀಕೆ ಮಾಡುವುದು ಅಷ್ಟು ಕಷ್ಟವಾದ ಕೆಲಸವಲ್ಲವೆಂದು ಹೇಳಿದರು. ಅವರಿಗೆ ಬಡ್ಜೆಟ್ ತಯಾರಿಸುವುದು ಅಷ್ಟೊಂದು ಕಷ್ಟವಾದರೆ ನಮಗೆ ಬಿಟ್ಟುಬಿಡಲಿ, ನಾವೇ ಮಾಡುತ್ತೇವೆ.

ಶ್ರೀ ಸಿ. ಎಂ. ಪೂಣಚ್ಚ.—ಅಧ್ಯಕ್ಷರು ಅವರಿಗೆ ಜವಾಬು ಕೊಡುವುದಕ್ಕೆ ಅಪ್ಪಣೆ ಕೊಟ್ಟರೆ ಇಷ್ಟು ಮಾತ್ರ ಹೇಳುತ್ತೇನೆ : ತಮಗೆ ಜವಾಬ್ದಾರಿ ವಹಿಸಿದ್ದೇ ಆದರೆ 'ಸದಾರಮೆ ನಾಟಕ' ಆಗುತ್ತದೆ ಅಷ್ಟೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ನನ್ನ point of order ಸ್ವಾಮಿ. ನಮಗೆ ಜವಾಬ್ದಾರಿ ವಹಿಸಿದರೆ 'ಸದಾರಮೆ ನಾಟಕವಾದೀತು' ಎಂದು ಹೇಳುವುದು ಸರಿಯಲ್ಲ. ಸದಾರಮೆ ನಾಟಕದಲ್ಲಿ ಕಳ್ಳರೂ ಕೂಡ ಪಾತ್ರಧಾರಿಗಳಾಗಿರುತ್ತಾರೆ. ಅದು ನಮಗೂ ಅನ್ವಯವಾಗುತ್ತದೆ. ಆದ್ದರಿಂದ ವಿರೋಧ ಪಕ್ಷದವರನ್ನು ಸದಾರಮೆ ನಾಟಕದ ಪಾತ್ರಗಳಿಗೆ ಹೋಲಿಸುವುದು ಪಾರ್ಲಿಮೆಂಟರಿಯೇ ? ಅದು ಸರಿಯಾದ ಪದವೇ ? ನಮಗೆ ಅವರು ಯಾವಾಗಲೂ ಕೊಟ್ಟು ನಮ್ಮಿಂದ ಕೈಲಾಗಲಿಲ್ಲವೆಂದೆನ್ನಿಸಿಕೊಂಡಿಲ್ಲ. ರಾಜು ಮಾತಿಲ್ಲದೆ ಈ ರೀತಿಯ ಪದವನ್ನು ಆರೋಪಣೆ ಮಾಡುವುದು ಸರಿಯೇ ಎಂದು ಕೇಳುತ್ತೇನೆ.

ಅಧ್ಯಕ್ಷರು.—'ಸದಾರಮೆ ನಾಟಕ' ಎಂಬುದು ಪಾರ್ಲಿಮೆಂಟರಿ ಹೌದೇ ಅಲ್ಲವೇ ಎಂದು ತಾವೀಗ ಪ್ರಶ್ನಿಸಿದ್ದೀರಿ . . . .

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಆ ಪದದ ಅರ್ಥವನ್ನು ವಿರೋಧ ಪಕ್ಷಕ್ಕೆ ಅನ್ವಯಿಸುವುದು ಸರಿಯೇ ?

ಅಧ್ಯಕ್ಷರು.—'ಸದಾರಮೆ ನಾಟಕ' ಎಂಬ ಶಬ್ದ unparliamentary ಯೇನೂ ಅಲ್ಲ. ಆದ್ದರಿಂದ ಅದನ್ನು ಅನ್ವಯಿಸುವುದರಲ್ಲಿ ಬಿ. ಕೆ. ಪುಟ್ಟರಾಮಯ್ಯನವರಿಗೆ ಅನ್ವಯಿಸಿದರೆ unparliamentary ಯಾಗುತ್ತದೆಯೇ, ವಿರೋಧ ಪಕ್ಷದವರಿಗೆ ಅನ್ವಯಿಸಿದರೆ ಆಗುವುದಿಲ್ಲವೇ ಎಂದರೆ, ಒಬ್ಬರಿಗೆ unparliamentary ಯಾಗುವುದು ಎಲ್ಲರಿಗೂ unparliamentary ಯಾಗಿಯೇ ಆಗುತ್ತದೆ. ಒಬ್ಬರಿಗಾದರೆ ಆಗುತ್ತದೆ, ಇನ್ನೊಬ್ಬರಿಗಾದರೆ ಆಗುವುದಿಲ್ಲವೆಂದಿಲ್ಲ. ಇಲ್ಲಿ "ಸದಾರಮೆ ನಾಟಕ" ಎಂದು ಹೇಳುವಾಗ ಅವರ ಅಭಿಪ್ರಾಯವನ್ನು ಹೇಳಿದ್ದಾರೆ. ತಾವಿದನ್ನು ಅನುಮೋದಿಸಬಹುದು ಅಥವಾ ಅನುಮೋದಿಸದಿರಬಹುದು. ಅದು ಮುಖ್ಯವಲ್ಲ. ಈಗ ಪ್ರಶ್ನೆಯಲ್ಲಿರುವುದು 'ಸದಾರಮೆ ನಾಟಕ' ಎನ್ನುವುದು ಪಾರ್ಲಿಮೆಂಟರಿಯೇ ಎಂಬುದು. ಅದು ಸಂಪೂರ್ಣವಾಗಿ, ಸ್ವಚ್ಛವಾಗಿ ಪಾರ್ಲಿಮೆಂಟರಿ ಆಗಿದೆಯೆಂದು ನಾನು ಹೇಳುತ್ತೇನೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಅವರೀಗ ಸದಾರಮೆ ನಾಟಕ ಆಡುತ್ತಿದ್ದಾರೆಯೇ ?

ಅಧ್ಯಕ್ಷರು.—ಏನಾದರೂ ತಾವು ಅಂದುಕೊಳ್ಳಬಹುದು.

Sri M. C. NARASIMHAN.—When an insinuation cannot be made against a Minister, can the Minister make an insinuation against an Opposition member or any other member ?

Mr. SPEAKER.—It is not an insinuation. I cannot agree in holding the view that it is an insinuation.

Sri M. C. NARASIMHAN.—If the Minister for Industries does not mean the reference as an insinuation, then there is no point.

Mr. SPEAKER.—That is a different matter altogether.

ಶ್ರೀ ಸಿ. ಎಂ. ಪೂಣಚ್ಚ.—ಆದ್ದರಿಂದ ನಾನು ಹೇಳಿದಂತೆ, ಈ ವಿಶಾಲ ಮೈಸೂರಿನ ಬಡ್ಜೆಟ್ಟನ್ನು ತಯಾರುಮಾಡುವಂಥ ಕೆಲಸ ಬಹಳ ಜವಾಬ್ದಾರಿಯುತವಾದುದು. ಮತ್ತು ಬಹಳ ಕಷ್ಟಕರವಾದದ್ದು.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಬಿಟ್ಟುಬಿಡಿ.

ಶ್ರೀ ಸಿ. ಎಂ. ಪೂಣಚ್ಚ.—ನಾನು ತಮ್ಮ ಮಾತಿಗೆ ತಕ್ಕ ಉತ್ತರ ಕೊಡಬಲ್ಲೆ. ಅದಕ್ಕೆಂದೂ ಹಿಂಜರಿದ ಮನುಷ್ಯನೇ ಅಲ್ಲ. ಆದರೆ ಸಭೆಯ ಗೌರವವೆಂಬುದಿದೆ. ಅಧ್ಯಕ್ಷರ ಆಜ್ಞೆಯನ್ನು ಪರಿಪಾಲಿಸಬೇಕಾಗಿದೆ.

ಅಧ್ಯಕ್ಷರು.—ಪದೇ ಪದೇ interruption ಮಾಡುವುದು ಸರಿಯಲ್ಲವೆಂದು ನಾನಾಗಲೇ ಹೇಳಿದ್ದೇನೆ. ಹೀಗೆಲ್ಲಾ ಕೈ ಮಾಡುವುದು ಸಭೆಯ ನಡೆವಳಿಕೆಗೆ ಒಳ್ಳೆಯದಲ್ಲ. ನೀವು ಒಳ್ಳೆಯ ಪಾರ್ಲಿಮೆಂಟೇರಿಯನ್ ಆಗಿ ಗಣ್ಯಮನುಷ್ಯರಾಗಿದ್ದೀರಿ. ನೀವೂ ನಾಳೆ ದಿವಸ ಸದಾರಮೆ ನಾಟಕವನ್ನು ಅವರ ಕೊರಳಿಗೇ ಕಟ್ಟಿ, ನಾನು ಬೇಡವೆನ್ನುವುದಿಲ್ಲ.

ಶ್ರೀ ಸಿ. ಎಂ. ಪೂಣಚ್ಚ.—ನಾನು ಈ ವಿಶಾಲ ಮೈಸೂರಿನ ಬಡ್ಜೆಟ್ಟನ್ನು ತಯಾರು ಮಾಡುವುದು ಎಷ್ಟು ಕಷ್ಟಕರವಾಗಿತ್ತು, ಅದನ್ನು ಇಷ್ಟು ಸಮಂಜಸವಾಗಿ ತಯಾರುಮಾಡಿದ್ದಕ್ಕಾಗಿ ನನ್ನ ಮಿತ್ರರನ್ನು ವಂದಿಸುತ್ತಿದ್ದೆ. ಏಕೆ ಇದು ಅಷ್ಟು ಕಷ್ಟವಾಗಿದೆಯೆಂಬುದನ್ನು ನಾನು ಸಭೆಗೆ ಸ್ವಲ್ಪ ಮಟ್ಟಿಗೆ ವಿವರಿಸಬೇಕೆಂದಿದ್ದೇನೆ. ವಿಶಾಲ ಮೈಸೂರು ರಾಜ್ಯವಾದನಂತರ ಒಂದೊಂದೂ ಒಂದೊಂದು ರೀತಿಯಲ್ಲಿರುವಂಥ ಐದು ಪ್ರದೇಶಗಳಿಗೂ ಅನ್ವಯಿಸುವಂಥ ಒಂದು ಬಡ್ಜೆಟ್ಟನ್ನು ತಯಾರಿಸಬೇಕೆಂದು ಹೊರಟಾಗ ಅನೇಕ ಪ್ರದೇಶಗಳ ಬಗ್ಗೆ ಅನೇಕ ಸಮಸ್ಯೆಗಳು ಉದ್ಭವಿಸಿದವು. ಆದರೆ ಆ ಎಲ್ಲ ಸಮಸ್ಯೆಗಳನ್ನೂ ಬಗೆಹರಿಸಿ ಎಲ್ಲ ಭಾಗಗಳಿಗೂ ಒಂದೇ ರೀತಿಯಾಗಿ ಎಲ್ಲರಿಗೂ ಸಮರ್ಪಕವಾಗಿರತಕ್ಕ ರೀತಿಯಲ್ಲಿ ಒಂದು ಬಡ್ಜೆಟ್ಟನ್ನು ತಯಾರಿಸಿದ್ದಾರೆ. ಇಂಥ ಒಂದು ಸನ್ನಿವೇಶದಲ್ಲಿ ಹೀಗೆ ಒಂದು ಬಡ್ಜೆಟ್ಟನ್ನು ತಯಾರಿಸತಕ್ಕಂಥ ಕೆಲಸವಾದರೂ ಬಹಳ ಹಿರಿದಾದಂಥ ಕೆಲಸ.

Sri Y. VEERAPPA.—Perhaps the general discussion on the Budget is closed.

Sri C. M. POONACHA.—I will not yield to the Hon'ble Member. I never interrupted any Hon'ble Member when he had his say.

Mr. SPEAKER.—Sri Veerappa sometimes does, but not often. But he is very reasonable.

Sri C. M. POONACHA.—I also think that way.

ಅನಂತರ ಐದು ಪ್ರದೇಶಗಳ ಖರ್ಚಿನ ಪಟ್ಟಿಯು ಒಂದೊಂದು ಒಂದೊಂದು ವಿಧವಾಗಿದ್ದರೂ ಅವುಗಳನ್ನೆಲ್ಲ ಒಂದು ರೀತಿಯಲ್ಲಿ ಸಮನ್ವಯಗೊಳಿಸಿ ಈ ಐದು ಪ್ರದೇಶಗಳಿಗೂ ಒಂದೇ ರೀತಿಯ ಒಂದೇ ಬಡ್ಜೆಟ್ಟನ್ನು ತಯಾರಿಸತಕ್ಕಂಥಾದ್ದು ಬಹಳ ವಿಶೇಷವಾದಂಥ ಕೆಲಸ. ಈ ಕಾರ್ಯವನ್ನು ಇಷ್ಟು ಸುಗಮವಾಗಿ ನೆರವೇರಿಸಬೇಕಾಗಿದ್ದರೆ ನಮ್ಮ ಮಾನ್ಯ ಆರ್ಥಿಕ ಮಂತ್ರಿಗಳು ಬಹಳ ಕಷ್ಟಗಳನ್ನು ವಹಿಸಿದ್ದಾರೆ. ಇವರ ಇಲಾಖೆಯವರೂ ಕೂಡ ಬಹಳ ಶ್ರಮವಹಿಸಿ ಕೆಲಸ ಮಾಡಿದ್ದಾರೆಂಬುದನ್ನು ತಮ್ಮೆಲ್ಲರ ಅವಗಾಹನೆಗೆ ತರಲು ನಾನು ಇಷ್ಟಪಡುತ್ತೇನೆ. ಆದರೆ ಈ ಬಡ್ಜೆಟ್ಟನ್ನು ಪರಿಶೀಲನೆಮಾಡುವ ಕಾಲದಲ್ಲಿ ಇದರ ಹಿನ್ನೆಲೆಯೇನಿದೆ ಎನ್ನುವುದನ್ನು ತಾವು ಆಲೋಚನೆ ಮಾಡಬೇಕಾದದ್ದು ಆವಶ್ಯಕ. ಈ ಬಡ್ಜೆಟ್ ತಯಾರಿಕೆಯಲ್ಲಿ ಕೇವಲ ನಮಗೆ ಬರತಕ್ಕ ಆದಾಯಕ್ಕೆ ತಕ್ಕ ಹಾಗೆ ಖರ್ಚುಗಳೆಷ್ಟಿರಬೇಕೋ ಅಷ್ಟಕ್ಕೆ ಸರಿಯಾದಂಥ ಒಂದು ಬಡ್ಜೆಟ್ಟನ್ನುತಯಾರಿಸುವ ಏರ್ಪಾಡು ಎಷ್ಟೋ ಅಷ್ಟನ್ನೇ ಇದರಲ್ಲಿ ಮಾಡಿಲ್ಲ. ಆದರೆ ಈ ನಮ್ಮ ಬಡ್ಜೆಟ್ಟಿಗೆ ಒಂದು ಹಿನ್ನೆಲೆಯಿದೆ. ನಮ್ಮ ರಾಜ್ಯ ನೂತನವಾಗಿ ರಚಿಸಲ್ಪಟ್ಟ ರಾಜ್ಯವಾದರೂ ನಾವು ಬಗೆಹರಿಸಬೇಕಾದಂಥ ಅನೇಕ ಬಹು ಮುಖ್ಯ ಸಮಸ್ಯೆಗಳಿದ್ದವು. ಅ ಸಮಸ್ಯೆಗಳನ್ನೆಲ್ಲ ಸರಿಪಡಿಸದೆ ನಾವು ಸುಗಮ ರೀತಿಯಾದ ಒಂದು ಆಡಳಿತವನ್ನು ಹೇಗೆ ನಡೆಸಬೇಕೆಂಬುದೇ ನಮಗೊಂದು ದೊಡ್ಡ ಸಮಸ್ಯೆಯಾಗಿದ್ದಂಥ ವೇಳೆಯಲ್ಲಿ ನಾವು ಮಹಾಚುನಾವಣೆಗಳನ್ನು ನಡೆಸಬೇಕಾಗಿ ಬಂದಿತು. ಆ ಚುನಾವಣೆಗಳನ್ನೂ ಸಹ ನಾವು ಯಶಸ್ವಿಯಾಗಿ ನಡೆಸಿದೆವು. ಅನಂತರ ಈ ಹೊಸ ಸಭೆಯನ್ನೂ ಸಹ ನಾವು ಕರೆದಿದ್ದೇವೆ. ಇಂಥ ಒಂದು ಹೊಸದಾಗಿ ಸ್ಥಾಪಿಸಲ್ಪಟ್ಟ ವಿಶಾಲ ಮೈಸೂರಿನ ಈ ನೂತನ ಸಭೆಯಲ್ಲಿ ನೂತನವಾಗಿ ರಚಿಸಿರುವ ಬಡ್ಜೆಟ್ಟನ್ನು ನೂತನ ಸದಸ್ಯರಾದ ತಾವು ವಿಚಾರಮಾಡುವ ಕಾಲದಲ್ಲಿ ಕೇವಲ ಈ ಹಿಂದೆ ದೇಶದಲ್ಲಿ ನಡೆದ ಮಹಾಚುನಾವಣೆಗಳ ಕಾಲದಲ್ಲಿ ಹೇಗೆ ಹೋರಾಡಿದೆವೋ ಅದೇ ಒಂದು ಮನೋವೃತ್ತಿಯನ್ನಿಟ್ಟುಕೊಂಡು ಈ ಸಭೆಯ ಮುಂದಿರತಕ್ಕ ಬಡ್ಜೆಟ್ಟನ್ನು ಚರ್ಚೆಮಾಡುತ್ತಾ ಹೋಗುವುದು ಅಷ್ಟು ಸಮರ್ಪಕವಾದದ್ದೂ ಅಲ್ಲ ಮತ್ತು ಸರಿಯಾದದ್ದೂ ಅಲ್ಲ ಎಂದು ತಿಳಿಸಿದರೆ ಸಾಕು. ಆದರೆ ಕೆಲವು ಸದಸ್ಯರು ಚರ್ಚೆ ಮಾಡುತ್ತ ಈ ಬಡ್ಜೆಟ್ಟನ್ನು ಖೋತಾ ಬಡ್ಜೆಟ್ ಎಂದರು ; ಇದು ದೇಶಾಭ್ಯುದಯಕ್ಕೆ ಸಹಕಾರ ನೀಡಲಾರದೆಂಬ ಅಭಿಪ್ರಾಯ ಕೂಡ ಅವರಿಂದ ಬಂತು. ಆದರೆ ನನ್ನ ಮಾನ್ಯ ಮಿತ್ರರಾದಂಥ ಶ್ರೀ ಟಿ. ಮರಿಯಪ್ಪನವರು ಮನಸ್ಸುಮಾಡಿದ್ದರೆ ಇಷ್ಟೆಲ್ಲ ಕಷ್ಟಗಳ ಗೋಜಿಗೇ ಹೋಗದಂತೆ ಅವರು ಬಹಳ ಸುಲಭದಲ್ಲೇ ಒಂದು ಸಮರ್ಪಕವಾಗಿರುವಂಥ ಬಜ್ಜೆಟ್ಟನ್ನು ತಯಾರಿಸಿ ತಮ್ಮೆಲ್ಲರ ಮುಂದೆ ಇಡಬಹುದಾಗಿತ್ತು. ಈ ವಿಚಾರವನ್ನು ಬಹಳ ಚೆನ್ನಾಗಿ ಶ್ರೀಮತಿ ರತ್ನಮ್ಮನವರು ತಮ್ಮ ಭಾಷಣದಲ್ಲಿ ತಿಳಿಸಿದ್ದಾರೆ. ಅದರಂತೆ ನಮ್ಮ ಆರ್ಥಿಕ ಸಚಿವರು ಒಂದು ಸಮತೂಕದ ಬಡ್ಜೆಟ್ಟನ್ನು ತಯಾರಿಸುವುದಾಗಿದ್ದಾರೆ. ಅವರು ಬಹಳ ಸುಲಭದಲ್ಲೇ ಅತಿಜಾಗ್ರತೆಯಾಗಿ ಅಂಥ ಒಂದು ಬಡ್ಜೆಟನ್ನು ತಯಾರಿಸಿ ತಮ್ಮ ಮುಂದಿಡಬಹುದಾಗಿತ್ತು. ಅಷ್ಟು ಕೆಲಸವನ್ನು ಅವರು ಮಾಡಿಬಿಟ್ಟರೆ ಅಲ್ಲಿಗೆ ಈ ಸಭೆಯ ಮತ್ತು ಸರ್ಕಾರದ ಮೇಲೆ ಬಿದ್ದಿರತಕ್ಕ ದೇಶದ ಹೊಣಗಾರಿಕೆ ಏನಿದೆಯೋ ಅದು ಪೂರೈಸಿದಂತಾಗಲಿಲ್ಲ ; ಎಂಬ ಅಂಥ ಒಂದು ವಿಶಾಲದೃಷ್ಟಿಯನ್ನಿಟ್ಟುಕೊಂಡು ಒಂದು ಧೃಡಮನಸ್ಸಿನಿಂದ ನಿಶ್ಚಲ ಮನಸ್ಸಿನಿಂದ ಮನೋದಾರ್ಢ್ಯದಿಂದ ಸರ್ಕಾರದವರು ಈ ಬಡ್ಜೆಟ್ಟನ್ನು ತಯಾರಿಸಿದ್ದಾರೆ. ಆದುದರಿಂದ ಕೆಲವು ಮಾನ್ಯ ಸದಸ್ಯರು ಉಪಯೋಗಿಸಿರುವಂಥ ಆ ಖೋತಾ ಬಡ್ಜೆಟ್ ಎಂಬ ಪದಗಳು ಇದಕ್ಕೆ ಸಲ್ಲದು. ತುಂಬ ಜವಾಬ್ದಾರಿಯಿಂದ ಮತ್ತು ದೇಶದಲ್ಲಿರತಕ್ಕ ಸಾರ್ವಜನಿಕರಿಗೆಲ್ಲ ಒಪ್ಪಿತವಾಗತಕ್ಕ ರೀತಿಯಲ್ಲಿ ಏನೇನು ಕೆಲಸಕಾರ್ಯಗಳಾಗಬೇಕೋ ಆ ಕೆಲಸಕಾರ್ಯಗಳಾಗತಕ್ಕಂಥ ರೀತಿಯಲ್ಲಿ ಈ ಬಡ್ಜೆಟ್ಟನ್ನು ತಯಾರಿಸಲಾಗಿದೆ. ಇಂಥ ಒಂದು ಬಡ್ಜೆಟ್ಟನ್ನು ಇಂಥ ಸನ್ನಿವೇಶದಲ್ಲಿ ಇಷ್ಟು ಅನುಕೂಲವಾಗಿ ತಯಾರಿಸಿರುವುದರ ಬಗ್ಗೆ ನಮ್ಮ ಆರ್ಥಿಕ ಸಚಿವರಲ್ಲಿರತಕ್ಕ ರಾಜಕೀಯ ನೈಪುಣ್ಯತೆ ಮತ್ತು ಅವರಲ್ಲಿರತಕ್ಕ ಒಂದು ಹಿರಿತನಗಳನ್ನು ಇದು ಎತ್ತಿ ತೋರಿಸುತ್ತಿದೆ. ಇದರಲ್ಲಿ ಯಾವ ಅಂಜುಬುರುಕತನವೂ ಇಲ್ಲ. ಆದರೆ ವಿರೋಧ ಮಾಡಲೇಬೇಕೆಂಬ ಮನಃಪ್ರವೃತ್ತಿಯಿಂದ ಹೇಳುವುದಾದರೆ ತಾವು ಏನುಬೇಕಾದರೂ ಹೇಳಬಹುದು.

ಮತ್ತೆ ಕೆಲವು ಸದಸ್ಯರು ಭಾಷಣ ಮಾಡುತ್ತ ಉದ್ಯೋಗಸ್ಥರಿಗೆ ಎಂದರೆ ನೌಕರ ಮಾನೇರಿಗೆ ಸಂಬಳ ಸಾರಿಗೆಗಳನ್ನು ಹೆಚ್ಚಿಸಿದ್ದರಿಂದ ಖರ್ಚುವೆಚ್ಚಗಳು ಜಾಸ್ತಿಯಾಗಿ ಖೋತಾ ಬಡ್ಜೆಟ್ ಆಗಲು ಕಾರಣವಾಯಿತೆಂದು ಹೇಳಿದ್ದಾರೆ. ಆದರೆ ಈ ಅಭಿಪ್ರಾಯವನ್ನು ನಾವು ಸ್ವಲ್ಪ ಪರಿಶೀಲನೆ ಮಾಡಿ ನೋಡುವುದಾದರೆ ಒಂದು ಖಾಸಗೀ ಕಂಪೆನಿಯ ಆದಾಯ ವೆಚ್ಚಗಳ ಲೆಕ್ಕ ಪತ್ರಗಳನ್ನು ಆಡಿಟ್ ಮಾಡುವ ರೀತಿಯಲ್ಲಿ ನಾವು ಈ ಬಡ್ಜೆಟ್ಟನ್ನು ಪರಿಶೀಲನೆ ಮಾಡುವುದಕ್ಕಾಗುವುದಿಲ್ಲ. ಬಡ್ಜೆಟ್ ಎಂದರೆ ಒಂದು ದೇಶದ ಅಭಿವೃದ್ಧಿಕಾರ್ಯಗಳನ್ನೊಳಗೊಂಡಿರುವಂಥ ಆಯುವ್ಯಯದ ಪಟ್ಟಿ. ಈ ಪಟ್ಟಿಯಲ್ಲಿ ಒಳಗೊಂಡಿರತಕ್ಕ ಕೆಲವು ಇಲಾಖೆಗಳೇನಿವೆ ಅವುಗಳಿಂದ ನಾವು ಅವುಗಳ ಬಗ್ಗೆ ಖರ್ಚುಮಾಡುತ್ತಿರುವುದಕ್ಕೆ ತಕ್ಕ ಹಾಗೆ ಆದಾಯ ಬರಲು ಬಹಳ ಕಷ್ಟವಿದೆ. ಉದಾಹರಣೆಗೆ—ವಿದ್ಯಾಭ್ಯಾಸದ ಇಲಾಖೆಯನ್ನು ತೆಗೆದುಕೊಳ್ಳೋಣ. ಈ ಇಲಾಖೆಯಲ್ಲಿ ಎಷ್ಟು ಜನ ಉಪಾಧ್ಯಾಯರಿದ್ದಾರೆ, ಎಷ್ಟು ಪಾಠಶಾಲೆಗಳಿವೆ, ಎನ್ನುವುದನ್ನು ಗಣನೆಗೆ ತೆಗೆದುಕೊಂಡು ದೇಶದಲ್ಲಿ ಎಷ್ಟು ವಿದ್ಯಾಪ್ರಗತಿ ಆಗಬೇಕೋ ಅಷ್ಟಕ್ಕೆ ಸರಿಯಾಗಿ ನಾವು ಹಣವನ್ನು ಒದಗಿಸಿದ್ದಾಗ್ಯೂ ನಮಗೆ ಈ ಬಾಬಿನಿಂದ ಉತ್ಪತ್ತಿ ಏನೂ ಬರುವುದಿಲ್ಲ. ಈ ಇಲಾಖೆಯಲ್ಲಿ ಉತ್ಪತ್ತಿಯನ್ನು ಆಶಿಸುವುದು ತೀರ ಅಸಂಭವ. ಈ ದಿವಸ ನಾವು ತಯಾರಿಸಿರತಕ್ಕ ಈ ಬಡ್ಜೆಟ್‌ನಲ್ಲಿ 10-11 ಕೋಟಿ ರೂಪಾಯಿಗಳ ಖರ್ಚುವೆಚ್ಚಗಳಲ್ಲಿ ಈ ನೌಕರರ ಸಂಬಳ ಸಾರಿಗೆಗಾಗಿಯೇ $4\frac{1}{2}$ ಕೋಟಿ ರೂಪಾಯಿಗಳು ಖರ್ಚಾಗುತ್ತಿವೆ. ಆದರೆ ಖರ್ಚು ಹೆಚ್ಚಾಯಿತೆಂದು ನಾವು ವಿದ್ಯಾಭ್ಯಾಸವನ್ನು ಕೈಬಿಡಲು ಸಾಧ್ಯವಿಲ್ಲ. ದೇಶದಲ್ಲಿ ಎಷ್ಟು ವಿದ್ಯಾಪ್ರಗತಿಯಾಗಬೇಕೋ ಅಷ್ಟೂ ಆಗಲೇಬೇಕು . . .

Sri B. K. PUTTARAMIAH.—On a point of information, Sir. ವಿದ್ಯಾಭ್ಯಾಸದ ಇಲಾಖೆಯಿಂದಲೂ ಸಹ ವರಮಾನ ಪಡೆಯಬೇಕೆಂಬ

ಇರಾದೆ ಸರ್ಕಾರದವರಿಗಿದೆಯೇ ಎಂಬುದನ್ನು ನಾನು ತಿಳಿಯಬೇಕಾಗಿದೆ.

ಶ್ರೀ ಸಿ. ಎಂ. ಪೂಣಚ್ಚ.—ನಾನೀಗ ಹೇಳುತ್ತಿದ್ದುದರ ಅಭಿಪ್ರಾಯವೇನೆಂದರೆ, ಇಂಥ ದೇಶಾಭಿವೃದ್ಧಿ ಕಾರ್ಯಗಳಿಗೆ ಹಣವನ್ನು ಹೆಚ್ಚುಹೆಚ್ಚಾಗಿ ಖರ್ಚುಮಾಡಬೇಕಾದದ್ದು ಅನಿವಾರ್ಯ ಎಂಬ ಅಂಶವನ್ನು ಸಭೆಗೊಪ್ಪಿಸಲು ಈ ಮಾತನ್ನು ಹೇಳುತ್ತಿದ್ದೆನು. ಅದೇ ರೀತಿ ಈ ವೈದ್ಯ ಇಲಾಖೆ ಮತ್ತು ಪೋಲೀಸ್ ಇಲಾಖೆಗಳ ವಿಚಾರಕೂಡ ಇವೆ. ಈ ಇಲಾಖೆಗಳು ದೇಶದಲ್ಲಿರತಕ್ಕ ಜನರ ಆರೋಗ್ಯ ಮತ್ತು ರಕ್ಷಣೆಗಳಿಗಾಗಿ ಇರುತ್ತವೆ. ಈ ಇಲಾಖೆಗಳಲ್ಲಿರತಕ್ಕ ನೌಕರರುಗಳಿಗೆ ಸಂಬಳ ಸಾರಿಗೆಗಳನ್ನು ಕೊಡುತ್ತಿರುವುದರಿಂದ ಸರ್ಕಾರಕ್ಕೆ ಹೆಚ್ಚು ಹಣ ಖರ್ಚಾಗುತ್ತಿದೆ ಎಂದು ಹೇಳುವುದೇನೋ ಸಹಜವಾದುದೇ ಸರಿ. ಆದರೆ ಎಲ್ಲಾ ಸಂದರ್ಭಗಳಲ್ಲಿಯೂ ಹೀಗೆ ನಮ್ಮ ಖರ್ಚಿಗೆ ತಕ್ಕ ಆದಾಯ ಬರುತ್ತಿದೆಯೇ ಎಂದು ಅಳತೆ ಮಾಡುವುದು ಬಹಳ ಕಷ್ಟ. ಹೀಗೆ ಅನೇಕ ಬಾಬುಗಳ ಖರ್ಚು ಅನಿವಾರ್ಯವಾಗಿರುತ್ತದೆ. ಅವುಗಳನ್ನು ಖೋತಾ ಮಾಡುವುದಕ್ಕೆ ಯಾರಿಂದಲೂ ಸಾಧ್ಯವಾಗುವುದಿಲ್ಲ. ಆದರೆ ರೆವಿನ್ಯೂ ಇಲಾಖೆ ವಿಚಾರ ಹಾಗಿಲ್ಲ. ಈ ಇಲಾಖೆಯ ಉತ್ಪತ್ತಿ ಆರೂ ಚಿಲ್ಲರೆ ಕೋಟಿ ಇದ್ದರೆ ಇದರ ಖರ್ಚು ನಾಲ್ಕೂವರೆ ಕೋಟಿ ಇದೆ. ಈ ಇಲಾಖೆಯಲ್ಲಿ ಖರ್ಚು ಕಡಮೆ, ಆದಾಯ ಜಾಸ್ತಿ ಇದೆ. ಆದರೆ ಲೋಕೋಪಕಾರಿ ಕೆಲಸಗಳಲ್ಲಿ ಬಹಳ ಮಟ್ಟಿಗೆ ಆದಾಯಕ್ಕಿಂತಲೂ ಅವುಗಳಿಗಾಗುವ ಖರ್ಚೇ ಹೆಚ್ಚಾಗಿರುತ್ತದೆ. ಇದನ್ನು ತಡೆಗಟ್ಟಲು ಯಾರಿಂದಲೂ ಸಾಧ್ಯವಿಲ್ಲ. ಈ ದಿವಸ ನಮ್ಮ ಬಡ್ಜೆಟ್ಟಿನಲ್ಲಿ ಖೋತಾ ಬೀಳಲು ಕಾರಣ ನಮ್ಮ ವರಮಾನದಲ್ಲಿ ಸುಮಾರು 16 ಕೋಟಿ ರೂಪಾಯಿಗಳು ಸಂಬಳ ಸಾರಿಗೆಗಾಗಿಯೇ ಖರ್ಚಾಗುತ್ತಿದೆ ಆದುದರಿಂದ, ಎನ್ನುವ ವಾದವನ್ನು ನಾವು ಹೀಗೆ ಪರಿಶೀಲನೆಮಾಡಿ ನೋಡಿದರೆ ಇದೂ ಅಷ್ಟೇನೂ ಸಮಂಜಸವಾಗುವುದಿಲ್ಲ. ಈ ಸಂಬಳ ಸಾರಿಗೆಗಳನ್ನು ಕೊಡತಕ್ಕದ್ದೂ ಕೂಡ ಒಂದು ಅನಿವಾರ್ಯವೆಂಬುದಾಗಿ ನಾನೀಗ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತಿದ್ದೇನೆ.

ಇನ್ನು ಎರಡನೆಯದಾಗಿ ರಾಜ್ಯದಲ್ಲಿ ಲಂಚದ ಹಾವಳಿ ಜಾಸ್ತಿಯಾಗುತ್ತಿದೆಯೆಂದೂ ಎಲ್ಲಾ ಇಲಾಖೆಗಳಲ್ಲೂ ಲಂಚಗೂಳಿತನವಿದೆ ಎಂಬುದಾಗಿಯೂ ಟೀಕೆ ಮಾಡಿದ್ದಾರೆ. ಪೋಲೀಸ್ ಇಲಾಖೆಯಲ್ಲಿ ಲಂಚವಿದ್ದಿರಬಹುದು. ಆದರೆ ಆ ಬಗ್ಗೆ ಕೆಲವು ಸದಸ್ಯರು ಬಹಳ ಉತ್ಪ್ರೇಕ್ಷೆಮಾಡಿದ್ದಾರೆಂದು ನನ್ನ ಭಾವನೆ. ಪೋಲೀಸ್ ಇಲಾಖೆಯಲ್ಲಿ ಅಲ್ಪಸ್ವಲ್ಪ ಲಂಚವಿದ್ದ ನಿದರ್ಶನ ನಮ್ಮ ಗಮನಕ್ಕೆ ಬಂದಿದೆ. ಅದನ್ನು ನಿರ್ಮೂಲ ಮಾಡಲು ಈಗಾಗಲೇ ಸರ್ಕಾರದವರು ಸೂಕ್ತ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ.

ಇನ್ನು ಮುಂದಾದರೂ ಕೂಡ ಈ ಪ್ರಕಾರದ ಒಂದು ಅಯೋಗ್ಯವಾದ ವರ್ತನೆ ಸರ್ಕಾರದ ಯಾವುದೇ ವಿಭಾಗದಲ್ಲಿ ಇರಲಿಕ್ಕೆ ಕೂಡದು ಎಂಬ ಉದ್ದೇಶದಿಂದ ಇದನ್ನು ಸಂಪೂರ್ಣವಾಗಿ ನಾವು ನಿರ್ಮೂಲ ಮಾಡಬೇಕೆಂಬ ದೃಷ್ಟಿಯಿಂದ ಕಾರ್ಯಕ್ರಮಗಳನ್ನು ಕೈಕೊಳ್ಳಲಿಕ್ಕೆ ಸರ್ಕಾರದವರು ಎಂದೂ ಹಿಂಜರಿಯಲಿಕ್ಕಿಲ್ಲ. ಆದರೆ ಈ ಒಂದು ಕೆಲಸದಲ್ಲಿ ನಾನು ಬಹಳ ವಿನಯದಿಂದ ಕೇಳಿಕೊಳ್ಳುವುದೇನೆಂದರೆ ಈ ಸಭೆಯ ಪ್ರತಿಯೊಬ್ಬ ಸದಸ್ಯರೂ ಕೂಡ ಸರ್ಕಾರದವರಿಗೆ ಸಂಪೂರ್ಣ ಬೆಂಬಲ, ಸಹಾಯವನ್ನು ಕೊಡಬೇಕು, ಇದು ಸಮಾಜದಲ್ಲಿರುವಂತಹ ಒಂದು ರೀತಿಯ ತಪ್ಪು ವರ್ತನೆ ಇರಬಹುದು. ಅದ್ದರಿಂದ ಸಮಾಜದಿಂದಲೂ ಕೂಡ ನಮಗೆ ಸಾಕಷ್ಟು ಸಹಾಯ ಸಿಕ್ಕಬೇಕು. ಇಂಥ ಒಂದು ರೀತಿಯ ತಪ್ಪು ಅಭ್ಯಾಸವನ್ನು ಹೋಗಲಾಡಿಸಲು ಬೇಕಾದಂಥ ಸಂಪೂರ್ಣವಾದ ಬೆಂಬಲ ನಮ್ಮ ಮಾನ್ಯ ಸದಸ್ಯರೂ ಹಾಗೂ ಸಮಾಜದ ಸರ್ವಮುಂದಾಳುಗಳೂ ಕೂಡ ನೀಡಬೇಕೆಂದು ಹೇಳಿ ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ. ಇದರಲ್ಲಿ ಕೆಲವೊಂದು ನಿದರ್ಶನಗಳನ್ನು ಕೂಡ ಕೊಡಬಲ್ಲೆ. ಆಗಿಂದಾಗ್ಗೆ ನಮಗೆ ನಾನಾರೀತಿಯ ಅರ್ಜಿಗಳು ಬರುತ್ತವೆ. ಅನೇಕ ಸಂದರ್ಭಗಳಲ್ಲಿ ಮೂಗರ್ಜಿಗಳೂ ಬರುತ್ತವೆ. ಬಂದಂಥ ಅರ್ಜಿಗಳೆಲ್ಲವನ್ನೂ ಕೂಡ ನಾವು ಪರಿಶೀಲನೆ ಮಾಡಿ ಅದಕ್ಕೆ ಸಕಾದಷ್ಟು ತನಿಖೆ ಮಾಡಿ ಕಂಡು ಹಿಡಿಯಲಿಕ್ಕೆ ಪ್ರಯತ್ನ ಮಾಡುತ್ತೇವೆ. ಆದರೆ ಈ ಪ್ರತಿಯೊಂದು ಕಾರ್ಯಕ್ರಮದಲ್ಲೂ ಕೂಡ ಬಹುಮಟ್ಟಿಗೆ ಖರ್ಚನ್ನೂ ನಾವು ವಹಿಸಬೇಕಾಗುತ್ತದೆ. ಉದಾಹರಣೆಗೆ ಹೇಳುವಂಥಾದ್ದಾದರೆ, ಅಂತಹ ಮೂರು, ನಾಲ್ಕು ತನಿಖೆಗಳು ನಡೆದಿವೆ. ಅವನ್ನು ತರಿಸಿ ನಾನು ಬಹಳ ಚನ್ನಾಗಿ ವಿಮರ್ಶೆ ಮಾಡಿ ನೋಡಿದೆ. ಪರಿಶೀಲನೆ ಮಾಡಿ ನೋಡಿದಾಗ ಕೊನೆಗೆ ಆ ಪುಕಾರು ಏನಿತ್ತೊ ಅದರಲ್ಲಿ ಏನೇನೂ ತಿರುಳಿರಲಿಲ್ಲ, ಆಧಾರವಿರಲಿಲ್ಲ ಎಂದು ಕಂಡು ಬಂತು. ಪ್ರತಿಯೊಂದು ಪುಕಾರನ್ನು ಕೂಡ ಒಬ್ಬ ಮುಖ್ಯವಾದಂಥ ಆಫೀಸರು ಎರಡುಮೂರು ಸಲ ಹೋಗಿ ಪರಿಶೀಲನೆ ಮಾಡಿ ತೀರ್ಮಾನ ಮಾಡಬೇಕಾಗಿದ್ದರೆ ಸರ್ಕಾರಕ್ಕೆ 600-800 ರೂಪಾಯಿ ಖರ್ಚಾಯಿತು. ಪ್ರತಿಯೊಂದು ಅಂಕಿಅಂಶಗಳನ್ನು ಕೂಡ ಪರಿಶೀಲನೆಮಾಡಿ ನೋಡಿದ್ದೇವೆ. ಏಕೆ ಇದನ್ನು ಹೇಳುತ್ತೇನೆಂದರೆ ಸರ್ಕಾರದ ಗಮನಕ್ಕೆ ಪುಕಾರು ಬಂದಾಗ ಕಾರ್ಯಕ್ರಮವನ್ನು ಖಂಡಿತ ತೆಗೆದುಕೊಳ್ಳಲೇಬೇಕು, ತೆಗೆದುಕೊಳ್ಳುವಂಥಾದ್ದು ಕರ್ತವ್ಯದೃಷ್ಟಿಯಿಂದ ಬಹಳ ಅವಶ್ಯಕವಾಗುತ್ತದೆ. ಆದರೆ ವಿನಾಕಾರಣವಾದಂಥ ಪುಕಾರು, ನಿರಾಧಾರವಾದಂಥ ಅಪಾದನೆಯನ್ನು ಸುರಿಮಳೆಯಾಗಿ ತಂದು ಇಡುವುದಾದರೆ ಯಾವ ಸರ್ಕಾರಕ್ಕೇ ಆದರೂ ಕೂಡ ಕೆಲಸ ಮಾಡುವಂಥ ರೀತಿಯಲ್ಲಿ ಬಹುಮಟ್ಟಿನ ತೊಂದರೆ ಬರುತ್ತದೆ ಮತ್ತು ವಿನಾಕಾರಣವಾದ ವೆಚ್ಚ ಕೂಡ ಉಂಟಾಗುತ್ತದೆ ಎಂಬ ವಿಷಯವನ್ನು ನಾನು ಈ ಸಭೆಯ ಗಮನಕ್ಕೆ ತರುತ್ತಾ ಇದ್ದೇನೆ. ಆದರೂ ಕೂಡ ಎಷ್ಟೋರೀತಿಯಲ್ಲಿ ಈ ಪ್ರಕಾರ ವಾದಂಥ ಲಂಚಗೂಳಿತನದ ದುರಭ್ಯಾಸವನ್ನು ನಿಲ್ಲಿಸಲಿಕ್ಕೆ ಸರ್ಕಾರದವರೂ ಸಂಪೂರ್ಣವಾದಂಥ ಕಾರ್ಯಕ್ರಮವನ್ನು ಕೈಕೊಂಡಿದ್ದಾರೆ. ನಮ್ಮ ಎಫಿಷೆನ್ಸಿ ಆಡಿಟ್ ಮತ್ತು ಆಂಟಿಕರಪ್‌ಷನ್ ಡಿಪಾರ್ಟ್‌ಮೆಂಟಿನಲ್ಲಿ ಇನ್ನೂ ಕೆಲವು ಬದಲಾವಣೆಗಳನ್ನು ಮಾಡಿ ಹೆಚ್ಚಿನ ಅಧಿಕಾರವರ್ಗದವರನ್ನು ಕೊಟ್ಟು ಅದನ್ನು ಯಶಸ್ವಿಯಾಗಿ ನಡಸಲಿಕ್ಕೆ ಇರುವಂಥ ಕಾರ್ಯ ಕ್ರಮಗಳನ್ನು ಕೂಡ ಸರ್ಕಾರದವರು ಮಾಡಿಕೊಂಡಿದ್ದೇವೆ.

ಇನ್ನೂ ಪೋಲೀಸ್ ಇಲಾಖೆಯ ವಿಷಯದಲ್ಲಿ ಕೆಲವೊಂದು ಅಭಿಪ್ರಾಯಗಳನ್ನು ಮಾನ್ಯ ಸದಸ್ಯರು ವ್ಯಕ್ತ ಮಾಡಿದ್ದಾರೆ. ಅದನ್ನು ನಾನು ಹೇಳುವಂಥಾದ್ದಾದರೆ, ಐದು ಸಂಸ್ಥಾನಗಳ ಕಾಯಿದೆ ಕಾನೂನುಗಳನ್ನು ಅನುಸರಿಸಿ ಐದು ಸಂಸ್ಥಾನಗಳಲ್ಲಿದ್ದ ಪೋಲೀಸ್‌ದಳ ಈಗ ಒಂದು ಏಕೀಕೃತವಾದ ಪೋಲೀಸ್ ಇಲಾಖೆಯ ಆಡಳಿತಕ್ಕೆ ಒಳಪಟ್ಟಿದೆ. ಇದನ್ನು ಸರಿಯಾಗಿ ಇಟ್ಟು ಇದರ ಎಲ್ಲಾ ಕೆಲಸ ಕಾರ್ಯಗಳನ್ನು ಕೂಡ ಏಕೀಕೃತವಾದ ಒಂದು ಮಟ್ಟದಲ್ಲಿ ತಂದು ಸೇರಿಸಿಕೊಳ್ಳುವಂಥ ಒಂದು ಕಾರ್ಯಕ್ರಮ ಸ್ವಲ್ಪ ಕಠಿಣತರವಾಗಿತ್ತು. ಅದನ್ನು ಈಗಾಗಲೇ ಒಂದು ರೀತಿಯಲ್ಲಿ ಪೂರ್ಣಗೊಳಿಸಿದ್ದೇವೆ.

(ಶ್ರೀ ಸಿ. ಎಂ. ಪೂಣಚ್ಚ)

ಇನ್ನುಮೇಲೆ ಪೋಲೀಸ್ ಇಲಾಖೆಯ ವ್ಯವಸ್ಥೆ ಇನ್ನೂ ಹೆಚ್ಚಿನ ರೀತಿಯಲ್ಲಿ ಸುಸೂತ್ರವಾಗಿ ನಡೆಯಬಹುದು ಎಂದು ನಾನು ಧೈರ್ಯವಾಗಿ ಹೇಳಬಲ್ಲೆ. ಕೆಲವುಕಡೆ ಗೂಂಡಾಗಿರಿ ಇದೆ, ಕೆಲವುಕಡೆ ಬಹುಮಟ್ಟಿನ ದರೋಡೆ ನಡೆಯುತ್ತಿದೆ, ಎಂದು ಸದಸ್ಯರು ಹೇಳಿದಂಥ ವಿಚಾರ ವನ್ನು ಕೇಳಿದ್ದೇವೆ. ಕೆಲವೊಂದುಕಡೆ ನಮ್ಮ ಈ ಸಂರಕ್ಷಣೆಯ ಭಾಗದ ವಾತಾವರಣ ಅಷ್ಟೊಂದು ಸಂತೋಷಪ್ರದವಾಗಿಲ್ಲ. ಅದನ್ನು ಕೂಡ ನಾನು ಒಪ್ಪಿಕೊಳ್ಳುತ್ತೇನೆ. ಮಾನ್ಯ ಮಿತ್ರರು ಹೇಳಿದ ಹಾಗೆ, ಬಳ್ಳಾರಿ ಜಿಲ್ಲೆ, ಬೆಳಗಾಂ ಜಿಲ್ಲೆಯ ಕೆಲವು ಭಾಗ, ಬಿದರ್ ಜಿಲ್ಲೆ ಇಂಥ ಕೆಲವು ಜಿಲ್ಲೆಗಳಲ್ಲಿ ಇವತ್ತೂ ಅಲ್ಲಿಯ ಕೆಲವು ವಿಷಯಗಳು ಅಷ್ಟೊಂದು ಸಂತೋಷ ಕರವಾಗಿಲ್ಲ. ಎಲ್ಲರಿಗೂ ಕೂಡ ಅದರಿಂದ ಮನಸ್ಸಿಗೆ ಬಹುಮಟ್ಟಿಗೆ ವ್ಯಸನವಾಗಿದೆ. ಇದನ್ನು ಅರಿತು ಈಗಿ ರುವಂಥ ತೊಂದರೆಗಳನ್ನು ನಿವಾರಣೆಮಾಡಿ ಪ್ರಜಾ ವರ್ಗಕ್ಕೆ ಸಾಕಷ್ಟು ಸಂರಕ್ಷಣೆಯನ್ನು ಒದಗಿಸು ವಂಥದೇ ಸರ್ಕಾರದ ಮುಖ್ಯ ಉದ್ದೇಶವಾಗಿದೆ. ಇದಕ್ಕೆ ಬೇಕಾದಂಥ ಎಷ್ಟು ಮಟ್ಟಿನ ಒಂದು ಹಿಡಿತ ಕೂಡಲೇ ಅವಶ್ಯಕವಾಗಿ ಬೇಕೋ ಅದನ್ನು ಮಾಡಲಿಕ್ಕೆ ಯಾವುದೇ ರೀತಿಯಲ್ಲೂ ಕೂಡ ಸರ್ಕಾರ ಹಿಂಜರಿಯು ವುದಿಲ್ಲ. ಈ ಭರವಸೆಯನ್ನು ಸರ್ಕಾರದ ಪರವಾಗಿ ನಾನು ತಮಗೆ ಕೊಡಬಲ್ಲೆ. ಆದರೆ ಈ ಒಂದು ವಿಷಯದಲ್ಲಿ ತಾವೂಕೂಡ ಸರ್ಕಾರದೊಡನೆ ಸ್ವಲ್ಪಮಟ್ಟಿಗೆ ಸಹಕಾರ ವನ್ನು ತೋರಬೇಕು. ಏಕೆಂದರೆ ಈ ರೀತಿ ಕೆಲಸಕಾ ರ್ಯಗಳನ್ನು ಕೈಕೊಂಡು ಒಂದು ಕಾರ್ಯನೀತಿಯ ನ್ನನುಸರಿಸುವಾಗ ಕೆಲವೊಂದು ಖರ್ಚಿನ ಅಂಶ ಕೂಡ ಬರಲಿಕ್ಕೆ ಸಾಕು. ಅಂಥ ಸಂದರ್ಭದಲ್ಲಿ ಈ ಸಭೆ ಸಾಕಾದಷ್ಟು ಉದಾರತೆಯಿಂದ ನಮಗೆ ಹೆಚ್ಚಿನ ಹಣದ ಅವಶ್ಯಕತೆ ಬಂದಲ್ಲಿ ಅದನ್ನು ಒದಗಿಸುತ್ತದೆ ಎಂದು ನಾನು ಸಭೆಯ ಸಹಕಾರವನ್ನೂ ಕೂಡ ನಿರೀಕ್ಷಿ ಸುತ್ತೇನೆ. ಅದೇರೀತಿ ಮಾನ್ಯ ಮಿತ್ರರಾದ ಆರ್ಥಿಕ ಸಚಿವರು ಶ್ರೀಮಾನ್ ಮರಿಯಪ್ಪನವರೂ ಸಹಾಯ ಮಾಡುತ್ತಾರೆ ಎಂದು ನಂಬುತ್ತೇನೆ. ಇದರಲ್ಲಿ ಕೆಲ ವೊಂದು ಜವಾಬ್ದಾರಿಯುತವಾದ ಕೆಲಸಕಾರ್ಯಗಳು ಇವೆ. ಮುಖ್ಯವಾಗಿ ಗೋವಾ ಬಾರ್ಡರಿಗೆ ಸಂಬಂಧ ಪಟ್ಟಂತೆ ಹೆಚ್ಚಿನ ಜವಾಬ್ದಾರಿ ನಮ್ಮ ಹೆಗಲಿನ ಮೇಲೆ ಇದೆ. ನಮ್ಮಕಡೆಗೆ ಅದರ ಹೆಚ್ಚಿನಭಾಗದ ಫ್ರಾಂಟಿ ಯರ್ ಇದೆ. ಅದನ್ನು ನಾವು ಯಶಸ್ವಿಯಾಗಿ ಕಾದು ಕೊಳ್ಳಲಿಕ್ಕೆ ಇರುವಂಥ ಒಂದು ಪ್ರತ್ಯೇಕವಾದ ಪೋಲೀಸ್ ದಳ ಕೂಡ ಬೇಕಾಗುತ್ತದೆ. ಅದೂ ಅಲ್ಲದೆ ನಾವು ಸಾಕಷ್ಟು ರಿಸರ್ವ್ ಫೋರ್ಸಸ್ ಕೂಡ ಇಟ್ಟು ಕೊಂಡಿಲ್ಲ. ಈ ಎಲ್ಲಾ ದೃಷ್ಟಿಯಿಂದ ಪೋಲೀಸ್ ಇಲಾಖೆಯ ದಳದ ಬಲವನ್ನು ಹೆಚ್ಚುಮಾಡಬೇಕಾದಂಥ ಅವಶ್ಯಕತೆ ಬರಬಹುದು. ಅಂಥ ಸಂದರ್ಭದಲ್ಲಿ ಈ ಸಭೆಯವರ ಮುಂದೆ ಸರ್ಕಾರ ಹೆಚ್ಚಿನ ಖರ್ಚಿನ ಅನು ಕೂಲತೆಗಳನ್ನು ಕಲ್ಪಿಸಲಿಕ್ಕೆ ಮುಂದೆ ನಾವು ಬೇಡಿಕೆ ಯನ್ನು ತಂದಂಥ ಕಾಲಕ್ಕೆ ಸಭೆಯ ಸಂಪೂರ್ಣ ಬೆಂಬಲ ದೊರೆಯುತ್ತದೆ ಎಂದು ಹೇಳುವಂಥ ಆಶಾಭಾವನೆ ಯನ್ನು ನಾನು ಇಟ್ಟುಕೊಂಡಿದ್ದೇನೆ.

ಇನ್ನು ಪಾನ ನಿಷೇಧದ ವಿಷಯದಲ್ಲಿ ಕೆಲವು ಅಭಿಪ್ರಾ ಯಗಳನ್ನು ವ್ಯಕ್ತ ಮಾಡಿದರು. ನಿಷಾನಿಷೇಧ ಎನ್ನುವುದು ಜಯಪ್ರದವಾಗಿ ನಡೆಯುತ್ತಿಲ್ಲ. ಅದು ಎಲ್ಲಾಕಡೆಯಲ್ಲೂ ಕೂಡ ಸಮರ್ಪಕವಾಗಿ ನಡೆಯು ತ್ತಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಮಾಡಿದ್ದಾರೆ. ಬಹುಮಟ್ಟಿಗೆ ಅದರಲ್ಲಿ ಸತ್ಯಾಂಶ ಇದೆ. ಅದನ್ನು ಒಪ್ಪುತ್ತೇನೆ. ಆದರೆ ಅದನ್ನು ಸಂಪೂರ್ಣ ಜಯಪ್ರದ ವಾಗಿ ಮಾಡುವಂಥಾದ್ದು ಅಷ್ಟೊಂದು ಸುಲಭ ಸಾಧ್ಯದ ಕೆಲಸವಲ್ಲ. ಏಕೆಂದರೆ ತಲೆತಲಾಂತರದಿಂದ, ಪೀಳಿಗೆ ಪೀಳಿಗೆಯಿಂದ ನಡೆದು ಬಂದಂಥ ಆ ಒಂದು ದುರಭ್ಯಾಸ ವನ್ನು ಒಂದೇ ಒಂದು ಜನತೆಯ (ಜನರೇಷನ್) ಕಾಲಾ ವಧಿಯಲ್ಲಿ ಸಂಪೂರ್ಣವಾಗಿ ನಿರ್ಮೂಲ ಮಾಡುವಂ ಥಾದ್ದು ಅಷ್ಟೊಂದು ಸುಲಭಸಾಧ್ಯದ ಕೆಲಸವಲ್ಲ. ಆದ್ದರಿಂದ ಇದಕ್ಕೆ ಬಹಳ ಪರಿಶ್ರಮ ಪೂರ್ವಕವಾದ ಕ್ರಮಬದ್ಧವಾದ ಮತ್ತು ದೀರ್ಘಾವಧಿಯ ಕಾಲದ ನೀತಿ ಬೇಕಾಗುತ್ತದೆ. ಅಂಥ ಒಂದು ದೀರ್ಘಾವ ಧಿಯ ಕಾಲದಲ್ಲಿ ಇದನ್ನು ಯಶಸ್ವಿಯಾಗಿ ನಡೆಸಲಿಕ್ಕೆ ಪ್ರಯತ್ನ ಮಾಡಬಹುದು. ಆ ದೃಷ್ಟಿಯಿಂದ ಸಮಾಜದ ಸಹಾಯವನ್ನು ಕೂಡ ಬಹುಮಟ್ಟಿಗೆ ಕೇಳುತ್ತಾ ಇದ್ದೇನೆ. ಇದು ಸಮಾಜದ ಸುಧಾರಣೆಯ ಒಂದು ಅವಧಿ ಆಗಿದೆ. ಇದರಲ್ಲಿ ನಮಗೆ ಸಮಾಜ ಸಂಪೂರ್ಣ ಬೆಂಬಲ ಕೊಡದೆ ಹೋದರೆ ಕೇವಲ ಒಂದು ಪೋಲೀಸ್‌ದಳ ಅಥವಾ ಸರ್ಕಾರ ತಾವೇ ತಾವಾಗಿ ಪರಿಪೂರ್ಣ ಜಯಪ್ರದವಾಗಿ ನಡೆಸಲಿಕ್ಕೆ ಬಂದೀತು ಎನ್ನುವುದು ಅಷ್ಟೊಂದು ಸುಲಭವಾದ ಮಾತಲ್ಲ.

ಶ್ರೀ ಎಂ. ಸಿ. ನರಸಿಂಹನ್.—ದೀರ್ಘಾವಧಿ ಎಂದರೆ 'ಆಡ್‌ಇಣ್‌ಫನಟಂ' ಏ ಎಂದು ?

ಶ್ರೀ ಸಿ. ಎಂ. ಪೂಣಚ್ಚ.—ಇಲ್ಲಿ ಆರೀತಿ ನಿರಾಶಾ ಭಾವನೆಯನ್ನು ನಾನು ತಂದುಕೊಂಡಿಲ್ಲ. ನಿಜವಾ ಗಿಯೂ ಇದನ್ನು ಕ್ರಮ ಬದ್ಧವಾಗಿ, ಕ್ರಮಕ್ರಮವಾಗಿ ಪರಿಶ್ರಮಪೂರ್ವಕವಾಗಿ ಮುಂದುವರಿಸಿದರೆ ಈ ಜನ ರೇಷನ್ನಲ್ಲಿ ಅಲ್ಲದೆ ಇದ್ದರೂ ಮುಂದಿನ ಜನರೇಷನ್ನಲ್ಲಿ ಇದರ ಸಂಪೂರ್ಣವಾದ ಒಂದು ಜಯಪ್ರದವಾದ ಸ್ಥಿತಿ ಯನ್ನು ಸಾಧಿಸಬಹುದು. ಇಷ್ಟನ್ನು ಸಾಧಿಸಿದರೆ ಇದು ಪರಿಪೂರ್ಣ ಯಶಸ್ವಿಯಾಗಿ ಬಂತು ಎನ್ನುವುದನ್ನು ತಿಳಿದುಕೊಂಡವರಲ್ಲಿ ನಾನೊಬ್ಬ.

ಇನ್ನು ನಮ್ಮ ಕೈಗಾರಿಕೆಗಳ ಸಂಬಂಧದಲ್ಲಿ ಕೆಲವು ಅಭಿಪ್ರಾಯಗಳನ್ನು ಹೇಳಿದ್ದಾರೆ. ಬಹುಶಃ ಇದಕ್ಕೆ ಸಂಬಂಧವಾದ ಖರ್ಚಿನ ಪಟ್ಟಿಯನ್ನು ಮಂಡಿಸುವಂಥ ಸಂದರ್ಭದಲ್ಲಿ ನಾನು ಅವಕಾಶವನ್ನು ಉಪಯೋಗಿಸಿ ಕೊಂಡು ದೀರ್ಘವಾಗಿ ವಿವರಗಳನ್ನು ಕೊಡಲಿಕ್ಕೆ ಉದ್ದೇಶ ಪಡುತ್ತೇನೆ. ಆದರೆ ಈಗಿನ ಒಂದು ವಿಷ ಯದಲ್ಲಿ ಹೇಳುವಂಥಾದ್ದಾದರೆ, ನಮ್ಮ ಕೈಗಾರಿಕೆ ಗಳೆಲ್ಲಾ ನಷ್ಟದಲ್ಲಿ ಕೆಲಸ ಮಾಡುತ್ತಿವೆ, ಹೆಚ್ಚಿನ ಲಾಭ ವನ್ನು ಸಂಪಾದನೆ ಮಾಡುತ್ತಿಲ್ಲ ಎಂದು ಕೆಲವರು ಹೇಳಿದರು. ಇದುವರೆಗೆ ಸಾಕಷ್ಟು ಅಂಕಿ ಅಂಶಗ ಳನ್ನು ನಾನು ಸಂಗ್ರಹಿಸಿದ್ದೇನೆ. ನಮ್ಮ ಅಂಕಿ ಅಂಶಗಳಿಂದ ಏನು ತಿಳಿಯಬರುತ್ತದೆ ಎಂದರೆ ಸರ್ಕಾ ರದ ಆಶ್ರಯದಲ್ಲಿ ನಡೆಯುವಂತಹ ಪ್ರತಿಯೊಂದು ಕೈಗಾರಿಕೆಯೂ ಕೂಡ ವರ್ಷೇ ವರ್ಷೇ ಲಾಭ ದೃಷ್ಟಿ ಯಿಂದ ಪ್ರಗತಿಪರವಾಗಿ ಕೆಲಸಮಾಡುತ್ತಾ ಇದೆ. ಅದನ್ನು ಅಂಕಿಅಂಶಗಳ ಆಧಾರದ ಮೂಲಕ ಹೇಳ ಲಿಕ್ಕೆ ವಿವರವನ್ನು ಸಂಗ್ರಹಿಸಿ ಇಟ್ಟುಕೊಂಡಿದ್ದೇನೆ. ಅದೂ ಅಲ್ಲದೆ ಮಾನ್ಯ ಮಿತ್ರರಾದ ನಾಗೂರ್ ಅವರು 15 ಕೋಟಿ ರೂಪಾಯಿ ಖರ್ಚಿದೆ, 15 ಕೋಟಿ ರೂಪಾಯಿ ಜಮ ಇದೆ. ಆದರೆ ಯಾವುದಕ್ಕೆ ಹೀಗೆ ಮಾಡುತ್ತಾ ಇದ್ದೀರಿ. ಇದರಲ್ಲಿ ಏನು ಪುರುಷಾರ್ಥ ಇದೆ ಎಂದು ಕೇಳಿದರು. ಕೇವಲ ಅಷ್ಟಕ್ಕೇ ಆ ಮಾತು ಉಳಿಯಬಾರದು.

6-30 P.M.

ಅವರು ಎಷ್ಟುಮಟ್ಟಿನ ಜವಾಬ್ದಾರಿಯನ್ನರಿತುಕೊಂಡು ಆ ಅಭಿಪ್ರಾಯವನ್ನು ಹೇಳಿದರೋ ಅದನ್ನು ನಾನು ಬೇರೆ ತಿಳಿಯೆನು. ಹದಿನೈದು ಕೋಟಿ ರೂಪಾಯಿ ಖರ್ಚಿನಲ್ಲಿ

ನಮ್ಮ ಆಶ್ರಯದಲ್ಲಿರುವ ಕೈಗಾರಿಕೆಗಳನ್ನು ಮಾತ್ರ ನಡೆಸುವಂಥ ವಿಷಯವಲ್ಲ. ಅದರಲ್ಲಿ rural industrialisation schemes, ಮತ್ತೆ cottage industry schemes, ಪ್ರತಿಯೊಂದೂ ಕೂಡ ಅಡಕವಾಗಿದೆ. ಒಟ್ಟಿಗೆ ಇರುವಂಥ ಬಡ್ಜೆಟ್ಟಿನಲ್ಲಿ ಇವೆಲ್ಲಕ್ಕೂ ಖರ್ಚಿಗೆ ಹಣವನ್ನೊದಗಿಸಲಾಗಿದೆ. ಕೇವಲ ಸರ್ಕಾರದ ಆಶ್ರಯದಲ್ಲಿರುವಂಥ ನಮ್ಮ ಕಾರ್ಖಾನೆಗಳ ಜಮಾ ಖರ್ಚನ್ನು ಎತ್ತಿನೋಡುವುದಾದರೆ ಅದರಲ್ಲಿ ಖಂಡಿತವಾಗಿ ಸರ್ಕಾರಕ್ಕೆ ಒಂದು ಕೋಟಿಗಿಂತಲೂ ಹೆಚ್ಚಾಗಿರುವ ಆದಾಯ ವರ್ಷಂಪ್ರತಿ ಬರುತ್ತದೆ ಎಂದು ಹೇಳುತ್ತೇನೆ. ಈ ವಿಷಯದಲ್ಲಿ ಅಂಕಿ ಅಂಶಗಳನ್ನು ಬೇಕಾದರೆ ತಮಗೆ ಒಪ್ಪಿಸಬಲ್ಲೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಈ ಕಾರ್ಖಾನೆಗಳಲ್ಲಿ ತಯಾರಾಗುವ ಪದಾರ್ಥಗಳ ಧಾರಣೆ ಜಾಸ್ತಿಯಾಗುತ್ತಿದೆ, ಅದಕ್ಕೋಸ್ಕರ ಲಾಭ ಜಾಸ್ತಿ ಬರುತ್ತಿದೆ.

ಶ್ರೀ ಸಿ. ಎಂ. ಪೂಣಚ್ಚ.—ಅದು ನಿಜ. ಆದರೆ ಹಾಗೆಯೇ ಕೊಂಡುಕೊಳ್ಳತಕ್ಕ ಕಚ್ಚಾಮಾಲುಗಳ ಧಾರಣೆ ಸಹ ಜಾಸ್ತಿಯಾಗುತ್ತಿದೆ. ನಮ್ಮ ಕೈಗಾರಿಕೆಗಳು ಪ್ರತಿಯೊಂದೂ ಕೂಡ ಕಚ್ಚಾಮಾಲನ್ನು ಕೊಂಡು ಕೊಂಡು ದಿನಂಪ್ರತಿ ಏರುತ್ತಿರತಕ್ಕ ಕೂಲಿಗಾರರ wages ಕೊಟ್ಟು ಆ ಪ್ರಕಾರವಾಗಿ ಕೆಲಸವನ್ನು ನಡೆಸುತ್ತಬಂದಿವೆ. ಆದುದರಿಂದ ಎಷ್ಟು ಲಾಭ ಬರುತದೆಯೋ ಅಷ್ಟು ಖರ್ಚು ಬೀಳುತ್ತಾ ಇದೆ. ಒಟ್ಟಿನಲ್ಲಿ ಸಮರ್ಪಕವಾಗಿ ಕೆಲಸಮಾಡುತ್ತಿವೆ ಎಂದು ಹೇಳುವುದರಲ್ಲಿ ಏನೂ ಸಂಶಯವಿಲ್ಲ. ಅಲ್ಲದೆ . . .

Sri M. C. NARASIMHAN.—Do you include the Hassan Implements Factory and the Silk Filature Factory at T.-Narasipur in the list of factories which are supposed to be working on profit ?

Sri C. M. POONACHA.—I have got the details with me. If my Hon'ble friend is interested to know, I can tell him with confidence that the Hassan Implements Factory is making very good profits.

Sri Y. VEERAPPA.—Does the Hon'ble Minister mean that the Rural Industrialisation Scheme is fetching any profit to Government ?

Sri C. M. POONACHA.—I do not mean that. The sum of Rs. 15 crores under Rural Industrialisation Scheme for cottage and small scale industries does not fetch any profit to Government, but the industrial concerns owned by Government do bring profit to Government.

ಸಿಲ್ಕ್ ಫಿಲೇಚರ್ ವಿಷಯದಲ್ಲಿ ಹೇಳಬೇಕಾದರೆ, ಅದು ನಷ್ಟದಲ್ಲಿ ಕೆಲಸಮಾಡುತ್ತಿದೆ. ಸಿಲ್ಕ್ ಫಿಲೇಚರ್ ಕೈಗಾರಿಕೆಯನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಬೇಕೆಂಬ ಉದ್ದೇಶವೇನೆಂದರೆ ರೇಷ್ಮೆ ಕೈಗಾರಿಕೆಯಲ್ಲಿ ಹೆಚ್ಚು ಕಡಮೆ ನಮ್ಮಲ್ಲಿ ಒಂದು ಲಕ್ಷ, ಒಂದೂವರೆ ಲಕ್ಷ ಜನರು ಇವೊತ್ತು ಇದನ್ನೇ ಆಶ್ರಯಿಸಿದ್ದಾರೆ. ಮೈಸೂರು ಜಿಲ್ಲೆ, ಮಂಡ್ಯ ಜಿಲ್ಲೆ, ಕೋಲಾರ ಜಿಲ್ಲೆ ಮತ್ತೆ ಕೊಳ್ಳೆಗಾಲ ತಾಲ್ಲೂಕು ಈ ಎಲ್ಲ ಪ್ರದೇಶದ ಜನಗಳಲ್ಲಿ, ಹೆಚ್ಚಿನ ಸಂಖ್ಯೆಯು ನಮ್ಮ ರೈತಾಪಿ ಜನಾಂಗ ಕೇವಲ ರೇಷ್ಮೆ ಕೈಗಾರಿಕೆ, ಮೇಲಾಗಿ, ಅದನ್ನು ಹೊಂದಿಕೊಂಡಂತೆ ರೇಷ್ಮೆ ಹುಳು ಸಾಕುವುದು, ರೇಷ್ಮೆ ಗೂಡುಗಳನ್ನು ತಯಾರು ಮಾಡತಕ್ಕದ್ದು ಈ ಕೆಲಸಕಾರ್ಯಗಳಲ್ಲಿ ನಿರತರಾಗುವುದರಿಂದ, ಸಿಲ್ಕ್ ಫಿಲೇಚರ್ ಕಾರ್ಖಾನೆ ಕೆಲಸಮಾಡದೆ ಹೋದರೆ ಹೆಚ್ಚು ಜನರಿಗೆ ತೊಂದರೆಯಾಗುತ್ತದೆ ಎಂದು ಯೋಚನೆ ಮಾಡಿ, ಈ ಸಿಲ್ಕ್ ಫಿಲೇಚರ್ ಕೈಗಾರಿಕೆಗೆ ಸಾಕಷ್ಟು ಉತ್ತೇಜನಕೊಟ್ಟು, ಸಾಕಷ್ಟು ಒಳ್ಳೆಯ ಅವಕಾಶವನ್ನು ಕೊಟ್ಟು, ಬೇರೆಯವರಿಗೆ ತೊಂದರೆ ಬಾರದರೀತಿಯಲ್ಲಿ ಇದನ್ನು ವಹಿಸಿಕೊಂಡು ಕೆಲಸ ಮಾಡುತ್ತಿದ್ದೇವೆ. ಈ ದೃಷ್ಟಿಯಿಂದ ಇವೊತ್ತು ರೇಷ್ಮೆ ಗೂಡುಗಳನ್ನು ತಯಾರುಮಾಡುವ rearers ಯಾರಿದ್ದಾರೆ ಅವರಿಗೆ ಬಹಳಮಟ್ಟಿಗೆ ಒಳ್ಳೆಯದಾಗಿದೆ ಎಂದು ಹೇಳುವುದರಲ್ಲಿ ಸಂಶಯವಿಲ್ಲ. ತಕ್ಷಾಲಕ್ಕೆ ಈ ಕೈಗಾರಿಕೆಯಿಂದ ಸರ್ಕಾರಕ್ಕೆ ನಷ್ಟವಿದೆ. ಆದರೆ ನಾನು ಧೈರ್ಯವಾಗಿ ಹೇಳಬಲ್ಲೆ, ಈಗ basins improve ಮಾಡಿ ಮತ್ತೆ ಕೆಲವೊಂದು ಅಭಿವೃದ್ಧಿಗಳನ್ನು ಸಾಧಿಸಿದಮೇಲೆ ಖಂಡಿತವಾಗಿಯೂ ಸಿಲ್ಕ್‌ಫಿಲೇಚರ್ಸ್ ಕೂಡ ಲಾಭದಲ್ಲಿ ಕೆಲಸಮಾಡುವಂಥ ಸಂದರ್ಭವಿದೆ ಮತ್ತು ಇನ್ನು ಎರಡು ವರ್ಷಗಳಲ್ಲಿ ಪ್ರಗತಿಪರವಾಗಿ ಕೆಲಸ ಮಾಡುವುದರಲ್ಲಿ ಏನೂ ಸಂಶಯ ಕಂಡುಬರುವುದಿಲ್ಲ ಎಂದು ಹೇಳಬಲ್ಲೆ. ಈ ದೃಷ್ಟಿಯಿಂದ ಸರ್ಕಾರದ ಆಶ್ರಯದಲ್ಲಿರುವಂಥ ಕೈಗಾರಿಕೆಗಳು, ಸರ್ಕಾರದ ಸಹಾಯವನ್ನು ಹೊಂದಿರುವಂಥ ಕೈಗಾರಿಕೆಗಳು, ಪ್ರತಿಯೊಂದೂ ಕೂಡ ಪ್ರಗತಿಪರವಾಗಿ ಕೆಲಸಮಾಡಿ ಆ ಕೈಗಾರಿಕೆಗಳ ಮೂಲಕ ನಮ್ಮ ಸರ್ಕಾರಕ್ಕೆ ಹಣ ಬರುವುದಲ್ಲದೆ ಎಷ್ಟೋ ಸಹಸ್ರ ಜನಗಳಿಗೆ ಉತ್ತಮವಾದ ಉದ್ಯೋಗವನ್ನು ಕೂಡ ಕಲ್ಪಿಸಿದಂತಾಗಿ ಒಟ್ಟಿನಲ್ಲಿ ಎಲ್ಲರ ಸುಖಕ್ಕಾಗಿ, ಕ್ಷೇಮಕ್ಕಾಗಿ ಕೂಡ ಈ ಕೈಗಾರಿಕೆಗಳು ನಡೆದು ಬರುತ್ತವೆ ಎಂಬ ಅಭಿಪ್ರಾಯವನ್ನು ತಿಳಿಸಲು ಸಂತೋಷಪಡುತ್ತೇನೆ. ಇನ್ನು ಹೆಚ್ಚು ಕಾಲಾವಧಿಯನ್ನು ತೆಗೆದುಕೊಳ್ಳಲು ಅಭಿಪ್ರಾಯಪಡುತ್ತಿಲ್ಲ. ಇಷ್ಟು ಸಮಯವನ್ನು ಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಕೊನೆಗಾಣಿಸುತ್ತೇನೆ.

Sri B. K. PUTTARAMIAH.—On a pont of information, Sir. ಮಾನ್ಯಮಂತ್ರಿಗಳು ಈಗತಾನೇ ಪೋಲೀಸ್ ಇಲಾಖೆಯ ವಿಷಯದಲ್ಲಿ ವಿಚಾರಮಾಡಿದ್ದೇವೆ ಎಂದು ಉತ್ತರ ಹೇಳಿದರು. ನಾನು ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯಲ್ಲಿ ಮತ್ತು ಬಡ್ಜೆಟ್ಟಿನ ಮೇಲಿನ ಸಾಮಾನ್ಯ ಚರ್ಚೆಯ ಕಾಲದಲ್ಲಿ ಸಹ ಮಾತನಾಡುವಾಗ ಚನ್ನಪಟ್ಟಣದಲ್ಲಿ ಪೋಲೀಸರ ದೌರ್ಜನ್ಯ ನಡೆದ ವಿಷಯದಲ್ಲಿ ವಿಚಾರಣೆಯಾಗಬೇಕು, judicial enquiry ನಡೆಸಬೇಕೆಂದು ಒತ್ತಾಯ ಮಾಡಿದ್ದಾಗ್ಯೂ ಕೂಡ, ಮಂತ್ರಿಗಳು ಅ ವಿಷಯವನ್ನೇ ಪ್ರಸ್ತಾಪಮಾಡಲಿಲ್ಲ. ಇದಕ್ಕೆ ಕಾರಣವೇನು ? ಆ ವಿಷಯದಲ್ಲಿ judicial inquiry ನಡೆಸುವುದಕ್ಕೆ ಇವರಿಗೆ ಏನಾದರೂ ಅಭಿಪ್ರಾಯವಿವೆಯೋ ಇಲ್ಲವೇ ? ಇದರ ಬಗ್ಗೆ ವಿಚಾರಣೆ ನಡೆಸುತ್ತಾರೆಯೇ ಎಂದು ತಿಳಿಸಬೇಕೆಂದು ಒಂದು information ಕೇಳಬೇಕಾಗಿದೆ.

ಅಧ್ಯಕ್ಷರು.—Information ಕೇಳುವುದರಲ್ಲಿ ದೊಡ್ಡದಾಗಿ ಭಾಷಣವಾಗಬಾರದು ಎಂದು ಹೇಳುತ್ತೇನೆ.

ಶ್ರೀ ಸಿ. ಎಂ. ಪೂಣಚ್ಚ.—ಚನ್ನಪಟ್ಟಣಕ್ಕೆ ಸಂಬಂಧಿಸದಂತೆ ಹಲವಾರು ಪ್ರಶ್ನೆಗಳನ್ನು ಮಾನ್ಯ ಸದಸ್ಯರು

(ಶ್ರೀ ಸಿ. ಎಂ. ಪೂಣಚ್ಚ.)

ಕಳುಹಿಸಿದ್ದಾರೆ. ಅದರಲ್ಲಿ ಉತ್ಪ್ರೇಕ್ಷೆಪೂರ್ಣವಾದ ಅನೇಕ ಪ್ರಶ್ನೆಗಳನ್ನು ಕೇಳಿದ್ದಾರೆ. ಅವರ ಪ್ರಶ್ನೆಗಳಲ್ಲಿ ಕೇಳಿರುವಂತಾದ್ದೇನೂ ಆಗಿಲ್ಲ. ಬಹುಶಃ ಅವರಿಗೆ ಇದ್ದಂಥ ಒಂದು ಭಾವನೆಯಿಂದ ಆ ರೀತಿ ಪ್ರಸ್ತಾವನೆ ಮಾಡುತ್ತಿದ್ದಾರೆಂದು ಕಾಣುತ್ತದೆ. ಇಷ್ಟು ಮಾತ್ರ ಹೇಳುತ್ತೇನೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಹಾಗೆ ಸರ್ಕಾರಕ್ಕೆ ಧೈರ್ಯವಿದ್ದರೆ . . .

Mr. SPEAKER.—Order, order. The information given by Government cannot be questioned on any account.

Sri B. K. PUTTARAMIYA.—My point of information is whether Government is prepared to hold a judicial inquiry or not.

Mr. SPEAKER.—That he can ask, but I find that he is going round and round. In fact, there is only one point.

ಶ್ರೀ ಸಿ. ಎಂ. ಪೂಣಚ್ಚ.—ಅಂಥ ಒಂದು inquiry ಮಾಡುವಂಥ ಸಂಭವವಿಲ್ಲವೆಂದು ಹೇಳುತೇನೆ.

ಶ್ರೀ ಎಸ್. ಪ್ರೈ. ಪಾಟೀಲ್.—ಅಧ್ಯಕ್ಷರು ಗಂಟೆ ಹೊಡೆದರೂ ಸಹ ಮಾನ್ಯ ಸದಸ್ಯರು ಕೂಡುವುದಿಲ್ಲ. ಸದಸ್ಯರು ದಯಮಾಡಿ ಅಧ್ಯಕ್ಷರು ಒಮ್ಮೆ ಗಂಟೆ ಬಾರಿಸಿದ ಕೂಡಲೇ ಕೂಡಬೇಕು. ಇಲ್ಲದಿದ್ದರೆ, ಈ ಸಭೆಯ ಗೌರವ ಕೆಡುತ್ತದೆ ಮತ್ತು ಅಧ್ಯಕ್ಷರಿಗೂ ಅಪಮಾನ ಮಾಡಿದಂತಾಗುತ್ತದೆ ಎಂದು ಹೇಳುತ್ತೇನೆ.

ಅಧ್ಯಕ್ಷರು.—ತಾವು ಹೇಳುವುದನ್ನು ನಾನು ಒಪ್ಪುತ್ತೇನೆ. ರೂಢಿಯಾಗುವವರೆಗೂ ಸ್ವಲ್ಪ ನಿಧಾನಮಾಡಬೇಕು. ರೂಢಿಯಾದಮೇಲೆ ಎಲ್ಲ ಸರಿಹೋಗುತ್ತದೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಅಧ್ಯಕ್ಷರಲ್ಲಿ ನನಗೆ ಅಪಾರ ಗೌರವವಿದೆ. ಇಂಥ ಸಣ್ಣ ಸಣ್ಣ ವಿಷಯಗಳಲ್ಲಿ ಇಲ್ಲಿ ಕಲಿತುಕೊಳ್ಳಬೇಕಾದಂಥ ಅವಶ್ಯಕತೆ ಏನೂ ಇಲ್ಲ. ಅಂಥ ಸಂದರ್ಭವೇನೂ ಇಲ್ಲಿ ಉದ್ಭವಿಸುವುದಿಲ್ಲವೆಂದು ಗೌರವದಿಂದ ಹೇಳುತ್ತೇನೆ.

ಅಧ್ಯಕ್ಷರು.—ಗಂಟೆಹೊಡೆದರೂ ಸದಸ್ಯರು ಕುಳಿತುಕೊಳ್ಳುವುದಿಲ್ಲವೆಂದು ಅವರು ಹೇಳಿದರು; ತಮ್ಮ ಒಬ್ಬರ ವಿಷಯವಲ್ಲ. ಶ್ರೀ ಪುಟ್ಟರಾಮಯ್ಯನವರು ಕುಳಿತುಕೊಳ್ಳಲಿಲ್ಲವೆಂದು ಹೇಳಲಿಲ್ಲ. ಎಲ್ಲರ ವಿಷಯವನ್ನೂ ಹೇಳಿದ್ದಾರೆ.

I would now like to know whether it would be convenient for the Finance Minister to give his reply tomorrow?

Sri T. MARIAPPA.—I have no objection, Sir.

Mr. SPEAKER.—I think it is better that the reply will be given tomorrow. Before we rise for the day. I would like to announce that in all 50 members have taken part in the debate, of which three are Hon'ble Ministers and the rest Hon'ble Members. 27 are from the Congress party and 20 from the Opposition, 3 are lady members.

The House now rises and will meet tomorrow at 8-30 A.M.

The House then adjourned at Forty-three Minutes past Six of the Clock to meet at half past Eight of the Clock on Saturday, the 13th July 1957.

ಕರ್ನಾಟಕ ವಿಧಾನಮಂಡಲ ಗ್ರಂಥಾಲಯ
ಬೆಂಗಳೂರು. Bangalore.
ದಿನಾಂಕ Date....
ಕ್ರಮಾಂಕ No...
Karnataka Legislature Library